ಪುಸ್ತಕ ಪ್ರಪಂಚ

ಮಾರ್ಚ್-೧೯೯೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭ ಸಂಚಿಕೆ ೬

ಮಾರ್ಚಿ ೧೯೯೭

ರಕ್ಷಾಪುಟ ಚಿತ್ರಗಳು :

ಸುಭಾಷ್‌ಚಂದ್ರ ಬೋಸ್

ಪರಿವಿಡಿ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦ ೦೦೬

ಸ್ವಾತಂತ್ರ್ಯಪ್ರಿಯ ನೇತಾಜಿ

೧

ನಿಜಕ್ಕೂ ಭಾರತೀಯ ಸ್ವಾತಂತ್ರ್ಯದ ಮಹಾಶಿಲ್ಪಿಗಳು ಇಬ್ಬರೇ; ಆ ಮಹಾ ಸಂಗ್ರಾಮದ ನೇತಾರರೂ ಇಬ್ಬರೆ! ಅವರು ಅನುಸರಿಸಿದ ಮಾರ್ಗಗಳಲ್ಲಿ ಧ್ರುವಾಂತರ ವಿದ್ದರೂ, ಗುರಿ ಮಾತ್ರ ಒಂದೇ. ಚಾಳಿಚರ್ಯೆಗಳಲ್ಲಿ ಸ್ವಭಾವಲಕ್ಷಣಗಳಲ್ಲಿ ತತ್ವಸತ್ವ ಗಳಲ್ಲಿ ಅವರಿಬ್ಬರ ನಡುವೆ ಸಾಮ್ಯಕ್ಕಿಂತ ವೈಷಮ್ಯವೇ ಅಧಿಕ. ಆದರೆ ಅವರಿಬ್ಬರಲ್ಲಿ ಪರಸ್ಪರ ದ್ವೇಷಾಸೂಯೆಗಳಾಗಲಿ, ಪ್ರತೀಕಾರ ಮನೋಭಾವವಾಗಲಿ ಸೊನ್ನೆ. ಪರಸ್ಪರ ಗೌರವಾದರಗಳು ಅವರ ಬದುಕಿನ ಮಹಲ್ಲಕ್ಷಣಗಳಾಗಿದ್ದುವು. ಸ್ವಾತಂತ್ರ್ಯ ಸಾಧನೆಗೆ ಒಬ್ಬರು ಅಹಿಂಸಾತ್ಮಕ ಸತ್ಯಾಗ್ರಹಾಸ್ತ್ರವನ್ನು ಬಳಸಿದರೆ, ಮತ್ತೊಬ್ಬರು ಹಿಂಸಾತ್ಮಕ ಕ್ರಾಂತಿಮಾರ್ಗವನ್ನು ಹಿಡಿಯುತ್ತಾರೆ. ರಕ್ತಪಾತ ಪ್ರಾಣಹಾನಿಗಳ ಮೂಲಕ ಸಂಪಾದಿ ಸಿದ ಸ್ವಾತಂತ್ರ್ಯ ದೈವೀಸಮ್ಮತವಲ್ಲವೆಂಬುದು, ದ್ವೇಷಸಂತಾನಕ್ಕೆ ಅನುವಾಗುತ್ತ ದೆಂಬುದು, ಗುರಿಯಂತೆ ಮಾರ್ಗವೂ ಶುದ್ಧವಾಗಿರಬೇಕೆಂಬುದು ಒಬ್ಬರ ಸಂಕಲ್ಪ ವಾದರೆ, ಸ್ವಾತಂತ್ರ್ಯಸಮರದಲ್ಲಿ ರಕ್ತಪಾತ ಪ್ರಾಣಹಾನಿ ಅನಿವಾರ್ಯವೆಂಬುದು, ವೈಕುಂಠದ ಜಯವಿಜಯರಂತೆ ಶೀಘ್ರ ಮುಕ್ತಿಗಾಗಿ ಅಸುರೀಮಾರ್ಗವನ್ನು ಹಿಡಿಯ ಬೇಕಾಗುತ್ತದೆಂಬುದು ಮತ್ತೊಬ್ಬರ ವಾದ. ಸಕಲ ಶಸ್ತ್ರಾಸ್ತ್ರಸಜ್ಜಿತವಾದ ಸೈನ್ಯವನ್ನು ನೈತಿಕಶಕ್ತಿ ಗೆಲ್ಲಬಹುದೇ ಹೊರತು ಶಸ್ತ್ರಾಸ್ತ್ರವಂಚಿತರಾದ ಜನರಿಂದ ಸಾಧ್ಯವಾಗ ದೆಂಬುದು ಒಬ್ಬರ ಅಭಿಪ್ರಾಯವಾದರೆ, ವಿದೇಶೀ ಸಹಾಯದಿಂದಾದರೂ ಹಗೆಯನ್ನೆದು ರಿಸಬೇಕು, 'ಆಪತ್ತೆಸಗಿದಾಗಲೆ ಹಗೆಯ ಗೆಲುವುದು ವಸುಮತೀಶರ ನೀತಿ' ಎಂಬ ಕೃಷ್ಣೋಪದೇಶ ಮೆಕಿಯವೆಲ್ಲಿ ಕೌಟಿಲ್ಯ ಮಾರ್ಗವನ್ನನುಸರಿಸಬೇಕೆಂಬುದು ಮತ್ತೊಬ್ಬರ ಹೂಣ್ಕೆ. ಅವರಲ್ಲೊಬ್ಬರು ರಾಷ್ಟ್ರಪಿತ ಮಹಾತ್ಮಾಗಾಂಧಿ; ಮತ್ತೊಬ್ಬರು ನೇತಾಜಿ ಸುಭಾಷ್‌ಚಂದ್ರ ಬೋಸ್. ಗಾಂಧೀಜಿಯನ್ನು ರಾಷ್ಟ್ರಪಿತ ಎಂದು ಕರೆದವರೇ ಸುಭಾಷ್ ಚಂದ್ರಬೋಸ್. ಬೋಸ್ ಅವರ ಬಗ್ಗೆ ಗಾಂಧೀಜೀಗೂ ಮೆಚ್ಚಿಗೆ ಯಿತ್ತು.

ದ್ರಾವಿಡಾರ್ಯಮಂಗೋಲಿಯನ್ ಸಂಸ್ಕೃತಿಗಳ ಸಮ್ಮಿಲನ ಕ್ಷೇತ್ರವಾದ ಬಂಗಾಳ ದಲ್ಲಿ ಅಖಂಡ ವಿಶ್ವಶಕ್ತಿಯೆ ನಾನಾರೂಪಗಳಲ್ಲಿ ಅವತೀರ್ಣಗೊಂಡಂತೆ ಶ್ರೀರಾಮಕೃಷ್ಣ ಪರಮಹಂಸ, ಅರವಿಂದ ಘೋಷ್, ವಿವೇಕಾನಂದ, ರಾಜಾರಾಮ ಮೋಹನರಾಯ, ರವೀಂದ್ರನಾಥ ಠಾಕೂರ್, ಎಂ. ಎನ್. ರಾಯ್, ಪಿ. ಸಿ. ರಾಯ್, ಜಗದೀಶಚಂದ್ರ ಬೋಸ್, ಸುಭಾಷ್‌ಚಂದ್ರ ಬೋಸ್ ಮೊದಲಾದ ಮಹಾಮಹಿಮರು ಜನ್ಮ ತಳೆಯು ತ್ತಾರೆ. ಮೋಕ್ಷಗಾಮಿಗಳೂ ತಪಸ್ವಿಗಳೂ ಕವಿಗಳೂ ಸುಧಾರಕರೂ ಕ್ರಾಂತಿವೀರರೂ

ದೇಶಾಭಿಮಾನಿಗಳೂ ಸಾಹಸಾರ್ಜುನರೂ ಆದ ಆ ದೈವೀಪುರುಷರ ಜನ್ಮದಿಂದ ಭಾರತ ಪುನೀತವಾಯಿತು, ಕೀರ್ತಿಚಂದ್ರಿಕಾಭೋಗವಾಯಿತು. ಅಂಥ ಮಹನೀಯರ ಉದಯದಿಂದಾಗಿ ಬಂಗಾಳ ನಿಜಕ್ಕೂ ಭರತಖಂಡದ ಹೃದಯಸ್ಥಾನವಾಗಿದೆ, ಜೀವಕೇಂದ್ರವಾಗಿದೆ. ದಾಸ್ಯದ ಸಂಕೋಲೆಗಳಲ್ಲಿ ಬಂಧನಗೊಂಡಿದ್ದ ಭಾರತಮಾತೆಯ ನೂರಾರು ವರ್ಷಗಳ ತಪಸ್ಸಿನ ಫಲವೋ, ವಿವೇಕಾನಂದ ಅರವಿಂದಾದಿ ಯೋಗಪುರುಷರ ಅಭೀಪ್ಸೆಯ ಪರಿಣಾಮವೋ, ಋತದ ಇಚ್ಛೆಯೋ ಎನ್ನುವಂತೆ ೧೮೯೭ರಲ್ಲಿ ಸುಭಾಷ್‌ಚಂದ್ರ ಬೋಸರು ಜನ್ಮಧಾರಣೆ ಮಾಡುತ್ತಾರೆ. ಚುರುಕು ಬುದ್ಧಿಯ ಸುಭಾಷರ ಮೇಲೆ ಬಾಲ್ಯದಲ್ಲಿಯೇ ವಿವೇಕಾನಂದರ ಜೀವನ ಸಂದೇಶಗಳು ಅಪಾರ ಅದಮ್ಯ ಪರಿಣಾಮ ಬೀರುತ್ತವೆ.

ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ, ಪ್ರತಿಭಾಸಂಪನ್ನರೆಂದೂ ನಿಶಿತಮತಿ ಧೀಮಂತರೆಂದೂ, ಸ್ವತಂತ್ರ ವಿಚಾರವೇತ್ತರೆಂದೂ, ಎಲ್ಲಕ್ಕಿಂತ ಮಿಗಿಲಾಗಿ ಅಪ್ರತಿಹತ ನಿತ್ಯನೂತನ ಶಕ್ತಿಸಮೃದ್ಧರೆಂದೂ ಅವರು ಪ್ರಸಿದ್ಧರಾಗುತ್ತಾರೆ. ವೇದಾಂತವನ್ನು ಹೃದ್ಗತಮಾಡಿಕೊಂಡಿದ್ದ ಅವರು ವಿದ್ಯಾರ್ಥಿದಶೆಯಲ್ಲಿಯೇ ಅಧ್ಯಾತ್ಮ ಗುರುವಿನ ಅನ್ವೇಷಣೆಗಾಗಿ ಹಿಮಾಲಯದ ನಿರ್ಜನ ಪ್ರದೇಶಗಳಲ್ಲಿ ಅಲೆದಾಡುತ್ತಾರೆ. ೧೯೨೦ರಲ್ಲಿಯೇ ಇಂಡಿಯನ್ ಸಿವಿಲ್ ಪರೀಕ್ಷೆಯಲ್ಲಿ ಜಯಶೀಲರಾಗಿ, ಪರಕೀಯ ದಾಸ್ಯಕ್ಕೆ ಬೇಸತ್ತು, ದೇಶಾಭಿಮಾನದ ನೆರೆಯಿಂದ ಹೊರಬರಲಾರದೆ, ಸಿವಿಲ್ ಸೇವೆಗೆ ರಾಜೀನಾಮೆ ನೀಡಿ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುತ್ತಾರೆ. ರಾಜಕೀಯ ಸ್ವಾತಂತ್ರ್ಯವಿಲ್ಲದ ಜನ ಪಶುಸಮಾನರೆಂದೂ, ಅವರು ಜೀವಚ್ಛವಗಳೆಂದೂ ದೇಶವನ್ನು ಪಾರತಂತ್ರ್ಯದಿಂದ ಮುಕ್ತಗೊಳಿಸಲು ಅವರು ಸರ್ವತ್ಯಾಗಕ್ಕೂ ಸಿದ್ಧರಾಗುತ್ತಾರೆ. ಶತ್ರುವಿನ ಶೀಘ್ರೋಚ್ಚಾಟನೆಯೆ ಅವರ ಬದುಕಿನ ಸರ್ವಸ್ವವಾಗುತ್ತದೆ. ಆಂಗ್ಲರು ಹೇಗೆ ಹಿಂಸೆ ವಂಚನೆಗಳ ಮೂಲಕ ಸ್ವಾತಂತ್ರ್ಯವನ್ನು ಪಹರಿಸಿದರೊ ಹಾಗೆಯೆ ಹಣೆಗೆ ಹಣೆ, ಕೈಗೆ ಕೈ, ಹಲ್ಲಿಗೆ ಹಲ್ಲು, ಕಲ್ಲಿಗೆ ಕಲ್ಲಾದರೂ ಸರಿಯೆ, ಭಾರತೀಯರು ತಮ್ಮ ಸ್ವಾತಂತ್ರ್ಯವನ್ನು ಹಿಂದಕ್ಕೆ ಪಡೆದುಕೊಳ್ಳಬೇಕೆಂಬುದು ಅವರ ಸಂಕಲ್ಪ. ದೇಶಾಭಿಮಾನದಲ್ಲಿ, ಪ್ರತಾಪದಲ್ಲಿ, ಕ್ರಿಯಾಶೀಲತೆಯಲ್ಲಿ ಅವರ ಕಣ್ಮುಂದಿದ್ದ ಜಾಗತಿಕ ಆದರ್ಶಗಳೆಂದರೆ ಲೆನಿನ್, ಕಮಾಲ್ ಪಾಷಾ ಮತ್ತು ಡಿ. ವೆಲರಾ.

ಬೋಸರು ಸಾಂಖ್ಯತತ್ತ್ವವನ್ನು ಅಭ್ಯಾಸ ಮಾಡುತ್ತಾರೆ. ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಸಾಗುವ ಸ್ಪೆನ್ಸರನ ಸಿದ್ಧಾಂತವನ್ನು, ವಾನ್ ಹಾರ್ಟ್‌ಮನ್‌ನ ವಿಧಿವಾದವನ್ನು, ಬರ್ಗ್‌ಸನ್‌ನ ಸೃಜನಶೀಲ ವಿಕಾಸ ಹಾಗೂ ಸಹಜಾಂತಜ್ಞಾನ ಸಿದ್ಧಾಂತಗಳನ್ನು, ಶೋಪೆನ್ ಹಾರ್‌ನ ಋತಚಿದ್‌ವಿಲಾಸ ತತ್ತ್ವವನ್ನವರು ಬಲ್ಲವರಾದರೂ ಹೆಗೆಲಿನ ತಾರ್ಕಿಕವಿಕಾಸವಾದ ಹೆಚ್ಚು ವಿಶ್ವಾಸಾರ್ಹವಾದುದೆಂದು ಬಗೆಯುತ್ತಾರೆ. ಆದರೆ ವಾಸ್ತವತೆ ಮತ್ತು ಬದುಕುಗಳ ಪ್ರಮುಖ ಲಕ್ಷಣ ಪ್ರೇಮವೆಂಬುದು

ಅದೇ ಪ್ರಗತಿಮೂಲವೆಂಬುದು ಅವರ ದೃಢ ವಿಶ್ವಾಸ. ದೇಶಾಭಿಮಾನದಿಂದ ಕೂಡಿದ ಮಾನವೀಯತೆಯೆ ಅವರ ಗುಣವಿಶೇಷ. ಮನುಕುಲದ ಮತಿಕೋಶದಲ್ಲಿ ಮೂಡಿದ ಭಾವನೆಗಳು ಅಂತರಿಕ್ಷದಲ್ಲಿ ನಿರಂತರವಾಗಿ ಸಂಚರಿಸುತ್ತವೆ. ಅವುಗಳ ಶಕ್ತಿ ಅಮೇಯ. ಸೃಷ್ಟಿಗೆ ಅವೇ ಮೂಲ. ಧ್ಯಾನಶೀಲವಾದ ಮನಸ್ಸು ಆ ಭಾವನಾತರಂಗಗಳನ್ನು ಆಕರ್ಷಿಸಬಹುದೆಂಬುದು ವಿವೇಕಾನಂದರು ಕಂಡುಕೊಂಡಿರುವ ಸತ್ಯ. ಬೋಸರಿಗೂ ಆ ಸತ್ಯದಲ್ಲಿ ವಿಶ್ವಾಸವುಂಟು.

ಶಂಕರಾಚಾರ್ಯರ ಮಾಯಾವಾದವನ್ನವರು ಒಪ್ಪುವುದಿಲ್ಲ. ಶ್ರೀರಾಮಕೃಷ್ಣ ಪರಮಹಂಸರ ಸಂದೇಶವೇ ಅವರಿಗೆ ಪ್ರಿಯ. ಭರತಖಂಡದ ಅವನತಿಗೆ ಅವರ ಹತಶೌರ್ಯವೇ ಮೂಲಕಾರಣವೆಂಬುದನ್ನವರು ಬಲ್ಲರು. ಅನ್ಯಾಯ ಅಧರ್ಮ ದಾಸ್ಯಗಳನ್ನು ಖಡ್ಗ ಪ್ರಯೋಗದಿಂದಾದರೂ ನಿವಾರಿಸಬೇಕೆಂಬುದು ಅವರ ನಿಲವು. ಮೂಢನಂಬಿಕೆಗಳು, ಅವಿದ್ಯೆ ಮತ್ತು ಜಾತೀಯತೆಗಳು ಭರತಖಂಡದ ಜೀವಸತ್ವವನ್ನು ಹೀರುತ್ತಿರುವ ಅರ್ಬುದ ವ್ರಣಗಳೆಂದವರು ಘೋಷಿಸುತ್ತಾರೆ. ಗಾಂಧೀಜೀಯ ರಾಜಕೀಯ ತಂತ್ರ ವಿಧಾನಗಳು ಅವರಿಗೆ ಹಿಡಿಸುವುದಿಲ್ಲ. ರಾಜಕೀಯಕ್ಕೆ ಧರ್ಮ ಅಡಿಪಾಯವಾಗಿರ ಬೇಕೆಂಬ ಪ್ಲೇಟೋವಿನ ಉಪದೇಶವನ್ನವರು ಮೆಚ್ಚುವುದಿಲ್ಲ. ಸೀಸರ್‌ನಲ್ಲಿ ಕ್ರಿಸ್ತ ನನ್ನಾಗಲಿ, ಕ್ರಿಸ್ತನಲ್ಲಿ ಸೀಸರ್‌ನನ್ನಾಗಲಿ ಕಾಣಲಾಗದು. ರಾಜಕೀಯ ಭೂಮಿಕೆಯೆ ಬೇರೆ ಆಶ್ರಮದ ವಾತಾವರಣವೆ ಬೇರೆ; ರಾಜಕೀಯ ವೇಷವೇ ಬೇರೆ, ಮಠಗಳ ಪಾತ್ರವೇ ಬೇರೆ. ಅರವಿಂದರು ರಾಜಕೀಯದಲ್ಲಿಯೆ ಮುಂದುವರಿದಿದ್ದರೆ ಅವರು ಯೋಗಿಯಾಗುತ್ತಿರಲಿಲ್ಲ. ಅದನ್ನರಿತೇ ಅವರು ಬಹುಬೇಗನೆ ರಾಜಕೀಯವನ್ನು ತ್ಯಜಿಸಿ, ಯೋಗಮಾರ್ಗವನ್ನು ಹಿಡಿದದ್ದು. ಬೋಸರ ಬಾಲ್ಯಕಾಲದ ನಡೆನುಡಿಗಳನ್ನು ನೋಡಿದವರಿಗೆ ಅವರು ಯೋಗಿಗಳಾಗುತ್ತಾರೆಂದೇ ಯೋಚನೆಯಾಗಿತ್ತು. ಆದರವರು ಭರತಖಂಡದ ಸ್ವಾತಂತ್ರ್ಯದಲ್ಲಿ ಆತ್ಮಸ್ವಾತಂತ್ರ್ಯವನ್ನೂ, ಲೋಕಹಿತದಲ್ಲಿ ಆತ್ಮಹಿತ ವನ್ನೂ ಕಂಡುಕೊಳ್ಳುವ ದೃಷ್ಟಿಯಿಂದ, ರಾಜಕೀಯ ಮಾರ್ಗವನ್ನನುಸರಿಸುತ್ತಾರೆ. ಯೋಗಿಗಳಿಗೂ ಲೌಕಿಕ ವ್ಯವಹಾರಗಳಿಗೂ, ಆಶ್ರಮವಾಸಿಗಳಿಗೂ ರಾಜಕಾರಣಿಗಳಿಗೂ ಯಾವುದೇ ಸಂಬಂಧವಿರಬಾರದು. ರಾಜಕಾರಣಿ ಖಂಡಿತವಾಗಿಯೂ ಯೋಗಿಯಾಗ ಲಾರ. ರಾಜಕೀಯ ವ್ಯವಹಾರಗಳಲ್ಲಿ ತಲೆಹಾಕುವ ಯೋಗಿಯಾಗಲಿ ಮಠಾಧಿಪತಿ ಯಾಗಲಿ ಖಂಡಿತವಾಗಿಯೂ ಪೂಜಾರ್ಹನಲ್ಲ. ಅಂಥವನು ಕಾವಿವೇಷ ಧರಿಸಿದ ಲೌಕಿಕ ವ್ಯಕ್ತಿಯೇ ಸರಿ. ರಾಜಕಾರಣಿಗಳಿಗೆ ಬುದ್ಧಿ ಹೇಳುವ ಯೋಗ್ಯತೆ ತನಗಿದೆಯೆಂದು ಹೇಳಿಕೊಳ್ಳುವ ಮಠಾಧಿಪತಿ ಹುಚ್ಚನಿರಬೇಕು, ಇಲ್ಲವೆ ಅಹಂಕಾರಿಯಿರಬೇಕು; ಅಥವಾ ಸೋಗಲಾಡಿ ಪ್ರಚ್ಛನ್ನರಾಜಕಾರಣಿಯಿರಬೇಕು. ವೇಶ್ಯೆಯರ ವಠಾರದಲ್ಲಿ ವಾಸಮಾಡುವವನನ್ನು ಯೋಗಿ ಎನ್ನಲಾದೀತೆ? ಅಂತೆಯೇ ಮಠಗಳ ಆದೇಶದಂತೆ ನಡೆಯುವ ರಾಜಕಾರಣಿ ಸೆಕ್ಯೂಲರ್ ರಾಜ್ಯವನ್ನು ಕಟ್ಟಲಾರ. ಬೋಸ್‌ರಿಗೆ

ಇವೆಲ್ಲವೂ ಗೊತ್ತಿತ್ತು. ಆದ್ದರಿಂದಲೇ ಅವರು ಹೇಳಿದ್ದು : ಅಹಿಂಸೆಯಾಗಲಿ, ಧರ್ಮ
ವಾಗಲಿ, ನೈತಿಕತೆಯಾಗಲಿ ಔಚಿತ್ಯವಿಚಾರಿ ರಾಜಕೀಯದಲ್ಲಿ ವಿಜೃಂಭಿಸಬಾರದು
ರಾಜಕೀಯ ಕ್ಷೇತ್ರದ ವಿಧಿವಿಧಾನಗಳಿಗೆ ಆದ್ಯತೆಯಿರಬೇಕು ; ಪ್ರಧಾನಸ್ಥಾನವಿರಬೇಕು
ಕಟುಕನ ಅಂಗಡಿಯಲ್ಲಿ ಬಸವಪುರಾಣ ಓದಬಾರದು ; ಮಲ್ಲಿಕಾಫರ್ ಸೋಮನಾ
ದೇವಾಲಯದ ಮೇಲೆ ದಂಡೆತ್ತಿ ಬಂದಾಗ ಧ್ರಾಂ ಧ್ರೀಂ ಧ್ರೂಂ ಮಂತ್ರ ಏನ
ಮಾಡಲಾರದು ; ಚೀನೀಯರು ಇಂಡಿಯಾದ ಮೇಲೆ ಧಾಳಿಮಾಡಿದಾಗ ಹಿಂದೂ ಚೀನಿ
ಭಾಯಿ ಭಾಯಿ ಎಂದು ಅರಚಿದರೆ ಲಾಭವಾಗದು. ಪ್ರಾಣಿಸಂರಕ್ಷಣಾ ಶಪಥಗಾರರ
ಮತ್ತು ಅಹಿಂಸಾ ವಾದಿಗಳು ಹಾಲು ಕುಡಿಯುವುದಿಲ್ಲವೆ? ಎತ್ತಿನ ಬಂಡಿಗಳಲ್ಲಿ ಸವಾ
ಮಾಡುವುದಿಲ್ಲವೆ? ಸರ್ಕಸ್ಸು ನೋಡುವುದಿಲ್ಲವೆ? ಊರಿನ ಎಲ್ಲ ಪ್ರಾಣಿಗಳನ್ನು
ಕಾಡಿಗೋಡಿಸುವರೆ? ಯುದ್ಧ ಮಾಡೆಂದು ಶ್ರೀಕೃಷ್ಣನೇ ಅರ್ಜುನನನ್ನು ಪ್ರಚೋದಿ
ಲಿಲ್ಲವೆ? ಸಮಯ ಸಂದರ್ಭಾನುಸಾರಿಯಾಗಿ ರಾಜಕಾರಣ ವರ್ತಿಸಬೇಕಾಗುತ್ತದೆ
ಇಪ್ಪತ್ತೊಂದನೆಯ ಶತಮಾನದಲ್ಲಿ ಕಾಲಿಡುವಾಗಲಂತು ಮಾನವ ತನ್ನ ಮನೋಧರ
ವನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ರಾಜಕೀಯದಲ್ಲಿ ವಸ್ತುಸ್ಥಿ
ಮುಖ್ಯವೆಂದು ಸುಭಾಷ್ ಹೇಳುತ್ತಾರೆ. ಅವರ ಈ ವಾದವನ್ನು ರಾಜಕೀಯ
ವಾಸ್ತವತಾ ಸಿದ್ಧಾಂತವೆಂದು ಕರೆಯಬಹುದು. ಚೌಕಾಶಿ, ರಾಜಿ, ಸಹನೆ, ತಾಳ್ಮೆ
ಅನುಕೂಲಸಿಂಧು, ಸಮಯಪ್ರಜ್ಞೆ, ಸ್ವದೇಶಹಿತ, ಚತುರತೆ, ಚಾಕಚಕ್ಯತೆ, ನಯ
ಗದರು, ಗರ್ಜನೆ, ಹೊಗಳಿಕೆ, ಸಂಚುಹೊಂಚು, ಲಾಗಪಟ್ಟು, ಗೂಢಕಾರ್ಯ—
ಇವೆಲ್ಲವೂ ರಾಜಕೀಯ ವಾಸ್ತವತಾ ಸಿದ್ಧಾಂತದ ವಿಧಿವಿಧಾನಗಳು.

ಎಡ್ಮಂಡ್ ಬರ್ಕ್ ಪ್ರತಿಪಾದಿಸುವ ಉಪಾಯವೇದಾಂತ ಬೋಸ್‌ರಿಗೆ ಹಿಡಿಸದು
ಸ್ವಾತಂತ್ರ್ಯಸಿದ್ಧಿಯಾಗಲಿ, ರಾಷ್ಟ್ರ ಪುನರ್ನಿರ್ಮಾಣವಾಗಲಿ ರಾಜಿಗವಕಾಶವಿಲ್ಲ
ಆದರ್ಶಸಾಧನೆಯಿಂದ, ತ್ಯಾಗ ಕಷ್ಟ ಸಹಿಷ್ಣುತೆಗಳಿಂದ ಮಾತ್ರ ಸಾಧ್ಯವೆಂಬುದು ಅವ
ಖಚಿತಾಭಿಪ್ರಾಯ. ಕ್ರಾಮ್‌ವೆಲ್‌ನ ಪ್ರಯೋಗ ಮತ್ತು ಸ್ವಾಮಿ ವಿವೇಕಾನಂದ
ಸಂದೇಶ ಅವರ ಕಣ್ಮುಂದಿವೆ. ರಾಜಕೀಯ ಹೋರಾಟದ ಜತೆಜತೆಗೆ ಸಾಮಾಜಿಕಾಂದೋ
ಲನವೂ ನಡೆಯಬೇಕೆಂಬುದು ಅವರ ತೀರ್ಮಾನ. ರೈತ-ದಣಿ, ಕಾರ್ಮಿಕ-ಯಜಮಾ
ಬಡವ-ಧನಿಕರ ನಡುವಣ ಹೋರಾಟವೂ ರಾಜಕೀಯ ಜಾಗೃತಿಯ ಜತೆಯಲ್ಲಿಯೆ
ಜರುಗಬೇಕು. ದಣಿ ಯಜಮಾನರು ಆಂಗ್ಲರ ಪಕ್ಷವನ್ನು ಸೇರದಿದ್ದರೆ. ಎಂದೋ ಆಂಗ್ಲ
ನಿಸ್ಸಹಾಯಕರಾಗಿ ನಿಶ್ಶಕ್ತರಾಗುತ್ತಿದ್ದರೆಂಬುದು ಅವರ ಭಾವನೆ.

ಬೋಸ್‌ರು ಮಾರ್ಕ್ಸ್ ಅನುಯಾಯಿಯಲ್ಲದಿದ್ದರೂ, ವಾಮಪಂಥದವರ
ಬಹುದಾದ ಸಮಾಜವಾದಿಗಳು. ಅವರ ವಾಮಪಂಥೀಯತೆ ದಾರಿದ್ರ್ಯ ನಿರಕ್ಷರ
ಭೂಪ್ರಭುತ್ವಗಳ ನಿವಾರಣೆಗೆ ಸಂಬಂಧಿಸಿದುದಾಗಿತ್ತು. ಕೃಷಿ ಮತ್ತು ಕೈಗಾರಿ
ಕ್ಷೇತ್ರಗಳನ್ನು ಸಮಾಜೀಕರಣಮಾಡಬೇಕೆಂಬ ಬಗ್ಗೆ ಅವರಿಗೆ ಸಂಶಯವಿರಲಿ

ವೇದಾಂತದಲ್ಲಿ ಮುಳುಗೆದ್ದಿದ್ದ ಅವರಿಗೆ ಮಾರ್ಕ್ಸ್‌ನ ಬಗ್ಗೆ ಮೆಚ್ಚುಗೆಯಿದ್ದರೂ ಕಮ್ಯೂನಿಸಮ್ ಆಕರ್ಷಕವಾಗಿರಲಿಲ್ಲ. ಮತವಿರೋಧಿಯೂ ನಾಸ್ತಿಕವಾದಪರವೂ ಆದ ಕಮ್ಯೂನಿಸಮ್ ಆಶ್ರಮ ಮಠ ದೇವಾಲಯ ಚರ್ಚು ಮಸೀದಿಗಳಿಂದ ತುಂಬಿರುವ, ಬಹುದೇವತೋಪಾಸನೆಯ ಭರತಖಂಡದಲ್ಲಿ ಆಳವಾಗಿ ಬೇರೂರಲಾರ ದೆಂಬುದು ಅವರ ಅಭಿಪ್ರಾಯ. ಮಾರ್ಕ್ಸ್ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಒತ್ತು ಕೊಟ್ಟವನೇ ಹೊರತು ರೈತರ ಸಮಸ್ಯೆಗಳ ಕಡೆಗೆ ಹೆಚ್ಚು ಗಮನ ಹರಿಸಲಿಲ್ಲ. ಇಂಡಿಯಾ ದೇಶ ಕೃಷಿಪ್ರಧಾನ ರಾಷ್ಟ್ರವೆಂಬುದನ್ನು ಮರೆಯಲಾಗದು. ಗಾಂಧೀಜೀಯ ವ್ಯಕ್ತಿತ್ವದ ಬಗ್ಗೆ ಅವರಿಗೆ ಅಪಾರ ಗೌರವವಿದ್ದರೂ, ಗಾಂಧಿವಾದದಲ್ಲಿ ವಿಶ್ವಾಸವಿರ ಲಿಲ್ಲ. ರಾಜಕೀಯದಲ್ಲಿ ಬಾಹ್ಯಪ್ರಮಾಣಗಳಿಗೆ ಮಹತ್ವವಿರಬೇಕಾದ್ದರಿಂದ ಅಂತರ್ ವಾಣಿಗೆ ಸ್ಥಾನವಿಲ್ಲವೆಂಬುದೇ ಅವರ ಮತ. ಅಹಿಂಸಾತ್ಮಕವಾದ ಸತ್ಯಾಗ್ರಹದಿಂದ ನೈತಿಕ ವಾತಾವರಣ ಸೃಷ್ಟಿಯಾಗುವುದಾದರೂ, ಜನಮನ ಸ್ಪಂದಿಸಬಹುದಾದರೂ, ಆಸುರೀಪ್ರವೃತ್ತಿಯ ಸಾಮ್ರಾಜ್ಯದಾಹತಪ್ತರಾದ ಆಧುನಿಕ ಶಸ್ತ್ರಾಸ್ತ್ರಸಜ್ಜಿತರಾದ ದುಷ್ಟಪ್ರಭುಗಳನ್ನು ಚತುರೋಪಾಯದಿಂದಲ್ಲದೆ ನಿಗ್ರಹಿಸಲಾಗದೆಂಬುದೇ ಅವರ ಸಿದ್ಧಾಂತ. ದಾರಿದ್ರ್ಯ ನಿರಕ್ಷರತೆಗಳ ದಾರುಣರೋಗಗಳಿಂದ ನರಳುತ್ತಿರುವ, ಶಸ್ತ್ರಾಸ್ತ್ರ ವಿಹೀನರಾದ ಜನ ಮುಖಾಮುಖಿಯಾಗಿ ಜಗತ್ತಿನ ಮಹಾ ಪ್ರಚಂಡಶಕ್ತಿಯನ್ನೆದುರಿಸ ಲಾಗದೆಂದೂ, ಸತ್ಯಾಗ್ರಹರೂಪದ ತಪಸ್ಸಿನ ಮೂಲಕ ರಾಷ್ಟ್ರಕುಂಡಲಿನಿಯನ್ನೆಚ್ಚರಿಸಿ, ಆತ್ಮಶಕ್ತಿಯ ಮೂಲಕವೇ ಭೌತಿಕಶಕ್ತಿಗಳನ್ನು ಗೆಲ್ಲಬೇಕೆಂಬ ಗಾಂಧೀಜಿಯ ಸಂಕಲ್ಪವೂ ಆಗಿನ ಜಾಗತಿಕ ಸನ್ನಿವೇಶದಲ್ಲಿ ತಿರಸ್ಕರಣೀಯವಲ್ಲ. ರಾಜಕೀಯ ಕೌಶಲ, ಅಂತರ ರಾಷ್ಟ್ರೀಯ ಪ್ರಚಾರ ಮತ್ತು ಬಲಿಷ್ಠರಾಷ್ಟ್ರಗಳ ಸಹಕಾರಗಳಿಂದ ಇಂಗ್ಲಿಷರನ್ನು ದೇಶವಿಂದ ಹೊಡೆದಟ್ಟಬೇಕೆಂಬುದು ಬೋಸ್‌ರ ನಿರ್ಧಾರ. ಪರರ ನೆರವಿಲ್ಲದೆ ಸ್ವಶಕ್ತಿ ಯಿಂದಲೇ ಹಗೆಯನ್ನು ಗೆಲ್ಲಬೇಕೆಂಬ ಸ್ವಾಭಿಮಾನ ಗಾಂಧೀಜಿಯ ಬದುಕಿನ ಭಾಗ ವಾಗಿತ್ತು.

ಉಗ್ರದೇಶಾಭಿಮಾನಿಯೂ ಭಾವುಕರೂ ಶೀಘ್ರ ಫಲಾಸಕ್ತರೂ ಆದ ಬೋಸರ ಮನಸ್ಸು ಸಹಜವಾಗಿಯೇ ಕಮ್ಯೂನಿಸ್ಟ್ ಮತ್ತು ಫ್ಯಾಸಿಸ್ಟ್ ವಿಧಾನಗಳ ಕಡೆಗೆ ವಾಲುತ್ತದೆ. ವ್ಯಕ್ತಿನಿಷ್ಠೆಗಿಂತ ರಾಷ್ಟ್ರಪಾರಮ್ಯದಲ್ಲಿ, ಪ್ರಜಾಪ್ರಭುತ್ವಕ್ಕಿಂತ ಪಕ್ಷಾಡಳಿತ ದಲ್ಲಿ, ಚುನಾಯಿತ ನಾಯಕತ್ವಕ್ಕಿಂತ ಸರ್ವಾಧಿಕಾರದಲ್ಲಿ, ಸಾಂಪ್ರದಾಯಕ ಅಭಿವೃದ್ಧಿ ಮಾರ್ಗಗಳಿಗಿಂತ ವೈಜ್ಞಾನಿಕ ಮಾರ್ಗಗಳಲ್ಲಿ ಆ ಎರಡೂ ರಾಜಕೀಯ ಧರ್ಮಗಳ ಸಾಮ್ಯಗಳನ್ನವರು ಗುರುತಿಸುತ್ತಾರೆ, ಅವೆರಡೂ ಧರ್ಮಗಳ ಅಂತಃಸತ್ವದ ಸಮ್ಮಿಲನ ದಲ್ಲಿ ಅವರಿಗೆ ವಿಶ್ವಾಸವಿದ್ದುದರಿಂದ ಅವರನ್ನು ಫ್ಯಾಸಿಸ್ಟ್ ಎಂದು ಕರೆಯುವವರೂ ಉಂಟು. ಆದರೆ ಸುಭಾಷರ ವ್ಯಕ್ತಿತ್ವ ವೇದಾಂತದ ಸಾರ ಸತ್ವದಿಂದ ಪುಷ್ಟಿಗೊಂಡ ದ್ದೆಂಬುದನ್ನು ಮರೆಯುವಂತಿಲ್ಲ. ಹೆಗೆಲ್‌ನ ತರ್ಕಬದ್ಧ ಭೌತಿಕ ವಿಕಾಸವಾದ,

ವೈಷ್ಣವೀಯ ಪ್ರೇಮಸಿದ್ಧಾಂತ ಮತ್ತು ಸಾಮ್ಯವಾದಗಳ ಮೇಳವೇ ಬೋಸ್‌ವಾದವೆನ್ನಬಹುದು. ಆದರವರು ಭಾರತೀಯ ಸ್ವಾತಂತ್ರ್ಯ ಸಾಧನೆಗಾಗಿ ಫ್ಯಾಸಿಸ್ಟ ನಾಯಕರ ಸಹಾಯ ಪಡೆದದ್ದಂತು ನಿಜ. ಮುಖ್ಯವಾಗಿ ರಾಜಕೀಯ ವಾಸ್ತವತೆ ಬೋಸ್‌ವಾದದ ತಿರುಳೆನ್ನಬಹುದು.

೨

೧೯೨೧ರಲ್ಲಿಯೆ ಅವರು ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದರೂ, ಕೂಡಲೇ ಸ್ವರಾಜ್ಯ ಪಕ್ಷದ ಧುರೀಣರಾಗುತ್ತಾರೆ. ಆ ಪಕ್ಷದ ಸಂಸ್ಥಾಪಕರಾದ ಸಿ. ಆರ್. ದಾಸ್‌ರನ್ನವರು ತಮ್ಮ ರಾಜಕೀಯ ಗುರುಗಳೆಂದೇ ಸ್ವೀಕರಿಸುತ್ತಾರೆ. ಗಾಂಧೀ ಕಾರ್ಯಕ್ರಮಗಳ ಬಗ್ಗೆ ಆ ಪಕ್ಷಕ್ಕೆ ಸಹಾನುಭೂತಿ ಇರಲಿಲ್ಲ. ಸುಭಾಷರ ಚಟುವಟಿಕೆಗಳಲ್ಲಿ ಸಾಮ್ರಾಜ್ಯಶಾಹಿಗೆ ವಿಪತ್ತು ಕಂಡದ್ದರಿಂದ ಸರ್ಕಾರ ಅವರನ್ನು ೧೯೨೪ ರಿಂದ ೧೯೨೭ರ ವರೆಗೆ ಬರ್ಮಾದ ಸೆರೆಮನೆಯಲ್ಲಿ ಕೂಡಿಹಾಕುತ್ತಾರೆ. ೧೯೩೮ರ ಫೆಬ್ರವರಿಯಲ್ಲಿ ನಡೆದ ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಆಯ್ಕೆಗೊಳ್ಳುತ್ತಾರೆ. ಮರುವರ್ಷದ ಅಧಿವೇಶನ ತ್ರಿಪುರಾದಲ್ಲಿ ನಡೆಯುತ್ತದೆ. ಅಧ್ಯಕ್ಷ ಪದವಿಗೆ ಡಾ॥ ಪಟ್ಟಾಭಿ ಸೀತಾರಾಮಯ್ಯನವರನ್ನು ಗಾಂಧೀಜಿ ಸೂಚಿಸುತ್ತಾರೆ. ಅವರಿಗೆ ವಿರುದ್ಧವಾಗಿ ಬೋಸರು ನಿಂತು ಜಯಡಿಂಡಿಮವನ್ನು ಬಾರಿಸುತ್ತಾರೆ. ಆ ಪುರುಷಸಿಂಹನ ಜನಪ್ರಿಯತೆಗೆ ಅನ್ಯ ಸಾಕ್ಷಿ ಅನಾವಶ್ಯಕ. ಅವರು ಭಾರತೀಯ ಯುವ ಜನಾಂಗದ ಕಣ್ಮಣಿಯಾಗಿ ವಿಜೃಂಭಿಸುತ್ತಾರೆ. ಆದರೆ ಮಹಾತ್ಮಗಾಂಧಿಯವರು ಸೋಲನ್ನೊಪ್ಪಿಕೊಳ್ಳುತ್ತಾರೆಯೆ? ನೆಹರೂ, ಪಟೇಲರಿಗೂ ಬೋಸರ ಅಖಂಡ ಜಯ ಪಥ್ಯವಾಗುವುದಿಲ್ಲ. ಕಾಂಗ್ರೆಸ್ಸಿನೊಳಗೆ ಅಂತರ್ಯುದ್ಧ ಪ್ರಾರಂಭವಾಗುತ್ತದೆ. ಹಳಬರು ಬೋಸರ ಮೇಲೆ ಅಸಹಕಾರ ಚಳುವಳಿ ಹೂಡುತ್ತಾರೆ. ಗಾಂಧೀಜಿಯ ತಾಳಕ್ಕೆತಕ್ಕಂತೆ ಹೆಜ್ಜೆ ಹಾಕದಿದ್ದುದೆ ಮಹಾಪರಾಧವಾಗುತ್ತದೆ. ಆದರೆ ಬೋಸರು ಒಂಟಿಯಾಗಿ ಕಾಳಗ ನಡಸಬಲ್ಲರೆ ಹೊರತು, ಎಂಥ ಶಕ್ತಿಗೂ ಮಣಿಯುವಂಥ ಗಂಡಸರಲ್ಲ. ಕೊನೆಗೆ ಬೋಸರು ಗಾಂಧೀಜಿಯ ವೃತ್ತಿಕ್ಕೆ ಸಗ್ಗದೆ, ರಾಜಿಗೊಪ್ಪದೆ, ಕಾಂಗ್ರೆಸ್ಸಿಗೆ ರಾಜೀನಾಮೆ ನೀಡಿ ಫಾರ್‌ವರ್ಡ್ ಬ್ಲಾಕ್ ಎಂಬ ಪಕ್ಷವನ್ನು ಸ್ಥಾಪಿಸುತ್ತಾರೆ.

ಸಂಪೂರ್ಣ ಸ್ವಾತಂತ್ರ್ಯ ಮತ್ತು ಸಾಮ್ರಾಜ್ಯದಾಹಿಗಳ ಉಚ್ಚಾಟನೆ ಅವರ ಹೊಸ ಪಕ್ಷದ ಧ್ಯೇಯವಾಗುತ್ತದೆ. ಅತ್ಯಾಧುನಿಕ ಸಮಾಜವಾದಿ ರಾಷ್ಟ್ರದ ನಿರ್ಮಾಣ, ರಾಷ್ಟ್ರದ ಆರ್ಥಿಕ ಪುನರುತ್ಥಾನಕ್ಕಾಗಿ ಬಹುಪ್ರಮಾಣದ ವೈಜ್ಞಾನಿಕ ವಿಧಾನದ ಉತ್ಪತ್ತಿ, ಪ್ರತಿಯೊಬ್ಬ ಪ್ರಜೆಗೂ ಸಮಾನ ಹಕ್ಕುಗಳ ಅಧಿಕಾರ, ಮತೀಯ ಸ್ವಾತಂತ್ರ್ಯ, ಎಲ್ಲರಿಗೂ ಭಾಷಿಕ ಮತ್ತು ಸಾಂಸ್ಕೃತಿಕ ಸ್ವಾಯತ್ತತೆ—ಇವು ಪಕ್ಷದ ಪ್ರಣಾಳಿಕೆಯ ಪ್ರಮುಖ ಸೂತ್ರಗಳು. ಗಾಂಧಿ ವಿಧಾನದ ಮೂಲಕ ಸ್ವಾತಂತ್ರ್ಯ ಕೈಗೂಡಲಾರದೆಂಬುದು ಅವರ ಅಚಲನಿಲವು.

ದ್ವಿತೀಯ ಮಹಾಯುದ್ಧ ಪ್ರಾರಂಭವಾಗುತ್ತಿದ್ದಂತೆ ತಮ್ಮ ವ್ಯವಸ್ಥೆಯನ್ನು ಅವ್ಯವಸ್ಥೆಗೊಳಿಸಬಹುದೆಂಬ ಭಯದಿಂದ ಬೋಸರನ್ನು ಆಳರಸರು ಸೆರೆಮನೆಯ ಬೋನಿನಲ್ಲಿ ಕೂಡಿಹಾಕುತ್ತಾರೆ. ಅವರಂಥ ಸಾಹಸವೀರರಿಗೆ ಯಾವ ಸಾಮ್ರಾಜ್ಯಶಕ್ತಿ ತಾನೆ ಲೆಕ್ಕ? ಆಪತ್ತೆಸಗಿದಾಗಲೆ ಶತ್ರುವನ್ನು ಗೆಲ್ಲಬೇಕೆಂಬ ರಾಜನೀತಿಯನ್ನು ಕಾರ್ಯಗತಗೊಳಿಸುವಸಲುವಾಗಿ ೧೯೪೦ನೆಯ ಸಂವತ್ಸರದ ಡಿಸೆಂಬರ್ ತಿಂಗಳಲ್ಲಿ ಅವರು ಜೈಲಿನಿಂದ ತಪ್ಪಿಸಿಕೊಂಡು, ಗೂಢಚರ್ಯೆಯಲ್ಲಿ ಪ್ರಗಾಢ ಪ್ರವೀಣರಾದ ಆಂಗ್ಲಾಧಿಕಾರಿಗಳಿಗೆ ಮಣ್ಣುಮುಕ್ಕಿಸಿ, ವೇಷಾಂತರದಿಂದ ರಾಷ್ಟ್ರದ ಗಡಿದಾಟಿ, ೧೯೪೧ರ ಮಾರ್ಚಿ ತಿಂಗಳಲ್ಲಿ ವಿಮಾನದಲ್ಲಿ ಬರ್ಲಿನ್ ತಲುಪುತ್ತಾರೆ. ಪೆಷಾವರ್ ಕಾಬೂಲ್‌ಗಳ ಮೂಲಕ ಅವರು ಬರ್ಲಿನ್ ತಲುಪಿದ ಸಾಹಸಯಾತ್ರೆ ಗ್ರೀಕ್ ಭಾರತೀಯ ಪುರಾಣಪುರುಷರನ್ನು ನೆನಪಿಗೆ ತಂದುಕೊಡುವ ರೋಮಾಂಚನಕಾರಿ ಮಹಾಗಾಥೆ. ಅವರ ಅನಂತರದ ವರ್ಣಮಯ ಘಟನಾಕೀರ್ಣ ಇತಿಹಾಸ ಕಲ್ಪನಾದರಿದ್ರರ ಚೇತನಶೂನ್ಯ ದುರ್ಬಲರ ಊಹೆಗೆ ನಿಲುಕುವಂಥದಲ್ಲ. ಅವರು ಬರ್ಲಿನ್‌ನಿಂದ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧವಾಗಿ ಪ್ರಚಂಡ ಪ್ರಚಾರವನ್ನು ಹರಿಸುತ್ತಾರೆ. ೧೯೪೩ರಲ್ಲಿ ಅವರು ಜಪಾನನ್ನು ತಲುಪಿ, ಅರವತ್ತು ಸಾವಿರಕ್ಕೂ ಮಿಕ್ಕ ಆಜಾದ್ ಹಿಂದ್ ಫೌಜ್, ಅರ್ಥಾತ್ ಭಾರತೀಯ ರಾಷ್ಟ್ರೀಯ ಸೈನ್ಯ (ಐ.ಎನ್.ಎ)ವನ್ನು ಸಂಘಟಿಸಿ, ದೆಹಲಿಚಲೋ ಕರೆಯನ್ನು ಕೊಟ್ಟದ್ದಲ್ಲದೆ, ಸ್ವತಂತ್ರ ಭಾರತದ ತಾತ್ಕಾಲಿಕ ಸರ್ಕಾರವನ್ನು ರಚಿಸುತ್ತಾರೆ. ಅದರಿಂದಾಗಿ ಆಂಗ್ಲರಿಗೆ ಆಸನ ಕಂಪನವಾಗುತ್ತದೆ. ಬೋಸರ ಸೈನ್ಯ ಇಂಡಿಯಾವನ್ನು ಪ್ರವೇಶಿಸಿದಾಗ, ಭಾರತೀಯರ ನಾಡಿಗಳಲ್ಲಿ ವಿದ್ಯುಚ್ಛಕ್ತಿ ಹರಿದಂತಾಗುತ್ತದೆ. ಅವರು ತಮ್ಮ ಸೈನ್ಯಕ್ಕೆ ಮಾತ್ರವಲ್ಲ, ಭಾರತೀಯರಿಗೆ ಪ್ರೀತಿಯ ಹೆಮ್ಮೆಯ ನೇತಾಜಿಯಾಗುತ್ತಾರೆ. ದುರದೃಷ್ಟವಶಾತ್ ೧೮-೮-೧೯೪೫ರಂದು ಟೋಕಿಯೋಗೆ ಹಿಂದಿರುಗುತ್ತಿದ್ದಾಗ, ಫಾರ್ಮೋಸಾದಲ್ಲಿ ಘಟಿಸಿದ ವೈಮಾನಿಕದುರಂತದಲ್ಲವರು ಮರಣವನ್ನಪ್ಪುತ್ತಾರೆ. ಹುತಾತ್ಮರಾಗುತ್ತಾರೆ. ಆ ಮಹಾವೀರನ ಮರಣದಿಂದ ರಾಷ್ಟ್ರ ಪಾರ್ಶ್ವವಾಯು ಪೀಡಿತವಾಗುತ್ತದೆ. ಅವರ ಸ್ಥಾನವನ್ನು ತುಂಬುವಂಥ ಪ್ರತಿಭಾಸಂಪನ್ನ ಚೈತನ್ಯಶಾಲಿ ತೇಜಸ್ವಿ ದೇಶಾಭಿಮಾನಿ ಮಹಾತ್ಯಾಗಿ ಇನ್ನೂ ಹುಟ್ಟಬೇಕಾಗಿದೆ.

ಭರತ ಖಂಡದ ಇತಿಹಾಸದಲ್ಲಿಯೇ ಸುಭಾಷರಂಥ ವ್ಯಕ್ತಿ ಅಪರೂಪ. ಭಾರತಿಯ ತಪಸ್ಸೇ, ಭಾರತೀಯರ ಅಭೀಪ್ಸೆಯೇ ಸಾಕಾರಗೊಂಡಂತಿದ್ದ, ನಚಿಕೇತ, ಕರ್ಣ, ಅಭಿಮನ್ಯು, ಅಲೆಕ್ಸಾಂಡರ್, ಕ್ರಾಮ್‌ವೆಲ್, ಮೆಜಿನಿ, ಹರ್ಷವರ್ಧನ, ನೃಪತುಂಗರ ಜೀವದ್ರವ್ಯ ರಾಶಿಯೇ ಮೂರ್ತಿಗೊಂಡಂತಿದ್ದ ಸುಭಾಷರನ್ನು ಇಂದಿನ ಮತ್ತು ಮುಂದಿನ ಜನಾಂಗಗಳು ನೆನೆಯುವುದೆ ಪುಣ್ಯವಾಗುತ್ತದೆ. ಅವರ ಹೆಸರೇ ಮಂತ್ರವಾಗುತ್ತದೆ. ಭಾರತೀಯರ ಗೌರವಾದರಗಳಿಗೆ ಪಾತ್ರರಾದವರಲ್ಲಿ ಗಾಂಧೀಜಿಗೆ ಮಾತ್ರ ಅವರು ದ್ವಿತೀಯರು. ದೇಶ ಸೇವೆಗಾಗಿ ಕುಟುಂಬ ಮೊದಲಾಗಿ ತಮ್ಮೆಲ್ಲವನ್ನು ಧಾರೆ ಎರೆಯುತ್ತಾರೆ. ಭಾರತ ಬಿಟ್ಟು ಹೋಗುವತನಕ ಅವರು ತಮ್ಮ ವಿವಾಹದ ಬಗ್ಗೆಯೂ ಯೋಚಿಸುವುದಿಲ್ಲ. 'ನೀವು ಮದುವೆಯಾಗುವುದಿಲ್ಲವೆ?' ಎಂದು ಯಾರೊ ಕೇಳಿದಾಗ

'ನನಗೆ ಆಕಡೆ ಯೋಚಿಸಲು ಸಹ ಪುರಸತ್ತಿಲ್ಲ' ಎಂದವರು ಉತ್ತರಿಸುತ್ತಾರೆ. ತಮ್ಮ ಬದುಕಿನ ಬಹುಭಾಗವನ್ನು (ಹನ್ನೊಂದು ಸಲದ ಜೈಲುವಾಸ) ಜೈಲಿನಲ್ಲಿ ಕಳೆದದ್ದನ್ನು ನೋಡಿದಾಗ ಅವರ ಮಾತು ನಿಜವೆನಿಸುತ್ತದೆ. ದೇಶಾಭಿಮಾನವೆ ಅವರ ಬದುಕಾಗುತ್ತದೆ. ಅವರ ಆತ್ಮ ಪ್ರಕಾಶನದ ಸಾಧನವಾಗುತ್ತದೆ. ಜರ್ಮನಿಗೆ ತೆರಳಿದನಂತರ ಅಲ್ಲಿಯ ಹೆಣ್ಣನ್ನು ಮದುವೆಯಾಗಿ ಅನಿತಾ ಎಂಬ ಈಗಲೂ ಬದುಕಿರುವ ಪುತ್ರಿಯನ್ನು ಪಡೆಯುತ್ತಾರೆ. ಸ್ವಾತಂತ್ರ್ಯ ಸಂಪಾದನೆಯಲ್ಲಿ ಗಾಂಧೀಜಿಯ ಪಾತ್ರದಷ್ಟಲ್ಲವಾದರೂ ಬೋಸರದು ಅವರಿಗೆ ಹತ್ತಿರವಾದ ಮಹತ್ತರ ಪಾತ್ರವೆಂದೇ ಹೇಳಬೇಕು. ಆಂಗ್ಲರ ನಿರ್ಗಮನವನ್ನು ತೀವ್ರಗೊಳಿಸುವಲ್ಲಿ ಸುಭಾಷರ ಅಜಾದ್ ಹಿಂದ್ ಫೌಜಿನ ಪಾತ್ರ ಪರಿಣಾಮಕಾರಿಯಾದದ್ದೆಂದೇ ಹೇಳಬೇಕು. ಸ್ವಾತಂತ್ರ್ಯ ಜ್ಯೋತಿಯ ವಾಹಕರೂ, ಅದರ ಶಕ್ತಿ ಸಂಕೇತಗಳೂ, ಅದರ ಉಪಾಸಕರೂ ಆದ ಆ ಇಬ್ಬರು ಮಹನೀಯರ ಆದರ್ಶವನ್ನು ಕಣ್ಮುಂದಿರಿಸಿಕೊಂಡಿರುವ ತನಕ ಸ್ವಾತಂತ್ರ್ಯಕ್ಕೆ ಚ್ಯುತಿಯಿಲ್ಲ.

ದೇಜಗೌ



ನನ್ನ ರಾಜಕೀಯ ಜೀವನದಲ್ಲಿ ನಾನು ಯಾವುದೇ ಅಪರಾಧ ಮಾಡಿರುವೆನೆಂದು ಭಾವಿಸಿಲ್ಲ
ಇದಕ್ಕಿಂತ ಹೆಚ್ಚೇನು ನಾನು ಗಾಂಧಿಯವರಿಗೆ ಹೇಳಲಾರೆ.

—ನೇತಾಜಿ

ದಂತ ಕಥೆಯ ನಾಯಕ ಸುಭಾಷ್ ಚಂದ್ರ ಬೋಸ್

ಎಂ. ಎನ್. ಜೋಯಿಸ್
ಸ್ವಾತಂತ್ರ್ಯ ಹೋರಾಟಗಾರರು
ಮೈಸೂರು

''ರಕ್ತ ಗುಲಾಲಸೆ ಭರಲೆಜೋಲಿ ಆಜ್ ಹಮಾರ ಹೋಲಿ" ರಕ್ತದ ಓಕುಳಿಯಿಂದ ಪಿಚಕಾರಿಯನ್ನು ತುಂಬು ಇಂದು ನಮಗೆಲ್ಲಾ ಕಾಮನಹಬ್ಬ ಹೀಗೆ ಹಾಡುತ್ತಾ, ಹಾಡುತ್ತಾ ಭಗತ್‌ಸಿಂಗ್‌ನು ನೇಣಿಗೆ ಒಳಗಾದ. ಸಾವನ್ನಪ್ಪಿದ, ಅಮರನಾದ ಬೆಚ್ಚಿದನೇ! ಬೆದರಿದನೇ! ಇಲ್ಲ. ಲಾಹೋರ್ ಸೆರೆಮನೆಯಲ್ಲಿ ಅರವತ್ತುನಾಲ್ಕು ದಿನಗಳು ಅಖಂಡ ಉಪವಾಸಮಾಡಿ ಜತೀಂದ್ರ ದಾಸ್‌ನು ಆತ್ಮಾರ್ಪಣೆ ಮಾಡಿದನು. ವಜೀಜಾ ಎಂಬುವವನು ಬರ್ಮಾದ ಜೈಲಿನಲ್ಲಿ ನೂರಅರವತ್ತನಾಲ್ಕು ದಿನಗಳು ಕಠಿಣ ಉಪವಾಸಮಾಡಿ ದೇಹತ್ಯಾಗ ಮಾಡಿದನು. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇಂತಹ ಉದಾಹರಣೆಗಳು ಲೆಖ್ಖವಿಲ್ಲದಷ್ಟು. "ಅರ್ಜುನ ತಾನಾಗಿ ಬಂದಿರುವ ಮತ್ತು ಸ್ವರ್ಗದ ಬಾಗಿಲನ್ನು ತೆರೆದಿರುವ ಇಂತಹ ಯುದ್ಧವು ಭಾಗ್ಯಶಾಲಿಗಳಾದ ಹೋರಾಟಗಾರರಿಗೆ ಮಾತ್ರ ಲಭಿಸುವುದು" ಹೀಗೆಂದು ದ್ವಾಪರ ಯುಗದಲ್ಲಿ ಶ್ರೀಕೃಷ್ಣನ ಪಾಂಚಜನ್ಯ ಮೊಳಗಿತು ಆ ನಾದವನ್ನು ಕೇಳಿ ಪುಳಕಿತಗೊಂಡು ಯುದ್ಧಕ್ಕೆ ಸನ್ನದ್ಧನಾದ ಅರ್ಜುನ ಹಾಗೆಯೇ ೧೯-೨೦ನೇ ಶತಮಾನಗಳಲ್ಲಿ ಸ್ವಾತಂತ್ರ್ಯ ದೇವಿಯ ಕರೆಗೆ ಓಗೊಟ್ಟು ಉತ್ಸಾಹ ಪೂರ್ಣ ಸ್ಫೂರ್ತಿಯಿಂದ ಹೋರಾಟದಲ್ಲಿ ದುಮುಕಿ ಮನೆ, ಮಠ, ಹೆಂಡತಿ-ಮಕ್ಕಳು, ವ್ಯಾಸಂಗ ಮುಂತಾದ ಮುಂದಿನ ಪುರೋಭಿವೃದ್ಧಿ ಎಲ್ಲವನ್ನೂ, ಬದಿಗಿಟ್ಟವರು ಭಾರತದಲ್ಲಿ ಅದೆಷ್ಟೋ ಮಂದಿ. ಅವರು ಪಟ್ಟ ಕೋಟಲೆಗಳೆಷ್ಟೋ, ಕಂಡ ಭವಣೆಗಳೆಷ್ಟೋ, ಎಲ್ಲವನ್ನೂ ತ್ಯಾಗಮಾಡಿ ಜೈಲುಗಳಲ್ಲಿ ನರಕವಾಸವನ್ನು ಅನುಭವಿಸಿ ತಮ್ಮ ಪೂರ್ಣ ಸಂಸಾರವನ್ನೇ ಬೂದಿ ಮಾಡಿಕೊಂಡವರೆಷ್ಟೋ, ದುಡಿದು ಮಡಿದವರೆಷ್ಟೋ, ಎಣಿಸುವವರು ಯಾರು? ವ್ಯಥೆ ಇಲ್ಲ, ಪಶ್ಚಾತ್ತಾಪ ಇಲ್ಲವೇ ಇಲ್ಲ. ಆ ನಾದದ ಪ್ರತಿಧ್ವನಿಯಾದ ಕ್ವಿಟ್ ಇಂಡಿಯಾ ಚಳುವಳಿಯ ವೇಳೆಯಲ್ಲಿ ಕೇಳಿಬಂದ ಒಂದು ನಿದರ್ಶನ—ಸೈನ್ಯದಲ್ಲಿದ್ದ ಸುಭಾಷ್ ಚಂದ್ರಬೋಸ್‌ರ ಪರವಾದವರೆಂದು ಒಂಬತ್ತು ಯುವಕರಿಗೆ ಮರಣದಂಡನೆ ವಿಧಿಸಿ, ನೇಣುಹಾಕಲು ಬೆಂಗಳೂರು ಕೇಂದ್ರ ಸೆರೆಮನೆಗೆ ಕರೆತಂದರು. ನೇಣಿಗೆ ಮುಂಚೆ ಸೆರೆಮನೆಯ ಅಧಿಕಾರಿಗಳು ನಿಮ್ಮ ಕೊನೆಯ ಅಪೇಕ್ಷೆ ಏನೆಂದು ಕೇಳಲು ಅವರ ಉತ್ತರ ಒಂದು ಜನಿವಾರ, ಒಂದು ಭಗವದ್ಗೀತೆ ಪುಸ್ತಕ. ಎಷ್ಟು ಪ್ರಯತ್ನ

ಮಾಡಿದರೂ ಅವರು ತಂದೆ-ತಾಯಿಗಳ ಹೆಸರನ್ನಾಗಲಿ, ಊರಿನ ಹೆಸರನ್ನಾಗಲಿ, ಹೇಳಲಿಲ್ಲ. ಪ್ರಶ್ನೆಗಳಿಗೆಲ್ಲಾ ಅವರ ಬಾಯಿಂದ ಬರುತ್ತಿದ್ದ ಉತ್ತರ ಒಂದೇ— "ಸ್ವಾತಂತ್ರ್ಯ ಭಾರತ್ ಕಿ ಜೈ" ಈ ದೃಢತೆ ಯಾವ ಪ್ರಯೋಜನಕ್ಕಾಗಿ? ಆಗ ನಾನು ಅದೇ ಸೆರೆಮನೆಯಲ್ಲಿದ್ದೆ. ರಾಜಕೀಯ ಬಂದಿಗಳೆಲ್ಲಾ ಅಂದು ಉಪವಾಸ ಮಾಡಿದೆವು. ಅವರ ಆತ್ಮ ಶಾಂತಿಗಾಗಿ ಪ್ರಾರ್ಥಿಸಿದೆವು. ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಇಂತಹ ನಿದರ್ಶನಗಳಿಗೆ ಕೊನೆ ಮೊದಲಿಲ್ಲ. ಮುಂದಿನ ತಲೆಮಾರಿನವರಿಗೆ ಈ ಕಥೆಯು ಒಂದು ಇತಿಹಾಸ ಸಂಗತಿ ಮಾತ್ರ. ಆದರೆ, ಅದರಲ್ಲಿ ಪಾಲ್ಗೊಂಡ ನಮಗೆಲ್ಲ ಅದೊಂದು ಜೀವನದ 'ಅವಿಭಾಜ್ಯ' ಅಂಗ. ಬಾಳುವೆಯ ಬಗ್ಗೆ ಅದು ಹಾಸು ಹೊಕ್ಕಾಗಿ ಹೆಣೆದ ಹಂದರ. ಸುಭಾಷ್‌ರ ಜೀವನ ಚರಿತ್ರೆಯಲ್ಲಿ ಮಹಾಹೋರಾಟಕ್ಕೆ ತದ್ರೂಪವಾದ ಎಷ್ಟೋ ಘಟನೆಗಳನ್ನು ಕಾಣುತ್ತೇವೆ. ಸುಭಾಷ್ ಚಂದ್ರಬೋಸರ ಜೀವಿತವೇ ಆ ಇತಿಹಾಸದ ಒಂದು ಆಕರ್ಷಣೆಯ ಅಧ್ಯಾಯ. ಅದರ ಪರಿಚಯ ಮಾಡಿಕೊಳ್ಳುವುದು ನಮಗೆ ಉಪಯುಕ್ತ ಅಷ್ಟೇ ಅಲ್ಲ, ಅದು ಸೂಕ್ತವೂ ಆಗಿದೆ.

ಅದೊಂದು ಅಪೂರ್ವಕಾಲ. ಊಹೆಗೂ ನಿಲುಕದ ಮಹಾ ಘಟನೆಗಳು ಮಿಂಚಿನ ಗತಿಯಿಂದ ನಡೆದು ಹೋದ ಕಾಲ. ಯುಗ-ಯುಗಗಳು ದಿನ ಮಾಸಗಳಲ್ಲಿ ನುಸುಳಿ ಹೋದ ಸಂಧಿಕಾಲ. ಸರ್. ಎಂ. ವಿಶ್ವೇಶ್ವರಯ್ಯನವರು ತೊಂಬತ್ತು ವರ್ಷ ತುಂಬಿದ ತಮ್ಮ ಪೂರ್ಣಾನುಭವದಿಂದ ಒಮ್ಮೆ "ಪ್ರಪಂಚವನ್ನೆಲ್ಲಾ ನಾನು ಆರು
ಬಾರಿ ಸುತ್ತಿ ಬಂದಿದ್ದೇನೆ. ಈ ಅನುಭ
ದಿಂದ ಹೇಳುವುದಾದರೆ, ನಮ್ಮ ದೇ
ಯುವಕರು ಜಗತ್ತಿನ ಯಾವ ದೇ
ಯುವಕರಿಗೂ ಏನೂ ಕಡಿಮೆ ಇಲ್ಲ
ಎಂದು ಸಾರಿದರು. ಇದು ನೇತಾಜಿ ಬೋ
ರಿಗೆ ಅಕ್ಷರಶಃ ಅನ್ವಯಿಸುತ್ತದೆ. ಸುಭಾ
ಚಂದ್ರಬೋಸ್‌ರ ಕಾಲದಲ್ಲಿ ಭಾರತ ದೇ
ರಾಜಕೀಯ, ಸಾಮಾಜಿಕ ಸ್ಥಿತಿಗಳ ಬ
ತಿಳಿಯುವುದು ಸೂಕ್ತ. ೧೮೫೭
ಸಿಪಾಯಿ ದಂಗೆಯ ಮೂಲಕ ಭಾರ
ಸ್ವಾತಂತ್ರ್ಯ ಸಂಗ್ರಾಮ ಆರಂಭವಾಯಿ
ಆ ಸಂಗ್ರಾಮವು ಯಶಸ್ವಿಯಾಗಲಿ
ಆದರೆ, ಭಾರತೀಯರು ಎದೆಗೆಡಲಿ
ಕಲ್ಕತ್ತಾದಲ್ಲಿ "ಈಸ್ಟ್ ಇಂಡಿಯ
ಅಸೋಸಿಯೇಷನ್" ಬೊಂಬಾಯಿಯ
"ಬಾಂಬೆ ಅಸೋಸಿಯೇಷನ್" ಮದರ
ನಲ್ಲಿ "ಮಹಾಜನ ಸಭಾ" ಸಂಸ್ಥೆಗಳನ
ಹುಟ್ಟು ಹಾಕಿ, ತನ್ನ ಚಟುವಟಿಕೆಗಳನ
ಒಂದು ರೀತಿಯಲ್ಲಿ ನಡೆಸಿಕೊಂಡು ಬ
ತ್ತಿದ್ದವು. ಅನಂತರ ಇವರೆಲ್ಲರೂ ಒ
ಗೂಡಿ "ಭಾರತೀಯ ರಾಷ್ಟ್ರೀ
ಕಾಂಗ್ರೆಸ್" ಸ್ಥಾಪಿಸಿದರು. ದಾದಾಬಾ
ನವರೋಜಿ, ಯದುನಾಥ್ ಸರ್ಕಾ
ವೀರರಾಘವಾಚಾರಿ ಮತ್ತು ಎ. ಓ. ಹ್ಯೂ
ಇದರ ಪ್ರೇರಕ ಶಕ್ತಿಗಳಾಗಿದ್ದ
ಕಾಂಗ್ರೆಸ್‌ನ ಮೊದಲ ವರ್ಷಗಳು ಸೌ
ವಾಗಿ, ಪ್ರಾರ್ಥನೆ, ನಿರ್ಣಯಗಳು ಮಾ
ಆಗಿರುತ್ತಿದ್ದವು. ಆದರೆ, ಇವುಗ
ಬ್ರಿಟೀಷ್ ಸರ್ಕಾರ ಕಿವಿಗೊಡಲಿಲ್ಲ. ಆದ
ರಿಂದ ಜನ ಸರ್ಕಾರದ ಮೇಲೆ ಹೆ
ಒತ್ತಡ ತರಲು ಆರಂಭಿಸಿದ
ಬಾಲಗಂಗಾಧರ ತಿಲಕರು ಸ್ವರಾಜ್

ನನ್ನ ಆಜನ್ಮ ಸಿದ್ಧಹಕ್ಕು ಎಂದು ಸಾರಿದರು. ಲಾಲ ರಜಪತ್‌ರಾಯ್, ಬಿಪಿನ್ ಚಂದ್ರಪಾಲ್ ಇವರೊಡನೆ ಧ್ವನಿಗೂಡಿಸಿದರು ಇವರುಗಳು ಗೋಪಾಲಕೃಷ್ಣ ಗೋಕಲೆಯವರ ಮುಂದಾಳತ್ವದಲ್ಲಿ ಈ ಬಗ್ಗೆ ಜನರಿಗೆ ಅರಿವು ಮೂಡಿಸುವ ಪ್ರಚಾರ ದೇಶದಾದ್ಯಂತ ನಡೆಸುತ್ತಿದ್ದರು. ಆ ಕಾಲಕ್ಕೆ ದಕ್ಷಿಣ ಆಫ್ರಿಕಾದಿಂದ ಗಾಂಧೀಜಿಯವರು ಭಾರತಕ್ಕೆ ಹಿಂತಿರುಗಿದರು. ಇವರ ಚಟುವಟಿಕೆಗಳನ್ನು ಗಮನಿಸಿದರು. ಅಲ್ಲಿಂದ ಮುಂದೆ ಕಾಂಗ್ರೆಸ್‌ನಲ್ಲಿ ಗಾಂಧೀಜಿಯವರ ಚಟುವಟಿಕೆಗಳು ಆರಂಭವಾದವು.

ಸುಭಾಷ್ ಚಂದ್ರಬೋಸರು ೧೮೯೭ರ ಜನವರಿ ೨೩ರಂದು ಕಟಕ್‌ನಲ್ಲಿ ಜನಿಸಿದರು. ಇವರ ಪೂರ್ವಜರು ಬಂಗಾಳದ ಅರಸರ ಮಂತ್ರಿಯಾಗಿದ್ದರು. ಸುಭಾಷ್‌ರ ತಂದೆ, ಜಾನಕೀನಾಥ್ ಮತ್ತು ತಾಯಿ ಪ್ರಭಾವತೀ ದೇವಿ. ಜಾನಕೀನಾಥ್‌ರು ಕಟಕ್‌ನಲ್ಲಿ ವಕೀಲವೃತ್ತಿ ಅವಲಂಬಿಸಿದ್ದರು. ಸರ್ಕಾರದ ದಮನ ನೀತಿಯನ್ನು ಖಂಡಿಸಿ, ಇವರಿಗೆ ದೊರಕಿದ್ದ ರಾಯಬಹದ್ದೂರ್ ಪ್ರಶಸ್ತಿಯನ್ನು ಹಿಂತಿರುಗಿಸಿದರು. ಶೈಕ್ಷಣಿಕ ಸಂಸ್ಥೆ ಮತ್ತು ಧರ್ಮದತ್ತಿಗಳ ಬಗ್ಗೆ ಇವರಿಗೆ ಬಹಳ ಆಸಕ್ತಿ ಇತ್ತು. ರಾಷ್ಟ್ರೀಯ ಕಾಂಗ್ರೆಸ್ಸಿನ ಬಗ್ಗೆ ಬಹಳ ಅಭಿಮಾನ. ಗಾಂಧಿಯವರ ಬಗ್ಗೆ ಭಕ್ತಿ-ಗೌರವವಿತ್ತು. ಸುಭಾಷ್‌ರ ವಿದ್ಯಾಭ್ಯಾಸ ಕಟಕ್ ಮತ್ತು ಕಲ್ಕತ್ತಾದಲ್ಲಿ ನಡೆಯಿತು. ವೇಣಿಮಾಧವ ದಾಸ್ ಒಬ್ಬ ಆದರ್ಶ ಉಪಾಧ್ಯಾಯರು. ಅವರ ತತ್ವನಿಷ್ಠೆ, ಮಾನವೀಯತೆಗಳಿಗೆ ಸುಭಾಷರು ಮನಸೋತರು. ಈ ಉಪಾಧ್ಯಾಯರು ಸುಭಾಷ್ ಚಂದ್ರಬೋಸ್, ಅಸಾಧಾರಣ ಪ್ರತಿಭಾವಂತರಾಗುವರೆಂಬ ಮುನ್ಸೂಚನೆಯನ್ನು ಆಗಲೇ ಕೊಟ್ಟಿದ್ದರು. ಬೋಸರು ಬಾಲ್ಯದಲ್ಲಿ ರಾಮಕೃಷ್ಣ ಪರಮಹಂಸ, ವಿವೇಕಾನಂದರ ಉಪದೇಶದಿಂದ ಪ್ರಭಾವಿತರಾಗಿದ್ದರು. ತ್ಯಾಗ ಮತ್ತು ಜನಸೇವೆಯ ಬೀಜ ಅವರಲ್ಲಿ ಅಂಕುರವಾಯಿತು. ಬಿ.ಎ. (ಆನರ್ಸ್)ನ್ನು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಮುಂದೆ ಇಂಗ್ಲೆಂಡಿಗೆ ಹೋಗಿ ಐ.ಸಿ.ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಕೆಲಸಕ್ಕೆ ಸೇರಿದರು. ಆ ವೇಳೆಗೆ ಜಲಿಯನ್‌ವಾಲಾ ಬಾಗ್ ನರಹತ್ಯೆ ಸುದ್ದಿ ತಿಳಿಯಿತು. ಇದರಿಂದ ಬೇಸರಗೊಂಡು ಕೆಲಸಕ್ಕೆ ರಾಜೀನಾಮೆ ಕೊಟ್ಟು ಭಾರತಕ್ಕೆ ಹಿಂತಿರುಗಿದರು. ಆಗ ಸುಭಾಷರಿಗೆ ಇಪ್ಪತ್ತಮೂರು ವಯಸ್ಸಾಗಿದ್ದಿತು. ಭಾರತದಲ್ಲಿ ಗಾಂಧೀಜಿಯವರ ದರ್ಶನ ಮಾಡಿ, ಮುಂದೆ ಗಾಂಧೀಜಿಯವರ ಆದೇಶದಂತೆ ಕಲ್ಕತ್ತಾಕ್ಕೆ ಹೋಗಿ ದೇಶ ಬಂಧು ಸಿ. ಆರ್. ದಾಸ್‌ರನ್ನು ಕಂಡರು. ಅಲ್ಲಿಂದ ಮುಂದೆ ಬೋಸರಿಗೆ ಸಿ. ಆರ್. ದಾಸರೇ ಮಾರ್ಗದರ್ಶಕರಾದರು ಹಾಗೂ ನಾಯಕರೂ ಆದರು. ಸುಭಾಷರು ದಾಸರ ಜೊತೆ 'ಪ್ರಿನ್ಸ್ ಆಫ್ ವೇಲ್ಸ್' ಅವರ ಭೇಟಿಯ ವಿರುದ್ಧ ಬಹಿಷ್ಕಾರ ಚಳುವಳಿಯಲ್ಲಿ ಭಾಗವಹಿಸಿದರು. ಇದರಿಂದ ಸುಭಾಷರಿಗೆ ಸೆರೆಮನೆಯ ವಾಸದ ಮೊದಲ ಅನುಭವವಾಯಿತು. ಬೋಸರು ಹನ್ನೊಂದುಬಾರಿ ಸೆರೆಮನೆಯ ವಾಸ ಕಂಡರು. ಮುಂದೆ ಸ್ವರಾಜ್ಯ ಪಕ್ಷ, ಶಾಸನಸಭೆ ಮತ್ತು ಪುರಸಭಾ ಚುನಾವಣೆಗಳಲ್ಲಿ ಭಾಗವಹಿಸಲು ನಿರ್ಧರಿಸಿತು. ಮೋತಿಲಾಲ್ ನೆಹರು ಮತ್ತು ಸಿ. ಆರ್. ದಾಸ್ ಈ ಪಕ್ಷದ

ನಾಯಕರಾಗಿದ್ದರು. ಈ ಪಕ್ಷ ಕಲ್ಕತ್ತಾ ಕಾರ್ಪೊರೇಶನ್‌ನಲ್ಲಿ ಭಾರಿ ಜಯಗಳಿಸಲು ಬೋಸರೇ ಕಾರಣ. ಸಿ. ಆರ್. ದಾಸರು ನಿಧನರಾದ ಮೇಲೆ ಬೋಸರು ಬಂಗಾಳದ ನಾಯಕರಾದರು. ಗಾಂಧೀಜೀಯವರು ನಡೆಸಿದ ಅಸಹಕಾರ ಚಳುವಳಿ ಮತ್ತು ಕಾನೂನುಭಂಗ ಚಳುವಳಿಗಳಲ್ಲಿ ಬೋಸರದು ಅದ್ವಿತೀಯ ಪಾತ್ರ. ೧೯೩೮ರಲ್ಲಿ ಬೋಸರು 'ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ' ಅಧ್ಯಕ್ಷರಾಗಿ ಆಯ್ಕೆಯಾದರು. ಮತ್ತೆ ೧೯೩೯ರಲ್ಲಿ ಗಾಂಧೀಜಿಯವರು ಬೇಡವೆಂದರೂ ಅಧ್ಯಕ್ಷತೆಗೆ ನಿಂತು ಗೆದ್ದರು. ಆದರೆ, ಗಾಂಧೀಜಿಯವರ ಸಹಕಾರವಿಲ್ಲದೆ, ಕಾರ್ಯನಿರ್ವಹಿಸುವುದು ಕಷ್ಟವಾಯಿತು. ಆದುದರಿಂದ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿದರು. ತಮ್ಮದೇ ಆದ 'ಫಾರ್‌ವರ್ಡ್ ಬ್ಲಾಕ್' ಪಕ್ಷವನ್ನು ಸ್ಥಾಪಿಸಿದರು. ಕಾಂಗ್ರೆಸ್‌ನ ಎಡಪಕ್ಷದವರು ಈ ಗುಂಪಿಗೆ ಸೇರಿದರು. ಫಾರ್‌ವರ್ಡ್ ಬ್ಲಾಕ್ ಮತ್ತು ಬಲಪಂಥೀಯರ ಭಿನ್ನಾಭಿಪ್ರಾಯಗಳು ದಿನೇ ದಿನೇ ಬೆಳೆಯುತ್ತಾ ಬಂದವು. ಆದರೆ, ಫಾರ್‌ವರ್ಡ್ ಬ್ಲಾಕ್ ಚಟುವಟಿಕೆಗಳು ಬಂಗಾಳಕ್ಕೆ ಸೀಮಿತವಾಗಿದ್ದವೇ ಹೊರತು ರಾಷ್ಟ್ರವ್ಯಾಪಿಯಾಗಿ ಬೆಳೆಯಲಿಲ್ಲ. ೧೯೩೯ರಲ್ಲಿ ಯುರೋಪಿನಲ್ಲಿ ಜರ್ಮನಿ ಮತ್ತು ಇಂಗ್ಲೆಂಡ್ ಯುದ್ಧ ಆರಂಭವಾಯಿತು. ಇಂಡಿಯಾದಲ್ಲಿ ಯುದ್ಧಸಿದ್ಧತೆಗೆ ಅಡ್ಡಿಯಾಗುವಂತಹ ರೀತಿಯಲ್ಲಿ ಫಾರ್‌ವರ್ಡ್ ಬ್ಲಾಕ್ ಕಾರ್ಯಾಚರಣೆ ಮಾಡಿತು. ಸುಭಾಷರನ್ನು ಬಂಧಿಸಲಾಯಿತು. ಅವರ ಮನೆಯಲ್ಲೇ ಅವರನ್ನು ಗೃಹಬಂಧನದಲ್ಲಿ ಇಟ್ಟರು. ಸಾಕಷ್ಟು ಗುಪ್ತಚಾರರು, ಪೋಲೀಸರೂ ಸುಭಾಷರ ಬಗ್ಗೆ ನಿಗಾ ಇಟ್ಟಿದ್ದರು. ಮನೆಗೆ ಪೋಲೀಸರ ಸರ್ಪಕಾವಲಿದ್ದರೂ ಸುಭಾಷರು ಮನೆ ಬಿಟ್ಟು ಕಣ್ಮರೆಯಾದರು. ಅಲ್ಲಿಂದ ಆಫ್ಘಾನಿಸ್ಥಾನವನ್ನು ಸೇರಿ ಮುಂದೆ ಬರ್ಲಿನ್ ತಲಪಿದರು. ಸುಭಾಷ್‌ಚಂದ್ರ ಬೋಸರು ರೋಮಾಂಚಕ ರೀತಿಯಲ್ಲಿ ತಪ್ಪಿಸಿಕೊಂಡು ಹೋದರೆಂದು ಭಾರತದ ಪತ್ರಿಕೆಗಳು ವರದಿಮಾಡಿದವು. ವಿದೇಶಿಯರ ಸಹಾಯ ಪಡೆದು ಬ್ರಿಟಿಷರು ಭಾರತದಿಂದ ಕಾಲ್ತೆಗೆಯುವಂತೆ ಮಾಡುವುದು ಬೋಸರ ಈ ಬರ್ಲಿನ್ ಪ್ರವಾಸದ ಉದ್ದೇಶವಾಗಿತ್ತು.

ಹಿಟ್ಲರ್‌ನ ಸರ್ಕಾರದಲ್ಲಿದ್ದ ಜರ್ಮನಿಯ ವಿದೇಶಾಂಗ ಸಚಿವಾಲಯದ ಭಾರತ ವ್ಯವಹಾರ ನೋಡುತ್ತಿದ್ದವರ ನೆರವನ್ನು ಬೋಸರು ಪಡೆದರು. ಸುಭಾಷರು ಬರ್ಲಿನ್‌ನಲ್ಲಿ ಸ್ವತಂತ್ರ ಭಾರತ ಕೇಂದ್ರವನ್ನು ಸ್ಥಾಪಿಸಿದರು. ಇವರ ಕಾರ್ಯವನ್ನು ಎ. ಸಿ. ಎಸ್. ನಂಬಿಯಾರ್, ಡಾ|| ಗಿರಿಜಾ ಮುಖರ್ಜಿ ಮತ್ತು ಡಾ|| ಎಂ. ಆರ್. ವ್ಯಾಸ್ ಮುಂತಾದವರು ನೋಡಿಕೊಳ್ಳುತ್ತಿದ್ದರು. ಬೋಸರು ಯಾವ ಮಾನ್ಯತೆ ಪಡೆದ ರಾಜಕೀಯ ಪಕ್ಷದಿಂದ ಪ್ರಮಾಣ ಪತ್ರ ತಂದಿರಲಿಲ್ಲ. ತಮ್ಮ ಸ್ವಂತ ಮರ್ಜಿಯ ಮೇಲೆ ಅಲ್ಲಿಗೆ ಬಂದದ್ದರು. ಆದುದರಿಂದ ಜರ್ಮನಿಯು ಅವರನ್ನು ಒಬ್ಬ ಗೌರವಾನ್ವಿತ ಅತಿಥಿಯಾಗಿ ಸ್ವೀಕರಿಸಿತು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಜರ್ಮನಿಯ ನೆರವು ಬೇಕಾಗಿತ್ತು. ಮಿಲಿಟರಿ ಶಿಕ್ಷಣ, ಶಸ್ತ್ರಾಸ್ತ್ರಗಳು ಬೋಸರಿಗೆ ಬೇಕಾಗಿತ್ತು. ಆದುದರಿಂದ ಬೋಸರ ಯುದ್ಧ

ಪ್ರಯತ್ನಕ್ಕೆ ಅಡಚಣೆ ಉಂಟಾಯಿತು. ಇದೇ ಸಮಯಕ್ಕೆ ಜರ್ಮನಿ, ಇಟಲಿಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾರತೀಯ ಸೈನಿಕರು ಯುದ್ಧ ಸೆರೆಯಾಳುಗಳಾಗಿ ಇರುವರೆಂದು ತಿಳಿಯಿತು ತಮ್ಮ ಧ್ಯೆಯೋದ್ದೇಶ ಸಾಧನೆ ಗಾಗಿ ಇವರನ್ನು ಬಳಸಿಕೊಳ್ಳುವ ಪ್ರಯತ್ನ ಮಾಡಿದರು. ಜರ್ಮನ್ ಸರ್ಕಾರ ಬೋಸರ ಕೋರಿಕೆಯನ್ನು ಮನ್ನಿಸಿ, ಅವರು ಭಾರತೀಯ ಕೈದಿಗಳನ್ನು ಭೇಟಿಮಾಡಿ, ಅವರನ್ನು ಒಲಿಸಿಕೊಳ್ಳಲು ಅನುಮತಿ ನೀಡಿತು. ಜರ್ಮನಿ ಮತ್ತು ಇಟಲಿಯ ವಿರುದ್ಧ ಹೋರಾಡುವುದಕ್ಕಾಗಿ ಈ ಯೋಧ ರನ್ನು ಭಾರತದಿಂದ ಕರೆತಂದಿದ್ದರು. ಸೆರೆ ಯಾಳುಗಳನ್ನು ಒಲಿಸಿಕೊಂಡ ಬೋಸರು ಸ್ವತಂತ್ರ ಭಾರತೀಯ ಸೇನಾದಳ ರಚಿಸಿ ದರು. ಈ ಕೆಲಸಕ್ಕೆ ತಗಲುವ ವೆಚ್ಚವನ್ನು ಮತ್ತು ತಾಂತ್ರಿಕ ಸಿಬ್ಬಂದಿಯನ್ನು ಜರ್ಮನಿ ಸರ್ಕಾರ ವಹಿಸಿಕೊಂಡಿತು. ಆದರೆ, ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಯೋಚನೆ ಬೋಸರ ಮನಸ್ಸಿನಲ್ಲಿ ಮೂಡಿತು ಪೂರ್ವ ಏಷ್ಯಾದಲ್ಲಿರುವ ಭಾರತೀಯರನ್ನು ಒಟ್ಟು ಗೂಡಿಸಿ, ಜಪಾನಿಯರಿಗೆ ಶರಣಾದ ಸೈನಿಕ ರಿಂದ "ಆಜಾದ್ ಹಿಂದ್" ಸೇನೆಯನ್ನು ರಚಿಸಿ ಭಾರತದ ಪೂರ್ವ ಗಡಿಯಲ್ಲಿ ಯುದ್ಧ ಆರಂಭಿಸುವ ಯೋಜನೆ ರೂಪಿಸತೊಡಗಿ ದರು. ಈ ಯೋಜನೆಗೆ ಜಪಾನ್ ಸರ್ಕಾರದ ಸಹಕಾರವನ್ನು ಪಡೆದರು. ಇದರ ಪರಿಣಾಮ ವಾಗಿ ಮೂವತ್ತುಸಾವಿರ ಸೈನಿಕರುಳ್ಳ ವಿಮೋಚನಾ ಸೇನೆ ಅಸ್ತಿತ್ವಕ್ಕೆ ಬಂದಿತು. ಈ ಸೇನೆಯ ವೆಚ್ಚದ ನಿಧಿ ಸಂಗ್ರಹಣೆಗಾಗಿ "ನೇತಾಜಿ ಸಮರ ನಿಧಿ" ಸ್ಥಾಪಿತವಾಯಿತು. ಸಾಕಷ್ಟು ಹಣವೂ ಸಂಗ್ರಹವಾಯಿತು.

ಆಜಾದ್ ಹಿಂದ್ ಸೇನೆಗಾಗಿ ನೇಮಕಾತಿ, ತರಪೇತಿ ಕೆಲಸವೂ ಆರಂಭವಾಯಿತು. ಮಹಿಳೆಯರ ರೆಜಿಮೆಂಟಿನ ದಳಪತಿಯಾಗಿ ಕ್ಯಾಪ್ಟನ್ ಲಕ್ಷ್ಮಿಯವರನ್ನು ನೇಮಿಸ ಲಾಯಿತು. ಸಿಂಗಪುರದ ಕ್ಯಾಥೆ ಸಿನಿಮಾ ಹಾಲ್‌ನಲ್ಲಿ ನೇತಾಜೀ ಬೋಸರು ಸ್ವತಂತ್ರ ಭಾರತದ ಹಂಗಾಮಿ ಸರ್ಕಾರದ ಸ್ಥಾಪನೆಯ ಘೋಷಣೆಮಾಡಿದರು. ಬ್ರಿಟೀಷರನ್ನು ಅವರ ಮಿತ್ರರನ್ನು ಭಾರತದ ಭೂಪ್ರದೇಶ ದಿಂದ ಹೊರಗಟ್ಟುವ ಉದ್ದೇಶದಿಂದ ಈ ಹಂಗಾಮಿ ಸರ್ಕಾರ ಹೋರಾಟವನ್ನು ಕೈ ಗೊಳ್ಳುತ್ತದೆ. ಈ ಹೋರಾಟದಲ್ಲಿ "ಆಜಾದ್ ಹಿಂದ್ ಫೌಜ್" ಸೈನ್ಯ ಬ್ರಿಟೀಷರ ಸೈನ್ಯ ವನ್ನು ಎದುರಿಸುತ್ತದೆ. ಎಂಬ ಘೋಷಣೆ ಯನ್ನು ಮಾಡಿದರು. ಈ ಸ್ವತಂತ್ರ ಭಾರತದ ಹಂಗಾಮಿ ಸರ್ಕಾರದ ಪರವಾಗಿ ಕೆಲಸಮಾಡಲು ಈ ಕೆಳಕಂಡವರನ್ನು ನೇಮಕ ಮಾಡಿಕೊಳ್ಳಲಾಯಿತು. ಸುಭಾಷ್‌ಚಂದ್ರ ಬೋಸ್, ಕ್ಯಾಪ್ಟನ್ ಶ್ರೀಮತಿ ಲಕ್ಷ್ಮಿ, ಎಸ್. ಎ. ಐಯ್ಯರ್, ಎ. ಸಿ. ಚಟರ್ಜಿ, ಅಜೀಜ್ ಅಹಮದ್, ಎನ್. ಎಸ್. ಭಗತ್, ಜೆ. ಕೆ. ಭೌಂಸ್ಲೆ, ಗುಲ್ಜಾರ್ ಸಿಂಗ್, ಜ್ಞಾನಿ, ಎ. ಡಿ. ಯೋಗಾನಾಥನ್, ಅಸರ್‌ಖಾದಿರ್, ಷಾನ್‌ವಾಸ್, ಎ. ಎಂ. ಸಹಾಯವ್, ರಾಸ್ ಬಿಹಾರಿ ಬೋಸ್, ಕರೀಂಘನಿ, ದೇವನಾಥ್‌ವಾಸ್, ಡಿ. ಎಂ. ಖಾನ್, ಎ. ಎಲ್ಲಪ್ಪ, ಕೆ. ಎನ್. ಸರ್ಕಾರ್ ಈ ಸ್ವಾತಂತ್ರ ಸರ್ಕಾರವನ್ನು ಜರ್ಮನಿ, ಇಟಲಿ ಮತ್ತು ಜಪಾನ್ ಮನ್ನಣೆ ಮಾಡಿ ದವು. "ಆಜಾದ್ ಫೌಜ್" ಸೇನೆಯು ಭಾರತದ ಕಡೆಗೆ ನುಗ್ಗತೊಡಗಿತು.

ಸಾಕಷ್ಟು ಭಾರತದ ನೆಲವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಅಲ್ಲಿ ನಾಗರೀಕ ಸರ್ಕಾರವನ್ನು ಸ್ಥಾಪಿಸಿತು. ೧೯೪೪ರ ಫೆಬ್ರವರಿ ೪ರಂದು ಅರೆಖಾನ್ ರಣರಂಗದಲ್ಲಿ ಅಜಾದ್ ಹಿಂದ್ ಸೇನೆ ಶತ್ರುಗಳನ್ನು ಬಡಿದೋಡಿಸಿ ಭಾರತದ ಪವಿತ್ರನೆಲದ ಮೇಲೆ ಭಾರತ ರಾಷ್ಟ್ರೀಯ ತ್ರಿವರ್ಣ ಧ್ವಜ ನೆಟ್ಟಿತು. ಈಗ ಆ ಸ್ಥಳದಲ್ಲಿ ಆಜಾದ್ ಹಿಂದ್ ಫೌಜ್‌ನ ಬಲಿದಾನಿಗಳ ಸ್ಮಾರಕವೊಂದು ನಿರ್ಮಾಣವಾಗಿದೆ. ಇಲ್ಲಿಂದ ಮುಂದೆ, ಇಂಫಾಲ ಕಡೆಗೆ ಸೈನ್ಯ ನುಗ್ಗಿಸುವ ರೂಪ-ರೇಖೆಗಳು ಸಿದ್ಧವಾದವು. ಕೊಹಿಮಾ ಕೋಟೆಯನ್ನು ವಶಪಡಿಸಿಕೊಂಡು, ಇಂಫಾಲ ಸೇನೆ ಸುತ್ತುಗಟ್ಟಿತು. ಎಲ್ಲ ಕಡೆಯಿಂದ ಧಾಳಿ ನಡೆಯಿತು. ಇಂಫಾಲಿಗಾಗಿ ಭಾರಿ ಬಿರಿಸಿದ ಕದನ ಪ್ರಭಲಗೊಂಡಿತು. ಈ ವೇಳೆಗೆ ಬರ್ಮಾದಲ್ಲಿ ಮಳೆಗಾಲ ಆರಂಭವಾಗಿ ಆಜಾದ್ ಹಿಂದ್ ಸೇನೆಯ ಸಂಪರ್ಕ ಕಡಿಯಿತು. ಸೈನ್ಯಕ್ಕೆ ಪೂರೈಕೆ ಅಸ್ತವ್ಯಸ್ತವಾಯಿತು. ಐದು ತಿಂಗಳ ಕಾಲ ಘೋರ ಯುದ್ಧ ನಡೆಯಿತು. ಆ ಸಂದರ್ಭದಲ್ಲಿ ರಂಗೂನ್ ರೇಡಿಯೋದಿಂದ ಪ್ರಸಾರ ಭಾಷಣಮಾಡಿದ ನೇತಾಜೀಯವರು ಗಾಂಧೀಜಿಯವರಿಗೆ ಹೃದಯಸ್ಪರ್ಶಿ ಮನವಿಯನ್ನು ಈ ರೀತಿ ಮಾಡಿಕೊಂಡರು. "ಭಾರತದ ಅಂತಿಮ ಸ್ವಾತಂತ್ರ್ಯಸಂಗ್ರಾಮ ಈಗ ಆರಂಭವಾಗಿದೆ. ಆಜಾದ್ ಹಿಂದ್ ಸೇನೆ ಪರಾಕ್ರಮದಿಂದ ಹೋರಾಡುತ್ತಿದೆ. ಕಟ್ಟಕಡೆಯ ಇಂಗ್ಲಿಷರನ್ನು ಭಾರತದಿಂದ ಹೊರಹಾಕುವವರೆಗೆ, ನಮ್ಮ ತ್ರಿವರ್ಣ ಧ್ವಜವು ವೈಸ್‌ರಾಯ್ ಭವನದ ಮೇಲೆ ಹಾರಾಡುವವರೆಗೆ ನಮ್ಮ ಈ ಸಂಗ್ರಾಮ ಮುಂದುವರೆಯುವುದು. ರಾಷ್ಟ್ರಪಿ ಗಾಂಧೀಜಿ! ಭಾರತದ ವಿಮೋಚನೆಯ ಈ ಪವಿತ್ರ ಯುದ್ಧದ ಸಮಯದಲ್ಲಿ ನಿಮ್ಮ ಆಶೀರ್ವಾದ ಕೋರುತ್ತೇನೆ. ಜೈ ಹಿಂದ್." ಹೀಗೆ ಯುದ್ಧ ನಡೆಯುತ್ತಿರುವಾ ಜಪಾನಿನ ಹಿರೋಶಿಮಾ ಮೇಲೆ ಆಟಂ ಬಾಂಬ್ ಧಾಳಿಯಾಗಿ ಜಪಾನಿನ ಸ್ಥೈರ್ಯ ಕುಗ್ಗಿಹೋಯಿತು. ಯೂರೋಪಿನಲ್ಲಿ ರಷ್ಯಾ, ಅಮೆರಿಕಾ, ಇಂಗ್ಲೆಂಡ್, ಏ ಪ್ರಕಾರವಾಗಿ ಧಾಳಿಯಾಗಿ ಜರ್ಮನಿಯ ಶಕ್ತಿ ಕುಗ್ಗಿತು. ಇದರಿಂದ ಆಜಾದ್ ಹಿಂದ್ ಸೈನ್ಯಕ್ಕೆ ಬೇಕಾದ ಸಲಕರಣೆಗಳು ಒದಗಲಿಲ್ಲ. ಆದರೂ ಆಜಾದ್ ಹಿಂದ್ ಸೈನಿಕರು ಶೌರ್ಯ, ಪರಾಕ್ರಮಗಳಿಂದ ಹೋರಾಡಿದರು. ಆದರೆ, ಜಯಲಕ್ಷ್ಮಿ ಒಲಿಯಲಿಲ್ಲ ಕೆಲವೇ ದಿನಗಳಲ್ಲಿ ಬ್ರಿಟಿಷ್ ಸೈನ್ಯ ರಂಗೂನ್‌ನನ್ನು ತಲಪಿತು. ಆದುದರಿಂದ ನೇತಾಜಿಯವರು ತಮ್ಮ ಸೈನ್ಯ ಹಿಮ್ಮೆಟ್ಟಿದ ಯಾತನೆಯಿಂದ ಸೊರಗಿದರು. ನೇತಾಜಿಯವರು ಬ್ರಿಟೀಷ್‌ರ ಕೈವಶವಾಗದೆ ಮಂಚೂರಿಯಾಕ್ಕೆ ಹೊರಟರು. ಆ ವಿಮಾನ ಅಪಘಾತಕ್ಕೆ ಈಡಾಯಿತು. ನೇತಾಜಿಯವರು ಇನ್ನಿಲ್ಲವಾದರು.

ಇಂಗ್ಲಿಷರ ಸೇನೆ ಪೂರ್ವ ಏಷ್ಯಾವನ್ನು ಪುನಃ ವಶಪಡಿಸಿಕೊಂಡಿತು. ಆಜಾದ್ ಹಿಂದ್ ಸೇನೆಯ ಅಧಿಕಾರಿಗಳನ್ನು ಮತ್ತು ಸೈನಿಕರನ್ನು ಸೆರೆಹಿಡಿದು ದೆಹಲಿಯ ಕೆಂಪು ಕೋಟೆಯಲ್ಲಿ ಇರಿಸಲಾಯಿತು. ಅವರ ಮೇಲೆ ಬ್ರಿಟಿಷರೊಂದಿಗೆ ಯುದ್ಧ ಹೂಡಿದ ಅಪರಾಧ ಹೊರಿಸಲಾಯಿತು. ಪತ್ರಿಕೆಗಳು "ಈ ಸೈನಿಕರನ್ನು ಕ್ರೂರವಾಗಿ ನಡೆಸಿಕೊಳ್ಳುವುದು ತಪ್ಪು. ಅವರು ದಂಗೆ ಕೋ

ರಲ್ಲ" ಎಂಬುದಾಗಿ ಲೇಖನಗಳನ್ನು ಬರೆಯಲಾರಂಭಿಸಿದವು. ಅವರಿಗೆ ಶಿಕ್ಷೆ ವಿಧಿಸಿದಲ್ಲಿ ಇಡೀ ಭಾರತೀಯರಿಗೆ ಶಿಕ್ಷೆ ವಿಧಿಸಿದಂತೆ ಎಂದು ಜವಹರಲಾಲರೂ ಗುಡುಗಿದರು. ಸೆರೆಹಿಡಿದ ಅಜಾದ್ ಸೈನಿಕರ ಸಂಖ್ಯೆ ಹದಿನೇಳು ಸಾವಿರಕ್ಕೂ ಮೀರಿತ್ತು. ಅವರಾರೂ ತಪ್ಪೊಪ್ಪಿಗೆಗೆ ತಯಾರಿರಲಿಲ್ಲ. ಷಾನವಾಜ್, ದಿಲ್ಲೋನ್, ಸಹಗಲ್ ಇವರುಗಳು ವಿಚಾರಣೆಗೆ ಗುರಿಯಾದರು. ವಿಚಾರಣೆ ಬಹಿರಂಗವಾಗಿ ನಡೆಯಿತು. ಪ್ರತಿ ದಿನವು ಪತ್ರಿಕೆಗಳು ವಿಚಾರಣೆಯ ವಿವರಗಳನ್ನು ಪ್ರಕಟಿಸುತ್ತಿದ್ದವು. ಈ ಅಪರಾಧಿಗಳ ಪರ ವಾದ ಮಾಡಲು ಭೋಲಾಬಾಯಿ ದೇಸಾಯಿಯವರ ನೇತೃತ್ವದಲ್ಲಿ ಒಂದು ದೊಡ್ಡ ವಕೀಲರ ಗುಂಪೇ ವಾದಿಸಲು ಮುಂದಾಯಿತು. ಆ ಗುಂಪಿನಲ್ಲಿ ಬ್ಯಾರಿ-ಸ್ಟರ್ ಗೌನನ್ನು ಧರಿಸಿ ವಾದಮಾಡಲು ಹೊರಬಿದ್ದ ವಕೀಲರ ಪೈಕಿ ಜವಹರಲಾಲರೂ ಒಬ್ಬರು. ಕೋರ್ಟಿನ ಮುಂದೆ ಷಾನವಾಸ್ ಈ ಹೇಳಿಕೆ ನೀಡಿದರು. "ನಾನು ನೇತಾಜಿಯವರಲ್ಲಿ ಒಬ್ಬ ಮಹಾನ್ ನಾಯಕನನ್ನು ಕಂಡೆ. ಅವರನ್ನು ಹಿಂಬಾಲಿಸಲು ನಿಶ್ಚಯಿಸಿದೆ. ನನ್ನ ಮುಂದಿದ್ದ ಪ್ರಶ್ನೆ ಬ್ರಿಟೀಷ್ ದೊರೆ ಮುಖ್ಯವೇ? ದೇಶ ಮುಖ್ಯವೆ? ಎಂಬುದು. ನಾನು ನನ್ನ ದೇಶಕ್ಕೆ ನಿಷ್ಠೆ ತೋರುವುದೆಂದು ನಿಶ್ಚಯಿಸಿದೆ. ದೇಶಕ್ಕಾಗಿ ನನ್ನನ್ನೇ ಸಮರ್ಪಣೆ ಮಾಡಿಕೊಳ್ಳಲು ಸಂಕಲ್ಪ ಮಾಡಿದೆ. ಆ ರೀತಿಯಲ್ಲಿ ನಡೆದುಕೊಂಡೆ." ಸಲಹೆಗಾರರು ಈ ರೀತಿ ಹೇಳಿಕೆ ಇತ್ತರು. "ಭಾರತಕ್ಕೆ ಯಾವುದೇ ರಕ್ಷಣೆ ಒದಗಿಸಲು ಅಸಮರ್ಥವಾದ ಬ್ರಿಟೀಷ್ ಮಕುಟವು ನಮ್ಮಿಂದ ನಿಷ್ಠೆಯನ್ನು ನಿರೀಕ್ಷಿಸುವ ನೈತಿಕ ಹಕ್ಕನ್ನು ಕಳೆದುಕೊಂಡಿದೆ ಎಂದು ನಾನು ಪ್ರಾಮಾಣಿಕವಾಗಿ ನಂಬಿದ್ದೇನೆ."

ಮೇಜರ್ ಜನರಲ್ ಥೋನ್ಸ್ಲೆ ನ್ಯಾಯಾಲಯದಲ್ಲಿ ಈ ಕೆಳಕಂಡ ಹೇಳಿಕೆ ಇತ್ತರು. "ನೇತಾಜಿ ಭೋಸರ ಸತ್ವಶಾಲಿ ನಾಯಕತ್ವದಿಂದ ಸ್ಫೂರ್ತಿಗೊಂಡ ಪೂರ್ವ ಏಷ್ಯಾದ ಮೂವತ್ತು ಲಕ್ಷ ಭಾರತೀಯರು ಸ್ವಾತಂತ್ರ್ಯಕ್ಕಾಗಿ ತಮ್ಮ ಸರ್ವಸ್ವವನ್ನು ಅರ್ಪಣೆಮಾಡಿದರು." ಐ.ಎನ್.ಎ. ಸೈನಿಕರ ಪರವಾಗಿ ಬೊಲಾಬಾಯಿ ದೇಸಾಯಿಯವರು ಅದ್ಭುತವಾಗಿ ವಾದಮಾಡಿದರು. ಅವರ ವಾದದ ಸರಣಿ ಹೀಗಿತ್ತು. "ಸ್ವಾತಂತ್ರ ಕಳೆದುಕೊಂಡ ಒಂದು ದೇಶ ಸೈನ್ಯವನ್ನು ಕಟ್ಟಿ ಅದನ್ನು ಮತ್ತೆ ಪಡೆಯಲು ಯುದ್ಧ ಹೂಡುವುದು ಆ ದೇಶದ ಆಜನ್ಮ ಸಿದ್ಧ ಹಕ್ಕು. ಅಜಾದ್ ಹಿಂದ್ ಹಂಗಾಮಿ ಸರ್ಕಾರ ಒಂಬತ್ತು ರಾಷ್ಟ್ರಗಳ ಮನ್ನಣೆ ಪಡೆದಿತ್ತು. ಅಜಾದ್ ಹಿಂದ್ ಸೇನೆ ಅಂತಾರಾಷ್ಟ್ರೀಯ ಕಾನೂನಿಗನುಗುಣವಾಗಿ ತನ್ನದೇ ಆದ ಸಂಹಿತೆಗೆ ಅನುಗುಣವಾಗಿ ಅಸ್ತಿತ್ವಕ್ಕೆ ಬಂದಿತು ಎರಡು ದೇಶಗಳ ಸೈನಿಕರ ಮಧ್ಯೆ ಯುದ್ಧ ನಡೆದಾಗ, ಗುಂಡೇಟಿನಿಂದ ಕೊಲ್ಲಲ್ಪಟ್ಟಾಗ ಅದನ್ನು ಕೊಲೆ ಎಂದು ಪರಿಗಣಿಸಲಾಗದು. ನಾಗರೀಕ ಕಾನೂನುಗಳು ಸೈನಿಕರಿಗೆ ಅನ್ವಯಿಸುವುದಿಲ್ಲ. ಆದುದರಿಂದ ಅಜಾದ್ ಹಿಂದ್ ಸೈನಿಕರು ದಂಗೆಕೋರರಲ್ಲ" ಎಂದು ವಾದಮಾಡಿದರು. ಆದರೂ ಮೇಲೆ ಹೇಳಿದ ಮೂರು ಅಧಿಕಾರಿಗಳಿಗೆ ಜೀವಾವದಿ ಶಿಕ್ಷೆ ವಿಧಿಸಲಾಯಿತು. ಇಡೀ ಭಾರತ ದೇಶ ಈ ಬಗ್ಗೆ ಅತೃಪ್ತಿ ತೋರಿಸಿದ್ದನ್ನು ಸೇನೆಯ

ಸುಭಾಷ್ ಬೋಸರ ಬಾಲ್ಯಕಾಲ

ಸಿ. ನಾಗಣ್ಣ
ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು, ಮೈಸೂರು

[೧೮೯೭ರಿಂದ ೧೯೨೧ರವರೆಗೆ ನೇತಾಜಿ ಸುಭಾಷ್‌ಚಂದ್ರ ಬೋಸರು ಬರೆದ ಆತ್ಮಕಥೆ –ಇದು ಅಪೂರ್ಣ ಆತ್ಮಕಥೆ–ಹಾಗೂ ಪತ್ರಗಳನ್ನು ಒಟ್ಟುಗೂಡಿಸಿ "ಆ್ಯನ್ ಇಂಡಿಯನ್ ಪಿಲ್‌ಗ್ರಿಮ್" ೧೯೬೫) ಎಂಬ ಹೊತ್ತಗೆಯನ್ನು ಹೊರತರಲಾಗಿದೆ. ನೇತಾಜಿಯವರ ಬಾಲ್ಯಕಾಲ ಹಾಗೂ ಅವರು ರೂಪುಗೊಂಡ ರೀತಿಯನ್ನು ತಿಳಿಯಬಯಸುವವರಿಗೆ ಈ ಗ್ರಂಥ ಅತ್ಯಮೂಲ್ಯವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಈ ಅಪೂರ್ಣ ಆತ್ಮಕಥೆಯು ಸುಭಾಷ್‌ಚಂದ್ರರ ಕೇಂಬ್ರಿಜ್ ದಿನಗಳನ್ನು (೧೯೨೧) ದಾಖಲು ಮಾಡಿ ನಿಂತುಬಿಡು ತ್ತದೆ. ಮುದ್ರೈವದಿಂದ ಅವರು ತಮ್ಮ ಕಿಶೋರಾವಸ್ಥೆಯಲ್ಲಿ ತಮ್ಮ ಹತ್ತಿರದ ಬಂಧುಗಳಿಗೆ ಬರೆದ ಪತ್ರಗಳನ್ನೂ ಇಲ್ಲಿ ಲಭ್ಯಗೊಳಿಸಲಾಗಿದೆ. ೧೯೩೮ರ ಜನವರಿಯಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಅವರು ಆಯ್ಕೆಯಾದ ಬಳಿಕ ಆಗಿನ ರಾಜಕೀಯ ಆಲ್ಲೋಲಕಲ್ಲೋಲದಲ್ಲಿ ಅವರು ಸಿಲುಕಿದ ಕಾರಣ ಸಮಯ ದೊರಕದೆ ತಮ್ಮ ಆತ್ಮಕಥೆಯನ್ನು ಪೂರ್ಣಗೊಳಿಸ ಲಾಗಲಿಲ್ಲ. ಮೂಲ ಹಸ್ತಪ್ರತಿಯ ಮೊದಲ ಪುಟದ ಮೇಲೆ ಅವರು ಬರೆದಿರುವ ಟಿಪ್ಪಣಿ ಯಿಂದಲೇ ಪೂರ್ಣಪ್ರಮಾಣದ ಆತ್ಮಕಥೆಯನ್ನು ಬರೆಯಲು ಅವರು ಉದ್ದೇಶಿಸಿದ್ದರೆಂದು ಸ್ಪಷ್ಟವಾಗುತ್ತದೆ. ಪ್ರಸ್ತುತ ಭಾಗವು ಈ ಅತ್ಯಮೂಲ್ಯವಾದ 'ಅಪೂರ್ಣ ಆತ್ಮಕಥೆ'ಯ ನಾಲ್ಕನೆಯ ಅಧ್ಯಾಯದ ಅನುವಾದವಾಗಿದೆ.]

ಶಾಲಾ ಜೀವನ (೧)

ನಾನು ಶಾಲೆಗೆ ಹೋಗಬೇಕೆಂದು ಮನೆಯವರು ಸೂಚಿಸಿದಾಗ ನನ್ನ ಐದನೆಯ ಹುಟ್ಟು ಹಬ್ಬ ಸಮೀಪಿಸುತ್ತಿತ್ತು (ಜನವರಿ, ೧೯೦೨). ಇಂಥ ಸನ್ನಿವೇಶದಲ್ಲಿ ಇತರೆ ಮಕ್ಕಳ ಅನುಭವ ಹೇಗೊ ತಿಳಿಯದು, ಆದರೆ ನನಗೆ ಮಾತ್ರ ಅಮಿತಾನಂದವಾಗಿತ್ತು. ಮನೆಯಲ್ಲಿ ಅಣ್ಣಂದಿರು ಹಾಗೂ ಅಕ್ಕಂದಿರು ಉತ್ತಮ ವಸ್ತ್ರ ಧರಿಸಿಕೊಂಡು ಶಾಲೆಗೆ ಹೋಗುವುದನ್ನು ಪ್ರತಿನಿತ್ಯ ನೋಡುವಾಗ ನಾನು ಅವರಷ್ಟು ದೊಡ್ಡವನಾಗಿಲ್ಲ ಎಂಬ ಭಾವನೆ ಹಾಗಾಗಿ ಮನೆಯಲ್ಲೇ ಉಳಿಯಬೇಕೆಂಬ ವಾಸ್ತವ ಅಹಿತಕರವಾಗಿ ತೋರುತ್ತಿತ್ತು. ನನಗೆ ಹಾಗೆ ಅನ್ನಿಸಿದ್ದರ ಪರಿಣಾಮವಾಗಿ ಶಾಲೆಗೆ ಹೋಗಬೇಕೆನ್ನುವ ಸೂಚನೆಯಿಂದ ನನಗೆ ಖುಷಿಯಾಗಿತ್ತು.

ನನ್ನ ಪಾಲಿಗೆ ಅದೊಂದು ಕೆಂಪು ಅಕ್ಷರ ದಲ್ಲಿ ಬರೆದಿಡಬೇಕಾದ ದಿನ ರಜಾಕಾಲ ವನ್ನು ಹೊರತುಪಡಿಸಿ ಬಾಕಿಯಂತೆ ಮನೆ ಯಲ್ಲಿ ಉಳಿಯದ ಗೌರವಾನ್ವಿತರಾದ ಹಿರಿಯರ ಸಾಲಿಗೆ ನಾನು ಸೇರುವ ಸಮಯ ಒದಗಿ ಬಂದಿತ್ತು. ತರಗತಿಗಳು ಬೆಳಗಿನ ಹತ್ತು ಗಂಟೆಗೆ ಸರಿಯಾಗಿ ಪ್ರಾರಂಭವಾಗು ವುದರಿಂದ ನಾವು ಹತ್ತರ ಸುಮಾರಿಗೆ ಮನೆ ಬಿಡಬೇಕಾಗಿತ್ತು. ಹೆಚ್ಚು ಕಡಿಮೆ ನನ್ನ ವಾರಗೆಯವರೇ ಆದ ನನ್ನ ಇಬ್ಬರ

ಚಿಕ್ಕಪ್ಪಂದಿರೂ ಕೂಡ ಅವತ್ತೇ ಶಾಲೆಗೆ ಸೇರುವವರಿದ್ದರು. ನಾವೆಲ್ಲರೂ ಸಿದ್ಧರಾದ ಬಳಿಕ ನಮ್ಮನ್ನು ಸಾಗಿಸಲು ಕಾಯುತ್ತ ನಿಂತಿದ್ದ ಗಾಡಿಯಲ್ಲಿ ಕುಳಿತುಕೊಳ್ಳಲು ನಾವು ಲಗುಬಗೆಯಿಂದ ಓಡಿದೆವು. ನನ್ನ ದುರಾದೃಷ್ಟವೆಂಬಂತೆ ಅದೇ ಸಮಯದಲ್ಲಿ ನಾನು ಕಾಲು ಜಾರಿ ಮುಗ್ಗರಿಸಿಬಿಟ್ಟೆ. ನನಗೆ ಪೆಟ್ಟಾಯಿತು, ತಲೆಸುತ್ತಲೂ ಬ್ಯಾಂಡೇಜ್ ಕಟ್ಟಿಕೊಂಡು ಹಾಸಿಗೆಯ ಮೇಲೆ ಮಲಗಿ ವಿಶ್ರಾಂತಿ ಪಡೆಯಬೇಕೆಂದು ಸೂಚನೆಯಾಯಿತು. ಚಕ್ಕಡಿಯ ಗಾಲಿಗಳ ಶಬ್ದ ದೂರದೂರವಾಗತೊಡಗಿತು. ಅದೃಷ್ಟವಂತರು ಹೊರಟಿದ್ದರು; ನತದೃಷ್ಟನಾದ ನಾನು ಕಗ್ಗತ್ತಲಿನ ಕಣ್ಣೋಟಕ್ಕೆ ಈಡಾದವನಂತೆ ಎಲ್ಲಾ ಭರವಸೆಯನ್ನು ಕಳೆದುಕೊಂಡು ಮಲಗಿದ್ದೆ.

ಇಪ್ಪತ್ನಾಲ್ಕು ಗಂಟೆಗಳ ನಂತರ ನನಗೆ ಸ್ವಲ್ಪ ಸಮಾಧಾನವಾಗಿತ್ತು.

ನಮ್ಮದು ಮಿಷನರಿ ಶಾಲೆ; ಹಾಗಾಗಿ ಬಹುತೇಕ ಯುರೋಪಿಯನ್ ಹಾಗೂ ಆಂಗ್ಲೋ-ಇಂಡಿಯನ್ ಬಾಲಕ-ಬಾಲಕಿಯರಿಗೆ ಸ್ಥಳಾವಕಾಶವಿದ್ದು ಭಾರತೀಯರಿಗೆ ಕೆಲವು ಸ್ಥಳಗಳು (ಸುಮಾರು ಶೇಕಡಾ ೧೫ ಭಾಗ) ಲಭ್ಯವಿರುತ್ತಿದ್ದವು. ನಮ್ಮ ಎಲ್ಲಾ ಸೋದರ ಸೋದರಿಯರು ಈ ಶಾಲೆಗೆ ಸೇರಿದ್ದ ಕಾರಣ, ನಾನೂ ಇದೇ ಶಾಲೆಗೆ ಸೇರಿಕೊಂಡೆ. ನಮ್ಮ ತಂದೆ ತಾಯಿಗಳು ಈ ಶಾಲೆಯನ್ನೇ ಏಕೆ ಆರಿಸಿಕೊಂಡರೋ ನನಗೆ ತಿಳಿಯದು; ಇಲ್ಲಿ ನಾವು ಬೇಗ ಇಂಗ್ಲಿಷ್ ಭಾಷೆ ಕಲಿತುಕೊಳ್ಳುತ್ತೇವೆ ಎಂಬುದು ಅವರ ಉದ್ದೇಶವಾಗಿರಬಹುದು; ಜೊತೆಗೆ ಆ ಕಾಲದಲ್ಲಿ ಇಂಗ್ಲಿಷ್ ಭಾಷೆಗೆ ಬಹಳ ಮನ್ನಣೆ ಬೇರೆ ಇದ್ದಿತು. ನನಗಿನ್ನೂ ನೆನಪಿದೆ ಶಾಲೆಗೆ ಸೇರುವ ಸಂದರ್ಭದಲ್ಲಿ ನನಗೆ ಬರಿ ಇಂಗ್ಲಿಷ್ ವರ್ಣಮಾಲೆ ಮಾತ್ರ ಪರಿಚಯವಿದ್ದಿತು, ಅಷ್ಟೆ. ಒಂದು ಚೂರೂ ಇಂಗ್ಲಿಷ್ ಮಾತನಾಡಲು ಬಾರದ ನಾನು ಮೊದಮೊದಲು ಹೇಗೆ ಅಲ್ಲಿ ನಿಭಾಯಿಸಿದೆ ಎಂಬುದನ್ನೂ ನಾನೀಗ ಕಲ್ಪಿಸಿಕೊಳ್ಳಲಾರೆ. ಆರಂಭದಲ್ಲಿ ಇಂಗ್ಲಿಷ್‌ನಲ್ಲಿ ವ್ಯವಹರಿಸಲು ನಾನು ಪಟ್ಟ ಮೊದಲನೇ ಪ್ರಯತ್ನದ ಬಗ್ಗೆ ಹೇಳುವೆ. ನಮಗೆ ಬಳಪವನ್ನು ಕೊಟ್ಟು ಬರೆಯುವುದಕ್ಕೆ ಮೊದಲು ಚೂಪು ಮಾಡಿ ಎಂದು ಹೇಳಿದ್ದರು. ನಾನು ನನ್ನ ಚಿಕ್ಕಪ್ಪನೊಬ್ಬನಿಗಿಂತ ಚೆನ್ನಾಗಿ ಚೂಪು ಮಾಡಿದ್ದೆ. ಆ ಸಂಗತಿಯತ್ತ ಗಮನ ಸೆಳೆದು ಉಪಾಧ್ಯಾಯಿನಿಗೆ ಹೇಳಿದೆ: 'ರಣೇಂದ್ರ ಮೋಟ್, ಐ ಶೋರ್* ಇಷ್ಟು ಹೇಳಿ ನಾನು ಇಂಗ್ಲಿಷಿನಲ್ಲಿ ಮಾತನಾಡಿರುವುದಾಗಿ ತಿಳಿದಿದ್ದೆ.

ನಮ್ಮ ಉಪಾಧ್ಯಾಯರಲ್ಲಿ ಎಲ್ಲರೂ ಆಂಗ್ಲೋ-ಇಂಡಿಯನ್ನರು (ಮತ್ತು ಬಹುತೇಕ ಮಹಿಳೆಯರು) ನಮ್ಮ ಮುಖ್ಯೋಪಾಧ್ಯಾಯರು ಮತ್ತು ಮುಖ್ಯೋಪಾಧ್ಯಾಯಿನಿಯನ್ನು ಹೊರತುಪಡಿಸಿ; ಶ್ರೀ ಮತ್ತು ಶ್ರೀಮತಿ ಯಂಗ್ ಇಂಗ್ಲೆಂಡಿನಿಂದ ಬಂದವರಾಗಿದ್ದರು. ನಮ್ಮ ಬಹುತೇಕ ಶಿಕ್ಷಕರನ್ನು ನಾವು ಇಷ್ಟಪಡುತ್ತಿರಲಿಲ್ಲ. ನಾವು ಶ್ರೀ ಯಂಗ್ ಅವರನ್ನು ಗೌರವಿಸುತ್ತಿದ್ದರೂ ಅವರನ್ನು ಕಂಡರೆ ನಮಗೆ ಹೆದರಿಕೆ; ಕಾರಣ ಬೆತ್ತವನ್ನು ಅವರು

* ಬಂಗಾಳಿ ಭಾಷೆಯಲ್ಲಿ 'ಮೋಟಾ' ಎಂದರೆ ದಪ್ಪ ಅಂತ. 'ಮೋಟ್' ಎಂಬುದು ಇದರ ಅಪಭ್ರಂಶ. ಹಾಗೆಯೇ 'ಸಣ್ಣ' ಎಂಬುದಕ್ಕೆ 'ಶೊರೂ' ಎಂಬುದು ಬಂಗಾಳಿ ಪದ. 'ಶೋರ್' ಎಂಬುದು ಅದರ ಅರ್ಥ.

ಬಲು ಧಾರಾಳವಾಗಿ ಉಪಯೋಗಿಸುತ್ತಿದ್ದರು. ಮಿಸ್ ಕ್ಯಾಡೊಗನ್ ತರಹದವರನ್ನು ನಾವು ಸಹಿಸಿಕೊಳ್ಳುತ್ತಿದ್ದೆವಾದರೂ ಮಿಸ್ ಎಸ್. ತರಹದವರನ್ನು ಮನಸಾ ದ್ವೇಷಿಸುತ್ತಿದ್ದೆವು; ಹಾಗಾಗಿ ಆಕೆ ಗೈರು ಹಾಜರಿಯಾಗಿದ್ದಾರೆ ಎಂಬ ಸುದ್ದಿ ತಿಳಿದ ಕೂಡಲೇ 'ಹೋ' ಎಂದು ಉಲ್ಲಾಸಪಡುತ್ತಿದ್ದೆವು. ಶ್ರೀಮತಿ ಯಂಗ್‌ರನ್ನು ನಾವು ಇಷ್ಟಪಡುತ್ತಿದ್ದೆವು. ಆದರೆ ಇನ್‌ಫೆಂಟ್ ತರಗತಿಯ ನಮ್ಮ ಮೊದಲನೇ ಉಪಾಧ್ಯಾಯಿನಿಯಾದ ಮಿಸ್ ಸಾರಾ ಲಾರೆನ್ಸ್ ಎಂದರೆ ನಮಗೆ ಬಲು ಪ್ರೀತಿ. ಮಗುವಿನ ಮನಸ್ಸನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ ಆ ಉಪಾಧ್ಯಾಯಿನಿಯಿಂದ ನಾವು ಬಹಳ ಆಕರ್ಷಿತರಾಗಿದ್ದೆವು. ನನಗೆ ಮಾತನಾಡಲು ಇಂಗ್ಲಿಷ್ ಅಷ್ಟು ಚೆನ್ನಾಗಿ ಬಾರದಿದ್ದ ಸಮಯದಲ್ಲಿ ಅವರಲ್ಲದಿದ್ದರೆ ನಾನು ನಿಜವಾಗಿಯೂ ಮುಂದುವರಿಯುತ್ತಿದ್ದೆನೇ? ಹೇಳುವುದು ಕಷ್ಟ.

ಬಹಳಷ್ಟು ಮಂದಿ ಉಪಾಧ್ಯಾಯರು ಆಂಗ್ಲೋ-ಇಂಡಿಯನ್ನರೇ ಆದರೂ ಇಂಗ್ಲಿಷ್ ಮಾದರಿಯನ್ನೇ ಅನುಸರಿಸಿ ಶಾಲೆಯನ್ನು ನಡೆಸುತ್ತಿದ್ದರು. ಅಲ್ಲಿ ನಾವು ಕಲಿತ ಸಂಗತಿಗಳು ಅಪ್ಪಟ ಭಾರತೀಯ ಶಾಲೆಯಲ್ಲಿ ನಮಗೆ ದಕ್ಕುತಿದ್ದುವೇ ಹೇಳುವುದು ಸುಲಭವಲ್ಲ. ಭಾರತೀಯ ಶಾಲೆಗಳಲ್ಲಿ ಮೂರು ಹೊತ್ತೂ ಓದು ಓದು ಹೇಳುವ ಕ್ರಮವನ್ನು ಅಲ್ಲಿ ಅನುಸರಿಸುತ್ತಿರಲಿಲ್ಲ. ಅಧ್ಯಯನದ ಹೊರಗೆ ನಮ್ಮ ನಡೆನುಡಿ, ಶಿಸ್ತು, ಸಮಯಪ್ರಜ್ಞೆ ಇವುಗಳಿಗೆ ಹೆಚ್ಚು ಒತ್ತುಕೊಡುತ್ತಿದ್ದರು. ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಪ್ರತಿಯೊಬ್ಬ ವಿದ್ಯಾರ್ಥಿಗೂ ಶಿಕ್ಷಕರಿಂದ ವಿಶೇಷ ಗಮನ ಲಭ್ಯವಾಗುತ್ತಿತ್ತು; ಅಂದಂದಿನ ಕೆಲಸದ ಬಗ್ಗೆ

ವಿಚಾರಿಸಿಕೊಳ್ಳುತ್ತಿದ್ದ ಕಾರಣ ನಮ
ನಿಯತವಾದ ವ್ಯಾಸಂಗಕ್ಕೆ ಅನುಕೂ
ವಾಗಿತ್ತು; ಭಾರತೀಯ ಶಾಲೆಗಳಲ್ಲಿ
ಕ್ರಮವನ್ನು ಕಾಣಲಾಗುತ್ತಿರಲಿಲ್ಲ. ಇದ
ಪರಿಣಾಮವಾಗಿ ಪರೀಕ್ಷೆ ಸಮೀಪವಾ
ತೆಂದರೆ ವಿಶೇಷವಾದ ತಯಾರಿ ಏನ
ಬೇಕಾಗುತ್ತಿರಲಿಲ್ಲ. ಮೇಲಾಗಿ ಇಂಗ್ಲಿ
ಭಾಷೆಯನ್ನು ಅಲ್ಲಿ ಕಲಿಸುತ್ತಿದ್ದ ರೀ
ಯಾವುದೇ ಭಾರತೀಯ ಶಾಲೆಯಲ್ಲಿ ಲಭ
ವಾಗದ ಗುಣಮಟ್ಟವನ್ನು ಹೊಂದಿತ್ತು
ಅಂಥ ಶಾಲೆಗೆ ಸಲ್ಲಿಸಬೇಕಾದ ಗೌರವನ
ಸಮರ್ಪಿಸಿದ ಬಳಿಕ ಇಂದಿನ ಪರಿಸ್ಥಿತಿಯ
ಭಾರತೀಯ ವಿದ್ಯಾರ್ಥಿಯೊಬ್ಬ ಅಂ
ಶಾಲೆಗೆ ಸೇರಬೇಕೆ ಎಂದು ನಾನು ತಿಳಿವಳಿ
ನೀಡಲಾರೆ. ಒಂದು ವ್ಯವಸ್ಥೆ ಆ ಶಿಕ್ಷ
ಕ್ರಮದಲ್ಲಿ ನನಗೆ ಗೋಚರವಾಗಿದ
ತಾದರೂ ಭಾರತೀಯ ವಿದ್ಯಾರ್ಥಿಗ
ಅಗತ್ಯಕ್ಕನುಗುಣವಾಗಿ ಹೊಂದಿಸಿದಂ
ಶಿಕ್ಷಣ ಕ್ರಮವಲ್ಲ ಅದು ಎಂಬ ಮಾತನ
ಹೇಳಬೇಕು. ಬೈಬಲ್‌ನ ಶಿಕ್ಷಣಕ್ಕೆ ವಿ
ರೀತ ಪ್ರಾಮುಖ್ಯತೆಯನ್ನು ನೀಡಲಾಗಿ
ಲ್ಲದೆ, ಅದನ್ನು ಬೋಧಿಸುವ ಕ್ರಮ ಕೂ
ಅವೈಜ್ಞಾನಿಕವೂ, ಅನಾಕರ್ಷಣೀಯವ
ಆಗಿತ್ತು. ನಮಗೆ ಅರ್ಥವಾಗಲಿ ಆಗದಿರ
ಬೈಬಲ್ ಪಾಠವನ್ನು ನಾವು ಕಂಠಪಾ
ಮಾಡಬೇಕಾಗಿತ್ತು, ನಾವು ಧರ್ಮಗ್ರಂ
ವನ್ನು ಕಂಠಸ್ಥ ಮಾಡಿಕೊಳ್ಳುತ್ತಿರು
ಪಾದ್ರಿಗಳೇನೋ ಎನ್ನುವಂತೆ. ಸುಮಾ
ಏಳು ವರ್ಷಗಳ ಕಾಲ ಪ್ರತಿನಿತ್ಯವೂ ನಮ
ಬೈಬಲ್ ಪಾಠವಾಯಿತಾದರೂ, ಒಂದ
ಕೊಂಚವೂ ಉತ್ಪ್ರೇಕ್ಷೆಯಿಲ್ಲದೆ ಹೇಳ
ತ್ತೇನೆ, ಮುಂದೆ ಕಾಲೇಜು ಶಿಕ್ಷಣಕ್ಕಾ
ಸೇರಿಕೊಂಡ ನಂತರವೇ ಬೈಬಲ್ಲನ
ನಾನು ಇಷ್ಟಪಡುವಂತಾದದ್ದು.

ನಾವು ಆದಷ್ಟು ಆಂಗ್ಲರಂತೆಯೇ ಆಲೋಚಿಸುವಂತಾಗಲೆಂಬ ಹುನ್ನಾರಿನಿಂದ ಪಠ್ಯ ವಿಷಯಗಳನ್ನು ಅಳವಡಿಸಿದ್ದರು. ಬ್ರಿಟನ್ನಿನ ಚರಿತ್ರೆ ಮತ್ತು ಭೂಗೋಳದ ಬಗ್ಗೆ ನಾವು ಭಾರತದ ಚರಿತ್ರೆ, ಭೂಗೋಳಕ್ಕಿಂತ ಹೆಚ್ಚಾಗಿ ತಿಳಿದುಕೊಂಡಿದ್ದೆವು; ಅಲ್ಲದೆ ಭಾರತೀಯ ಹೆಸರುಗಳನ್ನು ಉಚ್ಚಾರ ಮಾಡುವಾಗ ವಿದೇಶೀಯರಂತೆ ನಟಿಸುತ್ತಿದ್ದೆವು. 'ಬೋನಸ್, ಬೋನಾ, ಬೋನಮ್' ಎಂದು ಲ್ಯಾಟಿನ್ ವಿಭಕ್ತಿ ರೂಪಗಳನ್ನು ನಾವು ಮೊದಲು ಪರಿಚಯ ಮಾಡಿಕೊಂಡಿದ್ದೇವೇ ಹೊರತು ಪಿ.ಇ. ಶಾಲೆ ಬಿಡುವ ತನಕ 'ಗಜಃ, ಗಜೌ, ಗಜಾಃ;' ಎಂಬ ಸಂಸ್ಕೃತ ವಿಭಕ್ತಿ ರೂಪದ ಬಗ್ಗೆ ನಾವು ತಲೆಕೆಡಿಸಿಕೊಂಡಿರಲಿಲ್ಲ. ಸಂಗೀತಕ್ಕೆ ಬಂದರೆ ನಮಗೆ 'ಡೊ, ರೆ, ಮಿ, ಫಾ'ದ ವಿಷಯ ಗೊತ್ತಿತ್ತೇ ವಿನಃ 'ಸ, ರಿ, ಗ, ಮ' ತಿಳಿದಿರಲಿಲ್ಲ. ವಾಚಿಕೆಗಳ ವಿಷಯವಾಗಿ ಹೇಳುವುದಾದರೆ ಅಲ್ಲೆಲ್ಲಾ ಬರಿ ಆಂಗ್ಲ ಚರಿತ್ರೆ ಅಥವಾ ಕಿನ್ನರ ಕಥೆಗಳಿಗೆ ಸಂಬಧಿಸಿದ ವಿಷಯಗಳೇ ಹೊರತು ಒಂದೇ ಒಂದು ಭಾರತೀಯ ಉಲ್ಲೇಖ ಕಾಣಸಿಗುತ್ತಿರಲಿಲ್ಲ. ಇನ್ನು ಭಾಷೆಗೆ ಬಂದರೆ, ಯಾವುದೇ ಭಾರತೀಯ ಭಾಷೆಯನ್ನು ಅಲ್ಲಿ ಕಲಿಸುತ್ತಿರಲಿಲ್ಲ, ಹಾಗಾಗಿ ಭಾರತೀಯ ಶಾಲೆಯೊಂದಕ್ಕೆ ಸೇರುವ ತನಕ ನಮ್ಮ ಮಾತೃಭಾಷೆಯನ್ನು ನಾವು ಸಂಪೂರ್ಣವಾಗಿ ಕಡೆಗಣಿಸಿದೆವು.

ಈ ಮೇಲಿನ ಬರೆಹದ ಆಧಾರದ ಮೇಲೆ ಶಾಲೆಯಲ್ಲಿ ನಾವು ಖುಷಿಯಿಂದ ಇರಲಿಲ್ಲವೆಂಬ ತೀರ್ಮಾನಕ್ಕೆ ಬಂದರೆ ತಪ್ಪಾಗುತ್ತದೆ. ಇದಕ್ಕೆ ಬದಲಾಗಿ, ನಾವು ಸಂತೋಷವನ್ನು ಕಂಡದ್ದೂ ಇದೆ. ಮೊದಲ ಕೆಲವು ವರ್ಷಗಳವರೆಗೆ ಭಾರತೀಯ ಸನ್ನಿವೇಶಕ್ಕೆ ತಕ್ಕಂತೆ ಶಿಕ್ಷಣ ನೀಡಲಾಗುತ್ತಿಲ್ಲ ಎಂಬ ಸಂಗತಿ ನಮಗೆ ಹೊಳದೇ ಇರಲಿಲ್ಲ. ನಮ್ಮ ಪಾಲಿಗೆ ಬಂದದ್ದನ್ನು ನಾವು ಚೆನ್ನಾಗಿ ಕಲಿತೆವಲ್ಲದೆ ಇತರೆ ಮಕ್ಕಳ ರೀತಿಯಲ್ಲೇ ನಾವು ಶಾಲೆಯ ನಿಯಮಕ್ಕೆ ಬದ್ಧರಾಗಿ ನಡೆದುಕೊಳ್ಳುತ್ತಿದ್ದೆವು. ಶಿಸ್ತಿನಿಂದ ನಡೆದುಕೊಳ್ಳುವ ಬಾಲಕ ಬಾಲಕಿಯರನ್ನು ಹುಟ್ಟುಹಾಕುವ ಶಾಲೆಯೆಂದು ಆ ಶಾಲೆ ಕೀರ್ತಿಗೆ ಭಾಜನವಾಗಿತ್ತು; ಹಾಗಾಗಿ, ನಾವು ಆ ನಿರೀಕ್ಷೆಗನುಗುಣವಾಗಿ ವರ್ತಿಸುತ್ತಿದ್ದೆವು. ನಮ್ಮ ತಂದೆ ತಾಯಿಗಳಿಗೆ ನಮ್ಮ ಪ್ರಗತಿಯಿಂದ ಸಂತೋಷವೇ ಆಗಿರಬೇಕೆಂದು ನನ್ನ ಭಾವನೆ. ಶಾಲೆಯ ಅಧಿಕಾರಿಗಳು ನಮ್ಮ ಕುಟುಂಬದವರ ಬಗ್ಗೆ ಗೌರವವಿಟ್ಟುಕೊಂಡಿದ್ದರು. ಕಾರಣ ಯಾವುದೇ ತರಗತಿಯಲ್ಲಿರಲು ಸಾಮಾನ್ಯವಾಗಿ ನಮ್ಮ ಕುಟುಂಬದ ಮಕ್ಕಳು ಉನ್ನತ ಶ್ರೇಣಿಯಲ್ಲಿರುತ್ತಿದ್ದೆವು.

ಕ್ರೀಡೆಯ ಬಗ್ಗೆಯೂ ಕೊಂಚ ಗಮನ ಕೊಟ್ಟಿದ್ದರು, ಆದರೆ ಆಂಗ್ಲ ಮಾದರಿಯಲ್ಲಿ ನಡೆಯುವ ಶಾಲೆಯೊಂದು ಕೊಡಬೇಕಾದ ಪ್ರಮಾಣದಲ್ಲಿ ಕ್ರೀಡೆ ಇಲ್ಲಿ ಪ್ರಧಾನವಾಗಿರಲಿಲ್ಲ. ನಮ್ಮ ಮುಖ್ಯೋಪಾಧ್ಯಾಯರು ಕ್ರೀಡೆಯಲ್ಲಿ ಅಷ್ಟಾಗಿ ಆಸಕ್ತಿ ಹೊಂದಿದ್ದವರಲ್ಲದ ಕಾರಣ ಹೀಗಾಗಿರಬೇಕು. ದೃಢ ಮನಸ್ಸಿನವರೂ ವಿಶಿಷ್ಟ ವ್ಯಕ್ತಿತ್ವದವರೂ ಆದ ನಮ್ಮ ಮುಖ್ಯೋಪಾಧ್ಯಾಯರ ಛಾಪು ಶಾಲೆಯ ಆವರಣದೊಳಗೆ ಪ್ರತಿಯೊಂದರ ಮೇಲೂ ಒತ್ತಿತ್ತು. ಬಹಳ ಶಿಸ್ತುಪರಿಪಾಲಕರಾಗಿದ್ದ ಅವರು ಸನ್ನಡತೆಯ ಬಗ್ಗೆ ಕೊಂಚವೂ ರಾಜಿ ಮಾಡಿಕೊಳ್ಳದ ವ್ಯಕ್ತಿ. ಬೇರೆ ಬೇರೆ ವಿಷಯಗಳಿಗಷ್ಟೇ ಅಂಕಗಳನ್ನು ನೀಡದೆ ಅಂಕ

ಪಟ್ಟಿಯಲ್ಲಿ (೧) ನಡತೆ, (೨) ವರ್ತನೆ, (೩) ಅಚ್ಚುಕಟ್ಟುತನ, (೪) ಸಮಯ ಪರಿಪಾಲನೆ ಈ ವಿಷಯಗಳಿಗೂ ಅಂಕವನ್ನು ನೀಡುತ್ತಿದ್ದರು. ಹಾಗಾಗಿ ಆ ಶಾಲೆಯ ಬಾಲಕ, ಬಾಲಕಿಯರು ತುಂಬಾ ಶಿಸ್ತಿನ ವಿದ್ಯಾರ್ಥಿಗಳಾಗಿ ರೂಪುಗೊಳ್ಳುತ್ತಿದ್ದರು. ತಪ್ಪು ನಡವಳಿಕೆಯ ಸಂದರ್ಭದಲ್ಲಿ ಬೆತ್ತದ ಏಟು ಶಿಕ್ಷೆಗೆ ಹುಡುಗರು ಗುರಿಯಾಗಬೇಕಾಗಿತ್ತು*; ಈ ಶಿಕ್ಷೆಯನ್ನು ಕೊಡಬಲ್ಲ ಅಧಿಕಾರ ಇದ್ದದ್ದು ಕೇವಲ ಇಬ್ಬರೇ ಇಬ್ಬರಿಗೆ: ಮುಖ್ಯೋಪಾಧ್ಯಾಯರು ಮತ್ತು ಅವರ ಸಹಧರ್ಮಿಣಿ.

ಶ್ರೀ ಯಂಗ್ ಅವರಲ್ಲಿ ಕೆಲವು ವಿಲಕ್ಷಣೆಗಳಿದ್ದವು, ಹಾಗಾಗಿ, ಅವರನ್ನು ಆಗಾಗ್ಗೆ ನಮ್ಮ ಹಾಸ್ಯಕ್ಕೆ ಗುರಿಮಾಡಿಕೊಳ್ಳುತ್ತಿದ್ದೆವು. ಅವರಿಗೊಬ್ಬ ಅಣ್ಣ ಇದ್ದರು; ಬ್ರಹ್ಮಚಾರಿಯಾದ ಆ ವ್ಯಕ್ತಿ ಮತಪ್ರಚಾರಕರಾಗಿದ್ದರು—ಗೌರವ ಹುಟ್ಟಿಸುವ ದಾಡಿ ಬಿಟ್ಟಿದ್ದರು—ಚಿಕ್ಕ ಮಕ್ಕಳೆಂದರೆ ಅವರಿಗೆ ಪಂಚಪ್ರಾಣ; ಅವರೊಡನೆ ಆಡಲು ಎಲ್ಲಿಲ್ಲದ ಸಂಭ್ರಮ. ಅವರಿಂದ ನಮ್ಮ ಮುಖ್ಯೋಪಾಧ್ಯಾಯರನ್ನು ಪ್ರತ್ಯೇಕಿಸಿ ಕರೆಯಲು ನಮ್ಮವರನ್ನು ನಾವು 'ಯಂಗ್ ಯಂಗ್' ಎಂತಲೂ ಅವರ ಅಣ್ಣನನ್ನು 'ಓಲ್ಡ್ ಯಂಗ್' ಅಂತಲೂ ಕರೆಯುತ್ತಿದ್ದೆವು. ಶ್ರೀ ಯಂಗ್ ಯಂಗ್ ಅವರು ಶೀತ ಪ್ರಕೃತಿಯವರು; ಹಾಗಾಗಿ ಬಿಸಿಲಿದ್ದಾಗಲೂ ಭದ್ರವಾಗಿ ಕಿಟಕಿ ಬಾಗಿಲುಗಳನ್ನು ಮುಚ್ಚಿ ಹೊರಗಿನ

ಗಾಳಿ ಒಳಕ್ಕೆ ನುಸುಳದಹಾಗೆ ಜಾಗರೂಕ
ವಹಿಸುತ್ತಿದ್ದರು. ಶೀತ ಮುಚ್ಚಿಕೊಂಡ
ಅದರಿಂದ ಕಾಲರಾ ಆಗಿಬಿಟ್ಟೀತು ಜೋ
ಎಂದು ನಮ್ಮನ್ನು ಅವರು ಆಗಾಗ ಎಚ್ಚ
ಸುತ್ತಿದ್ದರು. ಸ್ವಲ್ಪ ಆರಾಮ ವಿಲ್ಲದಿದ್ದ
ಕಿವಿಮುಚ್ಚಿ ಹೋಗುವಷ್ಟು ಕ್ವಿನೈನ
ಮಾತ್ರೆಗಳನ್ನು ತೆಗೆದುಕೊಂಡು ಬಿಡ
ತ್ತಿದ್ದರು. ಈ ದೇಶದಲ್ಲಿ ಇಪ್ಪತ್ತು ವರ್ಷಗ
ಕಾಲ ಇದ್ದೂ ಕೂಡ ಪ್ರಾಂತ್ಯಭಾಷೆಯ
ಒಂದೇ ಒಂದು ಪದವನ್ನೂ ಅವರು ಕಲಿತಿ
ಲಿಲ್ಲ, ಊರುಬಿಟ್ಟು ಆಚೆಈಚೆ ಎಲ್ಲ
ಪ್ರವಾಸಕ್ಕೂ ಹೋದವರಲ್ಲ. ಪರಿಚಾರ
ಊಟದ ಸಮಯದಲ್ಲಿ ಏನಾದರೂ ಬಡಿಸ
ಮರೆತಿದ್ದ ಪಕ್ಷದಲ್ಲಿ ಕರೆಗಂಟೆ ಒತ್ತಿ ಅ
ನನ್ನು ಕರೆದು ತಮಗೆ ಬೇಕಾದ ಪದಾರ್ಥ
ದತ್ತ ಕೈತೋರಿಸಿ ಇದನ್ನು ಬಡಿಸು ಎಂದ
ಸನ್ನೆ ಮಾಡುತ್ತಿದ್ದರು; ಸ್ಥಳೀಯ ಭಾ
ಯಲ್ಲಿ ಅವನನ್ನು ಬೈಯ್ಯಲು ಆಗ
ಕಾರಣ ಅವನ ಕಡೆ ದುರುದುರನೆ ನೋ
"ಆಲ್ ದಿಸ್ ಆಟ್ ಟು ಹ್ಯಾವ್ ಬೀನ
ಡನ್ ಬಿಫೋರ್" ('ಇದನ್ನೆಲ್ಲಾ ಮೊದಲ
ಮಾಡಬೇಕು') ಎಂದು ಗೊಣಗುವಷ್ಟ
ತೃಪ್ತರಾಗುತ್ತಿದ್ದರು. ಸೇವಕನೊ
ಏನಾದರೂ ಕಾಗದವನ್ನು ತಂದರೆ 'ಸ್ವ
ಇರು' ಎಂದು ಹೇಳುವುದಕ್ಕೆ ಏನಂತ
ಸ್ಥಳೀಯ ಭಾಷೆಯಲ್ಲಿ ಎಂಬುವನ್ನು
ಹೋಗಿ ತಮ್ಮ ಹೆಂಡತಿಯ ಬಳಿ ಹೇ
ಕೊಂಡು ಅದನ್ನು ಉದ್ದಕ್ಕೂ ಪುನ

* ಶ್ರೀಮತಿ ಯಂಗ್ ಅವರ ಬೆತ್ತದ ಏಟುಗಳಿಗೆ ಸಾಮಾನ್ಯವಾಗಿ ಯಾರೂ ಹೆದರುತ್ತಿ
ಲಿಲ್ಲ, ಏಕೆಂದರೆ ಅವರ ಕೊಠಡಿಯಿಂದ ಹುಡುಗರು ನಗುನಗುತ್ತಲೇ ಹೊರಗೆ ಬರುತ್ತಿದ್ದರ
ಆದರೆ ಮುಖ್ಯೋಪಾಧ್ಯಾಯರ ಕೊಠಡಿಯಿಂದ ಹೊರಗೆ ಬರುವಾಗ ಹುಡುಗನ ಮುಖ ತಪ್ಪ
ಕಳೆಗುಂದುತ್ತಿತ್ತು. 'ತರಗತಿಗೆ ಹೋಗಲೇ, ಸರ್' ಅಂತ ದುರುಗುಟ್ಟಿ ಕೇಳುತ್ತಿದ್ದ.

ಉಚ್ಚರಿಸುತ್ತಾ ಅವನ ಮುಖಕ್ಕೆ ಆ ಮಾತನ್ನು ಒಗೆದು ಕೃತಾರ್ಥರಾಗುವರು.

ಇಷ್ಟಾಗಿಯೂ ನಮ್ಮ ಮುಖ್ಯೋಪಾಧ್ಯಾಯರು ಘನಗಾಂಭೀರ್ಯದಲ್ಲಿ ನಡೆದುಕೊಳ್ಳುತ್ತಿದ್ದ ಕಾರಣ ನಮಗೆ ಒಳಗೊಳಗೇ ಭಯವಿದ್ದರೂ ನಮ್ಮ ಗೌರವಕ್ಕೆ ಪಾತ್ರರಾಗಿದ್ದರು. ನಮ್ಮ ಮುಖ್ಯೋಪಾಧ್ಯಾಯಿನಿಯಂತೂ ಮಾತೃಸದೃಶವಾದ ಮಹಿಳೆ, ಹಾಗಾಗಿ ಎಲ್ಲರೂ ಅವರನ್ನು ಇಷ್ಟಪಡುತ್ತಿದ್ದರು. ನಮ್ಮ ಸಾಮಾಜಿಕ ಹಾಗೂ ಧಾರ್ಮಿಕ ನಂಬಿಕೆಗಳನ್ನು ಪ್ರಭಾವಿಸಲು ಅವರು ಎಂದೂ ಪ್ರಯತ್ನಿಸಲಿಲ್ಲವೆಂಬುದನ್ನು ದಾಖಲಿಸಬೇಕು. ಬಹಳ ವರ್ಷಗಳ ತನಕ ಹೀಗೆ ಚೆನ್ನಾಗಿ ನಡೆದುಕೊಂಡು ಹೋಯಿತು; ನಾವೂ ಕೂಡ ನಮ್ಮ ಪರಿಸ್ಥಿತಿಗೆ ಅದ್ಭುತವಾದ ರೀತಿಯಲ್ಲಿ ಹೊಂದಿಕೊಂಡಿದ್ದೆವು; ನಮ್ಮನ್ನು ನಮ್ಮ ಪರಿಸರದಿಂದ ಪ್ರತ್ಯೇಕಗೊಳಿಸಿ ತೋರಿಸುವಂಥ ಒಂದು ಪ್ರಸಂಗ ನಡೆಯಿತು. ಸ್ಥಳೀಯವಾದ ಕಾರಣಗಳ ಪರಿಣಾಮವೇ ಅಥವಾ ಹೊರಗಿನ ಸಾಮಾಜಿಕ ರಾಜಕೀಯ ಗಲಭೆಗಳ ಪ್ರತಿಧ್ವನಿಯೋ; ಈ ಪ್ರಶ್ನೆಗೆ ನಾನು ತಕ್ಷಣ ಉತ್ತರ ಹೇಳುವುದಿಲ್ಲ.

ಸ್ವಲ್ಪಮಟ್ಟಿಗೆ ಈ ಭಿನ್ನಭೇದ ಅನಿವಾರ್ಯವಾಗಿ ತೋರಬಹುದು, ಆದರೆ ಈ ಪ್ರತ್ಯೇಕತೆಯಿಂದ ಉದ್ಭವವಾದದ್ದು ಮಾತ್ರ ಅನಿವಾರ್ಯವಾಗಿರಲಿಲ್ಲ. ನಾವು ಪ್ರತ್ಯೇಕವಾದ ಎರಡು ಜಗತ್ತುಗಳಲ್ಲಿ ವಾಸಿಸುತ್ತಿದ್ದೆವು; ನಾವು ಬೆಳೆದು ದೊಡ್ಡವರಾಗುತ್ತಿದ್ದಂತೆ ಈ ಎರಡು ಪ್ರಪಂಚಗಳಲ್ಲಿ ಯಾವುದೇ ಹೊಂದಾಣಿಕೆ ಇಲ್ಲವೆಂಬುದು ನಮ್ಮ ಪ್ರಜ್ಞೆಗೆ ಹೊಳೆಯಿತು. ಒಂದು ಕಡೆ ಕುಟುಂಬದ ಮತ್ತು ಸಮಾಜದ (ಭಾರತೀಯ)ಪ್ರಭಾವವಿತ್ತು. ಇನ್ನೊಂದು ಕಡೆ, ಇನ್ನೊಂದು ಪ್ರಪಂಚ, ಬೇರೊಂದು ಬಗೆಯ ವಾತಾವರಣ, ಅಲ್ಲಿ ನಾವು ನಮ್ಮ ಬಹುತೇಕ ಕೆಲಸದ ದಿನಗಳನ್ನು ಕಳೆಯುತ್ತಿದ್ದೆವು—ಅದು ಇಂಗ್ಲೆಂಡ್ ಆಗಿಲ್ಲದಿದ್ದರೂ ಅದಕ್ಕೆ ಹತ್ತಿರವಾಗುವಂಥ ವಾತಾವರಣ ಹೊಂದಿತ್ತು. ನೀವು ಭಾರತೀಯರಾಗಿದ್ದ ಕಾರಣ 'ವಿದ್ಯಾರ್ಥಿವೇತನ ಪರೀಕ್ಷೆಗಳಿಗೆ ನಾವು ಕೂರಲಾಗುವುದಿಲ್ಲವೆಂದು ತಿಳಿಸಿದರು; ಆದರೆ ನಮ್ಮ ವಾರ್ಷಿಕ ಪರೀಕ್ಷೆಗಳಲ್ಲಿ ನಾವು ತರಗತಿಗೆ ಮೊದಲನೇ ಸ್ಥಾನದಲ್ಲಿ ಬರುತ್ತಿದ್ದೆವು. ಆಂಗ್ಲೊ-ಇಂಡಿಯನ್ ಹುಡುಗರು ಸ್ವಯಂಸೇವಕ ದಳದಲ್ಲಿ ಸೇರ್ಪಡೆಯಾಗಿ ಬಂದೂಕವನ್ನು ಹಿಡಿಯಬಹುದಾಗಿತ್ತು, ನಮಗೆ ಆ ಅವಕಾಶವಿರಲಿಲ್ಲ. ಇಂಥ ಸಣ್ಣಪುಟ್ಟ ಸಂಗತಿಗಳಿಂದ ನಾವು ಅದೇ ಸಂಸ್ಥೆಗೆ ಸೇರಿದವರಾಗಿದ್ದಾಗ್ಯೂ ನಾವು ಭಾರತೀಯರಾಗಿರುವುದರಿಂದ ನಾವೇ ಬೇರೊಂದು ವರ್ಗ ಎನ್ನುವ ಭಾವನೆ ನಮ್ಮಲ್ಲಿ ಮೂಡತೊಡಗಿತು. ಹಾಗೆಯೇ ಆಗೊಮ್ಮೆ ಈಗೊಮ್ಮೆ ಭಾರತೀಯ ಹುಡುಗರ ನಡುವೆ ಜಗಳವಾಗಿ ಹೊಡೆದಾಟದಲ್ಲಿ ಪರ್ಯವಸಾನವಾಗುವುದು*—ಜನಾಂಗೀಯವಾದ ರೀತಿಯಲ್ಲಿ ಸಹಾನುಭೂತಿ ವ್ಯಕ್ತವಾಗುವುದು ಭಾರತೀಯ ಉನ್ನತಾಧಿಕಾರಿಯೊಬ್ಬರ ಮಗ—ನಮ್ಮ ಸಹಪಾಠಿ—ಭಾರತೀಯ ಮತ್ತು ಯೂರೋಪಿಯನ್ ಹುಡುಗರ ಮಧ್ಯೆ ಒಂದು ಪಂದ್ಯವೇರ್ಪಡಿಸುವಾಗ ಚೆನ್ನಾಗಿ ಆಡುವ ನಮ್ಮಂಥವರು ಯಾವುದಾದರೂ ತಂಡ

* ಸಾಮಾನ್ಯವಾಗಿ ಇಂಥ ಕಾಳಗಗಳಲ್ಲಿ ನಮ್ಮ ಚಿಕ್ಕಪ್ಪಂದಿರು ಹಾಗೂ ನನ್ನ ಅಣ್ಣಂದಿರು ಮೇಲುಗೈ ಸಾಧಿಸುತ್ತಿದ್ದರು.

ವನ್ನು ಸೇರಬಹುದಾಗಿತ್ತು. ಭಾರತೀಯ ಹುಡುಗರಾದ ನಾವು ನಮ್ಮ ನಮ್ಮಲ್ಲೇ ಮಾತನಾಡಿಕೊಳ್ಳುವಾಗ ಈ ಬೈಬಲ್‌ನ ಸಹವಾಸ ಸಾಕು ಯಾವ ಕಾರಣಕ್ಕೂ ನಾವು ನಮ್ಮ ಧರ್ಮವನ್ನು ಬದಲಾಯಿಸುವುದಿಲ್ಲ ಎಂದು ಹೇಳಿಕೊಳ್ಳುತ್ತಿದ್ದೆವು. ಆಮೇಲೆ ಕಲ್ಕತ್ತಾ ವಿಶ್ವವಿದ್ಯಾನಿಲಯದ ನಿಯಮಗಳು ಜಾರಿಗೆ ಬಂದು ಮೆಟ್ರಿಕ್ಯುಲೇಶನ್, ಇಂಟರ್‌ಮೀಡಿಯೆಟ್ ಹಾಗೂ ಪದವಿ ಪರೀಕ್ಷೆಗಳಿಗೆ ಬಂಗಾಳಿ ಭಾಷೆಯನ್ನು ಕಡ್ಡಾಯಗೊಳಿಸಿದ್ದಲ್ಲದೆ ಮೆಟ್ರಿಕ್ಯುಲೇಶನ್ ತರಗತಿಯ ಪಠ್ಯಕ್ರಮದಲ್ಲೂ ಬದಲಾವಣೆ ತರಲಾಯಿತು. ಪಿ.ಇ. ಶಾಲೆಯ ಪಠ್ಯಕ್ರಮ ನಮಗೆ ಹೊಂದಾಣಿಕೆಯಾಗುವುದಿಲ್ಲವೆಂದು ನಮಗೆ ತಕ್ಷಣ ತಿಳಿಯಿತಲ್ಲದೆ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತುಕೊಳ್ಳಲು ಸಿದ್ಧತೆಗಾಗಿ ನಾವು ಭಾರತೀಯ ಶಾಲೆಯೊಂದನ್ನು ಸೇರಿದಾಗ ಬಂಗಾಳಿ ಮತ್ತು ಸಂಸ್ಕೃತ ಭಾಷೆಯನ್ನು ನಾವು ಹೊಸದಾಗಿ ಕಲಿಯಬೇಕೆಂದು ಮನವರಿಕೆಯಾಯಿತು. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಶಾಲೆಯನ್ನು ಬಿಟ್ಟು ಆವೇಳೆಗಾಗಲೇ ಭಾರತೀಯ ಶಾಲೆಗಳಲ್ಲಿ ನನ್ನ ಅಣ್ಣಂದಿರು ಮೆಟ್ರಿಕ್ಯುಲೇಶನ್, ಇಂಟರ್‌ಮೀಡಿಯೆಟ್ ಹಾಗೂ ಪದವಿ ಪರೀಕ್ಷೆಗಳಿಗಾಗಿ ವ್ಯಾಸಂಗ ಮಾಡುತ್ತಿದ್ದರು, ಅಷ್ಟೇ ಅಲ್ಲ, ತಾವು ಈಗ ಬೇರೊಂದು ಪ್ರಪಂಚದಲ್ಲಿ ವ್ಯವಹರಿಸುತ್ತಿರುವ ಪರಿಯ ಬಗ್ಗೆ ಮನೆಯಲ್ಲಿ ಮಾತನಾಡುತ್ತಿದ್ದರು.

ಈ ಹಿನ್ನೆಲೆಯಲ್ಲಿ ಕೆಲವು ವರ್ಷಗಳಿದ್ದ ಬಳಿಕ ನಾನು ನನ್ನ ಶಾಲೆಯ ವಾತಾವರಣದ ವಿರುದ್ಧ ಸಿಡಿದೆದ್ದಿದ್ದೆ ಎಂದು ತೀರ್ಮಾನಿಸುವುದು ತಪ್ಪಾದೀತು. ನಾನು ೧೯೦೩ ರಿಂದ ೧೯೦೮ ರವರೆಗೆ ಏಳು ವರ್ಷಗಳ ತ
ಆ ಶಾಲೆಯಲ್ಲಿದ್ದೆ ; ಒಟ್ಟಿನಲ್ಲಿ ಆ ಶಾಲೆ
ವಾತಾವರಣವನ್ನು ನಾನು ಇಷ್ಟಪಟ್ಟಿದ್ದ
ಮೇಲೆ ಕಾಣಿಸಿದ ಕಲಹಗಳು, ಪ್ರಸಂಗಗ
ಕೇವಲ ಮೂಡಿ ಮರೆಯಾಗುವ ತರಹ
ಘಟನೆಯಾಗಿದ್ದರಿಂದ ನಮ್ಮ ನಿರುಮ್ಮಳ
ಭಂಗ ತರಲಿಲ್ಲ. ಈ ಅವಧಿಯ ಕೊನೆಯ
ಮಾತ್ರ ನನಗೆ ಈ ವಾತಾವರಣದಿ
ನಾನು ದೂರ ಹೋಗಬೇಕು, ನಾ
ಹೊಂದಿಕೊಳ್ಳಲಾಗುವುದಿಲ್ಲ ಎಂಬ ಅಸ್ಪ
ವಾದ ದಿಗಿಲು ಮೂಡಿ, ಭಾರತೀ
ಶಾಲೆಯ ಪರಿಸರದಲ್ಲಿ ನನಗೆ ಹೆಚ್ಚು ಬ
ಯಾಗುವುದು ಎಂಬ ಕಲ್ಪನೆ ಬಂದಿ
ಸೋಜಿಗದ ಸಂಗತಿಯೆಂದರೆ, ಉ
ಉಪಾಧ್ಯಾಯರು ೧೯೦೯ ರ ಜನವರಿಯ
ನಾನು ಮುಖ್ಯೋಪಾಧ್ಯಾಯರು ಹಾ
ನನ್ನ ಸಹಪಾಠಿಗಳಿಗೆ ವಿದಾಯ ಹೇಳು
ಕೈಕುಲುಕುವಾಗ ಯಾವ ಬಗೆಯ ವಿಷ
ವಾಗಲಿ, ದುಗುಡವಾಗಲಿ ಆಗಲಿಲ್ಲ.
ಸಮಯದಲ್ಲಿ ನನ್ನೊಳಗೆ ಏನಾಗಿ
ಎಂದು ಈಗ ತಿಳಿಯಲು ನನಗೆ ಕಷ್ಟವಾ
ತ್ತದೆ. ಇಷ್ಟು ಕಾಲದ ಅಂತರದಲ್ಲಿ, ವಯ
ಮನಸ್ಸಿನ ಸಹಾಯದಿಂದ ಆಗ ಕೆ
ಮಾಡುತ್ತಿದ್ದ ಕೆಲವು ಸಂಗತಿಗಳ ಕುರಿ
ನಾನು ವಿಶ್ಲೇಷಿಸಬಹುದಾಗಿದೆ.

ನನ್ನ ಅಧ್ಯಯನಕ್ಕೆ ಸಂಬಂಧಿಸಿ
ಆಗಿನ ನನ್ನ ದಾಖಲೆಯೇ ಹೇಳು
ನನಗೆ ತೃಪ್ತಿಯಿದೆ, ತರಗತಿಯಲ್ಲಿ ನಾ
ಯಾವಾಗಲೂ ಮೇಲಿದ್ದೆ. ಆದರೆ ಕ
ಯಲ್ಲಿ ನಾನು ಹೆಚ್ಚಾಗಿ ಪಾಲ್ಗೊಳ್ಳು
ಲಿಲ್ಲ, ಜೊತೆಗೆ ಆಗಿನ ಭಾರತೀಯ
ಗಳಲ್ಲಿ ಪ್ರಚಲಿತವಿದ್ದ ಪದ್ಧತಿಯ
ಅಧ್ಯಯನಕ್ಕೂ ಹೆಚ್ಚಿಗೆ ಮನ್ನಣೆ ಇಲ್ಲ
ರಿಂದ ನನ್ನ ಸಾಮರ್ಥ್ಯದ ಬಗ್ಗೆ ನ

ಸಂಕೋಚವಿದ್ದಿತು. ಈಗಾಗಲೇ ನಾನು ಪ್ರಸ್ತಾಪಿಸಿರುವ ಹಿಂಜರಿಕೆ, ಅಳುಕು ನನ್ನನ್ನು ಕಾಡತೊಡಗಿತು. ಕೆಳಗಿನ ತರಗತಿಯಲ್ಲಿ ನಾನು ಸೇರ್ಪಡೆಯಾಗಿದ್ದರಿಂದಲೋ ಏನೊ ಇತರರ ಬಗ್ಗೆ ಹೆಚ್ಚು ಗೌರವ ಹೊಂದಿ ನನ್ನ ಸಾಮರ್ಥ್ಯದ ಬಗ್ಗೆ ನೇತ್ಯಾತ್ಮಕವಾಗಿ ಕಾಣುವುದು ನನಗೆ ಒಗ್ಗಿಹೋಯಿತು.

ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಯಾವುದೇ ಭಾರತೀಯ ಬಾಲಕ ಅಥವಾ ಬಾಲಕಿಯನ್ನು ಅಂಥ ಶಾಲೆಗೆ ಕಳುಹಿಸುವುದು ಹಿತವೆಂದು ನಾನು ಈಗ ಹೇಳಲಾರೆ. ಸೂಕ್ಷ್ಮ ರೀತಿಯಲ್ಲಿ ಆಲೋಚಿಸುವ ಹುಡುಗ ಅಥವಾ ಹುಡುಗಿಯಾಗಿದ್ದರಂತೂ ಅಂಥ ವಾತಾವರಣದಲ್ಲಿ ಹೊಂದಿಕೊಳ್ಳಲಾರದೆ, ಅಸುಖದಲ್ಲಿ ತೊಳಲಾಡುವಂತಾಗುತ್ತದೆ. ಭಾರತೀಯ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಇಂಗ್ಲೆಂಡಿನ 'ಪಬ್ಲಿಕ್ ಶಾಲೆಗಳಿಗೆ' ಸೇರಿಸುವ ಪರಿಪಾಠವನ್ನೂ ಕೂಡ ನಾನು ಇದೇ ಕಾರಣಕ್ಕೆ ಹಿತಕಾರಿಯಲ್ಲವೆಂದು ಹೇಳುತ್ತೇನೆ. ಇಂಗ್ಲಿಷ್ ಪಬ್ಲಿಕ್ ಶಾಲೆಗಳ ಮಾದರಿಯಲ್ಲಿ ಆಂಗ್ಲ ಉಪಾಧ್ಯಾಯರನ್ನು ನೇಮಕ ಮಾಡಿಕೊಂಡು ಭಾರತೀಯ ಶಾಲೆಗಳನ್ನು ತೆರೆಯಲು ಮುಂದಾಗಿರುವ ಭಾರತೀಯರ ಪ್ರಯತ್ನವನ್ನು ನಾನು ಇದೇ ಕಾರಣಕ್ಕೆ ವಿರೋಧಿಸುತ್ತೇನೆ. ಯಾವ ವಾತಾವರಣದಲ್ಲೂ ಹೊಂದಿಕೊಳ್ಳಲು ಸಮರ್ಥರಾದ ಕೆಲವು ಹುಡುಗರಿಗೆ ಈ ತರಹದ ಪರಿಸರದಿಂದ ಅಷ್ಟೇನೂ ಸಮಸ್ಯೆಯಾಗದಿರಬಹುದು. ಆದರೆ ಅಂತರ್ಮುಖಿಯಾದ ಮಕ್ಕಳು ಹೆಚ್ಚು ಕ್ಲೇಶಕ್ಕೊಳಗಾಗುವರಲ್ಲದೆ, ಇದೇ ವ್ಯವಸ್ಥೆಯ ಬಗ್ಗೆಯೇ ಅವರಲ್ಲಿ ಜಿಗುಪ್ಸೆ ಮೂಡಿ ಕಡೆಗೆ ಅವರ ಪ್ರತಿಕ್ರಿಯೆ ತುಂಬಾ ವಿರೋಧಾತ್ಮಕವಾಗಿ ಪರಿವರ್ತಿತವಾಗಬಹುದು. ಈ ಮನೋವೈಜ್ಞಾನಿಕ ಕಾರಣಗಳೇ ಅಲ್ಲದೆ, ಭಾರತೀಯ ಪರಿಸರ, ಭಾರತೀಯ ನಿರೀಕ್ಷೆಗಳು ಹಾಗೂ ಭಾರತೀಯ ಚರಿತ್ರೆ ಮತ್ತು ಸಮಾಜಶಾಸ್ತ್ರವನ್ನು ಕಡೆಗಣಿಸುವುದು ಯಾವುದೇ ರೀತಿಯ ಶಿಕ್ಷಣ ವ್ಯವಸ್ಥೆಯನ್ನು ಬೆಂಬಲಿಸಲಾಗದೆಂಬುದು ಸುಸ್ಪಷ್ಟ. ಪೂರ್ವ ಮತ್ತು ಪಶ್ಚಿಮಗಳ ನಡುವೆ ಒಂದು ಸಾಂಸ್ಕೃತಿಕ ಒಡನಾಟವನ್ನು ತರುವುದೇ ಉದ್ದೇಶವಾಗಿದ್ದರೆ ಭಾರತೀಯ ಬಾಲಕ–ಬಾಲಕಿಯರ ಮೇಲೆ 'ಆಂಗ್ಲ' ಶಿಕ್ಷಣವನ್ನು ಹೇರುವುದರ ಮೂಲಕ ಇದು ಸಾಧ್ಯವಾಗದು, ಬದಲಿಗೆ ಅವರು ಬೆಳೆದು ದೊಡ್ಡವರಾದ ಬಳಿಕ ಪಶ್ಚಿಮದೊಡನೆ ಅವರ ನಿಕಟ ಸಂಬಂಧವನ್ನು ಏರ್ಪಡಿಸಬೇಕು ; ಆವಾಗ ಪೂರ್ವದಲ್ಲಿ ಹಾಗೂ ಪಶ್ಚಿಮದಲ್ಲಿ ಯಾವುದು ಒಳ್ಳೆಯದಿದೆ ಯಾವುದು ಕೆಟ್ಟದಿದೆ ಎಂಬುದನ್ನು ತೀರ್ಮಾನಿಸಲು ಅವರು ಸಮರ್ಥರಾಗಿರುತ್ತಾರೆ.

"ನಾನು ಯಾವುದೇ ಸಂಬಳದ ನೌಕರಿ ಮಾಡಲು ಇಚ್ಛಿಸುವುದಿಲ್ಲ. ನನ್ನ ಜೀವನವನ್ನು ದೇಶ ಸೇವೆಗಾಗಿ ವಿನಿಯೋಗಿಸಲು ನಿಶ್ಚಯಿಸಿದ್ದೇನೆ."

—ನೇತಾಜಿ

ನೇತಾಜಿ ಒಡನಾಡಿ :

ಐಎನ್ಎ ರಾಮರಾವ್ ಅವರ ನೆನಪಿನಿಂದ

ಚಂದ್ರಶೇಖರಾರಾಧ್ಯ
೧೪೫, 'ಇಂಚರ', ಎಂ. ಬ್ಲಾಕ್
೩ನೆಯ ಹಂತ, ಕುವೆಂಪುನಗರ, ಮೈಸೂರು-

"ಇಂಡಿಯನ್ ನ್ಯಾಷನಲ್ ಆರ್ಮಿ"ಯ ಸಂಕ್ಷಿಪ್ತ ರೂಪ ಐಎನ್ಎ—ಭಾರತೀಯ ರಾಷ್ಟ್ರೀಯ ಸೈನ್ಯ ಎಂದರ್ಥ. ಬ್ರಿಟಿಷ್ ವಸಾಹತು ಭಾರತದಲ್ಲಿ ಶಾಶ್ವತವೋ ಈ ಜೀವಂತ ಪ್ರಾಚೀನ ಸಂಸ್ಕೃತಿ ಎಂದೂ ದಾಸ್ಯ ಬಂಧನ ಮುಕ್ತವಾಗುವುದಿಲ್ಲವೋ ಎಂದು ಭಾರತೀಯರು ಪರಿತಪಿಸುತ್ತಿದ್ದಾಗ "ಸಂಭವಾಮಿ ಯುಗೇ ಯುಗೇ" ಎಂಬಂತೆ ಈ ನೆಲದ ಸಾರದಿಂದ ಮೇಲೆದ್ದವರು ಇಬ್ಬರು—ಗಾಂಧಿ ಮತ್ತು ಬೋಸ್. ಎಡಗೆನ್ನೆಗೆ ಹೊಡೆದವನಿಗೆ ಬಲಗೆನ್ನೆ ಒಡ್ಡು—ಇದು ಗಾಂಧೀ ಮಾರ್ಗ. ಆತನ ಹಲ್ಲು ಉದುರಿಸು—ಇದು ಬೋಸ್ ನೀತಿ. ಭಾರತಕ್ಕೆ ಸ್ವಾತಂತ್ರ್ಯ ಬರುವ ಮೊದಲೇ ಬೋಸ್ ಅಪಘಾತದಲ್ಲಿ ಮಡಿದದ್ದೂ ಬಂದ ತರುವಾಯ ಗಾಂಧಿ ಗುಂಡೇಟಿಗೆ ಬಲಿಯಾದದ್ದೂ ಪ್ರತೀಕಿಸುವುದೇನನ್ನು? ಕಾರಣಪುರುಷರ ಬಲಿದಾನ ಮಾತ್ರ ದೇಶಕ್ಕೆ ಸ್ವಾತಂತ್ರ್ಯ ತರಬಲ್ಲದು. ಬೋಸ್ ನಾಮಸ್ಮರಣೆ—ಅದೇ ಅವರ ನಿಕಟ ಅನುವರ್ತಿಯ ನುಡಿಗಳಲ್ಲಿ—ಬದುಕಿಗೊಂದು ಸಂಜೀವಿನಿ.

ತಮಿಳು ನಾಡಿನಲ್ಲಿ ಹುಟ್ಟಿ, ಕರ್ನಾಟಕದಲ್ಲಿ ಬೆಳೆದು, ಭಾರತದ ಉದ್ದಗಲಗಳಲ್ಲಿ ಸೇನಾನಿಯಾಗಿ ಸೇವೆ ಸಲ್ಲಿಸಿ; ಪ್ರಕೃತ ಭಾರತ ಸೇವಾದಳದಲ್ಲಿ ತೊಡಗಿಸಿಕೊಂಡು, ತಮಿಳು ನಾಡಿನ ಸತ್ಯಮಂಗಲ ತಾಲ್ಲೂಕು 'ಘಟ್ಟವಾಡಿ' ಎಂಬ ಪುಟ್ಟಗ್ರಾಮದಲ್ಲಿ ನೆಲೆಸಿರುವ ೭೦ ಸಂವತ್ಸರಗಳನ್ನು ದಾಟಿರುವ ಐಎನ್ಎ ರಾಮರಾಯರದು ಸಾಹಸಗಾಥೆಯ ಸಾರ್ಥಕ ಜೀವನ.

'ಪುಸ್ತಕ ಪ್ರಪಂಚ'ಕ್ಕೆ ನೇತಾಜಿ ಅವರನ್ನು ಕುರಿತು ಲೇಖನ ಒಂದನ್ನು ಕೇಳಿದಾಗ ಐಎನ್ಎ ರಾಮರಾಯ
"ನಾನೀಗ ಬರೆಯಲಾರೆ. ಎಷ್ಟು ಬೇಕಾದ
ಹೇಳಬಲ್ಲೆ ಬರೆದುಕೊಳ್ಳಿ." ಎಂದು ದೂ
ವಾಣಿಯಲ್ಲಿ ಗುಂಡು ಹೊಡೆದಂತೆ ಹೇ
ಮೈಸೂರಿನಲ್ಲಿ ನಾವು ಇಳಿದುಕೊಂಡಿ
ಮನೆಗೆ ಆಹ್ವಾನಿಸಿದರು.

೭೦ರ ಗಡಿ ದಾಟಿರುವ ಆಜಾನುಬಾ
ರಾಮರಾಯರು ಮಾತನಾಡಿ
ಸ್ವಾತಂತ್ರ್ಯದ ಕಹಳೆ ಮೊಳಗುತ್ತದೆ, ಕ
ನಲ್ಲಿ ಸಾಹಸದ ಕಿಡಿ ಕಾರುತ್ತದೆ, ಉತ್ಸಾ
ಚಿಮ್ಮುತ್ತದೆ. ಬಾಗಿ ಬಳುಕದ ಅವರ ದ

ಇಂದಿಗೂ ಕಡೆದು ನಿಲ್ಲಿಸಿದ ಶಿಲ್ಪ. ಅವರು ನೆನಪಿನಾಳದಿಂದ ಹೆಕ್ಕಿ ತೆಗೆಯುವ ಒಂದೊಂದು ಘಟನೆಯೂ ಸಾಹಸ, ರೋಮಾಂಚಕ. ಅವರ ಹತ್ತಿರ ಕುಳಿತವರಿಗೆ ತಾನೆಷ್ಟು ಅಲ್ಪ ಎಂಬ ಆತ್ಮಾವಲೋಕನ ಕಾಡುತ್ತದೆ ಬೃಹತ್ತಿನ ಮಹತ್ವವೇ ಇದು!

ಸಿಪಾಯಿಯಾಗುವ ಕನಸು

ರಾಮರಾವ್ ಹುಟ್ಟಿದ್ದು ತಮಿಳುನಾಡಾದರೂ, ಬೆಳೆದದ್ದು, ಓದಿದ್ದು ಮೈಸೂರು ಜಿಲ್ಲೆಯ ತೆರಕಣಾಂಬಿ ಮತ್ತು ಚಾಮರಾಜನಗರ. ಅಂದು ಶಾಲೆ ಕಲಿಯುತ್ತಿದ್ದ ಈ ಪೋರ 'ದಸರಾ' ನೋಡಲು ಮೈಸೂರಿಗೆ ಬರುತ್ತಾನೆ. ಸೈನ್ಯದ ತುಕಡಿಯೊಂದು ಮಿಲಿಟರಿ ಸಮವಸ್ತ್ರ ಧರಿಸಿ, ಶಿಸ್ತಿನಿಂದ ಕವಾಯಿತು ಮಾಡಿಕೊಂಡು ಮೆರವಣಿಗೆಯಲ್ಲಿ ಸಾಗುತ್ತದೆ. ಈ ದೃಶ್ಯವನ್ನು ಮರೆಯಾಗುವವರೆಗೂ ಬಾಲಕ ನೋಡಿ ಕಣ್ತುಂಬಿಸಿಕೊಳ್ಳುತ್ತಾನೆ. ತಾನು ಮುಂದೆ 'ಸಿಪಾಯಿಯೇ ಆಗಬೇಕು' ಎಂಬ ಗುಂಗಿನಿಂದಲೇ ಊರು ಸೇರುತ್ತಾನೆ.

ಅಂದು ದೇಶದ ಎಲ್ಲೆಡೆ ಸ್ವಾತಂತ್ರ್ಯದ ಕಾವು ಆವರಿಸಿದ್ದ ಕಾಲ. ಎಲ್ಲೆಲ್ಲೂ ಭಾಷಣ, ಸಭೆ, ಸಮಾರಂಭ, ಮೆರವಣಿಗೆಗಳ ಭರಾಟೆ. ಪ್ರಚಾರಕಾರ್ಯಕ್ಕಾಗಿ ಊರುಕೇರಿಗಳಿಗೆ ಬರುವ ಕಾರ್ಯಕರ್ತರು. ಹೀಗೆಯೇ ಚಾಮರಾಜನಗರಕ್ಕೂ ಟಿ. ಸಿದ್ದಲಿಂಗಯ್ಯ, ತಗಡೂರು ರಾಮಚಂದ್ರರಾವ್, ವೀರಕೇಸರಿ ಸೀತಾರಾಮಶಾಸ್ತ್ರಿ, ಎಂ.ಎಸ್. ಜೋಯಿಸ್ ಮೊದಲಾದ ನಾಯಕರು ಬರುತ್ತಾರೆ. ಅಣುಗರಾಮರಾಯರ ಅಂತರಾಳದಲ್ಲಿ ಸಿಪಾಯಿ ಆಗಬೇಕೆಂದು ಅಡಗಿದ್ದ ಬಯಕೆ, ಈ ಸ್ವಾತಂತ್ರ್ಯ ಯೋಧರ ಕರೆಯ ವರ್ಷಧಾರೆಯಿಂದ ಮೊಳಕೆಯೊಡೆಯುತ್ತದೆ. ತನ್ನ ದಾರಿ ಕಂಡುಕೊಂಡ ಬಾಲಕ ತರಗತಿಗೆ ಚಕ್ಕರ್ ಸಭೆಗಳಿಗೆ ಹಾಜರ್. ಓದಿಗೆ ತಿಲಾಂಜಲಿ, ಪರಿಣಾಮ ಮನೆಯಿಂದ ಸೋಡಾ ಚೀಟಿ.

ನೆನಸಾದ ಕನಸು

ಮನೆಯಿಂದ ಹೊರಬಿದ್ದ ಚಿಗುರು ಮೀಸೆಯ ಈ ಯುವಕ ೧೯೪೦ರಲ್ಲಿ ಮೈಸೂರು ೩ನೆಯ ಇನ್‌ಫೆಂಟ್ರಿಯಲ್ಲಿ ಸಿಪಾಯಿ ಆಗಿ ದಾಖಲಾಗುತ್ತಾನೆ. ಈ ಸೇನಾ ತುಕಡಿಯು ಬೆಂಗಳೂರಿಗೆ ವರ್ಗಾವಣೆಯಾಗುತ್ತದೆ. ೨ನೆಯ ಮಹಾಯುದ್ಧದಲ್ಲಿ ಪಾಲ್ಗೊಳ್ಳಲು ಭಾರತದಿಂದ ಮಲೇಷಿಯಾ, ಜಪಾನ್‌ಗಳಿಗೆ ಒಂದು ಲಕ್ಷ ಸೈನ್ಯ ರವಾನೆಯಾಗುತ್ತದೆ. ಇದರ ಒಂದು ತುಕಡಿಯ ನಾಯಕನಾಗಿ ರಾಮರಾವ್ ಪ್ರಯಾಣ. ಆ ಅವಧಿಯಲ್ಲಿ ನೇತಾಜಿ ಅವರ ಸಂಪರ್ಕವಾಗಿ ಐಎನ್‌ಎ ಸೇನಾನಿಯಾಗಿ ದೀಕ್ಷೆ. ಅಲ್ಲಿಂದ ನಿರಂತರ ಹೋರಾಟ. ಭಾರತದ ದಾಸ್ಯವಿಮೋಚನೆಗೆ ಬಹುಮುಖ ಸೆಣಸಾಟ ನಡೆಸಿರುವ ರಾಮರಾವ್ ಅವರ ಕೊರಳಲ್ಲಿ ರೋಮಾಂಚಕ ಘಟನೆಗಳ ಸರಮಾಲೆ.

ಮರೆಯಲಾಗದ ಈ ಒಂದು ಘಟನೆ

೧೯೪೪ರ ಸುಮಾರಿಗೆ ಇಂಫಾಲದಲ್ಲಿ ಗೂಢಚಾರಿಯಾಗಿ ಕೆಲಸ ಮಾಡುವ ಮಹತ್ತರ ಜವಾಬ್ದಾರಿ ರಾಮರಾವ್ ಕೊರಳಿಗೆ ಬೀಳುತ್ತದೆ. ಈ ಕೆಲಸ

ವನ್ನು ಇವರೇ ಮಾಡಬೇಕೆಂಬುದು ನೇತಾಜಿ ಇಚ್ಛೆ. ಈ ಮಹತ್ತರ ಕಾರ್ಯ ಸಾಧನೆಗಾಗಿ ರಾಮರಾವ್ 'ಅಬ್ದುಲ್ ರೆಹಮಾನ್' ಆಗಿ ಚಿಟ್ಟಗಾಂಗ್‌ಗೆ ನಿಯುಕ್ತಿ. ಅನ್ನ, ನೀರು, ನಿದ್ರೆಗಳ ನೆನಪಿನಿಂದ ದೂರವಾಗಿ ದಿನಗಟ್ಟಲೆ ಕಾಡುಮೇಡುಗಳ ಆಶ್ರಯ. ಸ್ವಲ್ಪ ಎಚ್ಚರ ತಪ್ಪಿದರೂ ಅನೂಹ್ಯ ಅನಾಹುತಕ್ಕೆ ಆಹ್ವಾನ. ಯಾವುದೋ ಮೂಲದಿಂದ ಸುಳಿವು ತಿಳಿದ ಶತ್ರು ಸೈನ್ಯ ಹೋರಾಟಕ್ಕಿಳಿಯುತ್ತದೆ. ಈ ಗುಂಡಿನ ಕಾಳಗದಲ್ಲಿ ಪ್ರಜ್ಞೆ ತಪ್ಪಿ ಇಂಫಾಲದ ರಣರಂಗದಲ್ಲಿ ಬಿದ್ದ ರಾಮರಾಯರು ಎಚ್ಚರಗೊಂಡದ್ದು ದೂರದ ದೆಹಲಿ ಸೆರೆಮನೆಯಲ್ಲಿ. ಆಗ ಸದಾ ಇವರಿಗೆ ಕೈಕೋಳದ ಆಭರಣದಿಂದಲೇ ಅಲಂಕಾರ. ಯುದ್ಧ ಕೈದಿಗಳ ಗ್ರೇಡಿಗೆ ತಕ್ಕಂತೆ ಈ ಪ್ರಶಸ್ತಿ ಸನ್ಮಾನಗಳು. ಕೈಕೋಳ ತೊಡಿಸಿಕೊಂಡೇ ಪೋಲೀಸ್ ಬಿಗಿ ಬೆಂಗಾವಲಿನಲ್ಲಿ ದೆಹಲಿ ಜೇಲಿನಿಂದ ನ್ಯಾಯಾಲಯಕ್ಕೆ ರಾಯರ ವೈಭವೋಪೇತ ಮೆರವಣಿಗೆ. ಇದನ್ನು ಹೇಳುವಾಗ ರಾಮರಾಯರ ಧ್ವನಿ ಗುಡುಗಿ ಸಿಡಿಲಾಗಿ ಮಾರ್ದನಿಸುತ್ತದೆ. ಕಣ್ಣಿನಲ್ಲಿ ಕೋಲ್ಮಿಂಚು ಹಾಯುತ್ತದೆ.

ಈ ಎಲ್ಲದರ ಪರಿಣಾಮ ಕಪ್ಪು ಪಟ್ಟಿಯಲ್ಲಿ ಇವರ ಹೆಸರು ದಾಖಲಾಗುವ ಬಳುವಳಿ ಬ್ರಿಟಿಷರಿಂದ ದೊರೆಯುತ್ತದೆ. ಇವರ ತಂಡದಲ್ಲಿದ್ದ ಹದಿನೆಂಟು ಮಂದಿ ವೀರ ಸೇನಾನಿಗಳಿಗೆ ಗಲ್ಲು ಶಿಕ್ಷೆಯಾಗುತ್ತದೆ. ನೆಹರು, ತೇಜ್‌ಬಹದ್ದೂರ್ ಸಪ್ರು, ಅಸಫ್ ಅಲಿ ಮೊದಲಾದವರ ಸತತ ಹೋರಾಟ ಮತ್ತು ವಕಾಲತ್ತಿನ ಫಲವಾಗಿ ಕೂದಲೆಳೆಯಷ್ಟು ಅಂತರದಿಂದ ರಾಮರಾಯರು ಗಲ್ಲು ಶಿಕ್ಷೆಯಿಂದ ವಿನಾಯಿತಿ ಪಡೆದದ್ದು ಒಂದು ಪವಾಡವೇ ಸರಿ. ಅವರೂ ೧೯೪೪ ರಿಂದ ೪೬ ರವರೆಗೆ ಬ್ರಿಟಿಷರ ಸೆರೆಯಾಳಾಗಿ ನಾನಾ ಭಾಗಗಳಲ್ಲಿ ಸೆರೆವಾಸ ಅನುಭವಿಸಿ ೧೬-೪-೧೯೪೬ ರಲ್ಲಿ ಬಂಗ್ಲಾದೇಶದ ಜೆಸೂರ್ ಸೆರೆಮನೆಯಿಂದ ಬಿಡುಗಡೆಯಾಗುತ್ತದೆ. ರಾಮರಾಯರ ಬಲಗೈ ಹೆಬ್ಬೆರಳಿನ ಅರ್ಧ ಕಣ್ಮರೆಯಾಗಿ ಅಂದಿನ ಘಟನೆಯನ್ನು ಇಂದಿಗೂ ಜ್ಞಾಪಿಸುವುದಕ್ಕೆ ಸಾಕ್ಷಿಯಾಗಿ ಉಳಿದಿದೆ.

ಸಪ್ಪೆಖಾದಿ ತೊಟ್ಟ ೭೦ರ ಐಎನ್‌ಎ ರಾಮರಾಯರು ೯೭ರ ಇಂದೇ ಹೀಗಿರುವಾಗ ಇಪ್ಪತ್ತರ ಹರೆಯದಲ್ಲಿ ಮಿಲಿಟರಿ ಸಮವಸ್ತ್ರದಲ್ಲಿ ಅಂದು ಹೇಗಿದ್ದರು ಎಂಬುದನ್ನು ನೆನೆದರೆ ಮೆಲ್ಲನೆ ಮೈನಡುಕ ಉಂಟಾಗುತ್ತದೆ. ನೇತಾಜಿಯನ್ನು ಕಾಣದ ನಾನು ಅವರ ಅಂತರಂಗದ ಒಡನಾಡಿಯಾದ ಐಎನ್‌ಎ ರಾಮರಾಯರಲ್ಲಿ ನೇತಾಜಿಯ ಪ್ರತಿರೂಪ ಕಂಡು, ಮೂರ್‍ನಾಲ್ಕು ತಾಸುಗಳ ಅವರ ವಿಚಾರ ಲಹರಿಯಿಂದ ಪ್ರೇರಿತನಾಗಿ ಧನ್ಯತೆಯಿಂದ ಬೀಳ್ಕೊಂಡೆ. ಇದೊಂದು ಅವಿಸ್ಮರಣೀಯ ಮತ್ತು ಅಪೂರ್ವ ಸಂದರ್ಭ.

* * * * *

೧೯೪೧ ಜನವರಿ ೨೬ರ ಒಂದು ಸುದ್ದಿ

ಸುಭಾಷ್‌ಚಂದ್ರ ಬೋಸರು ಇಂದು ಬೆಳಗಿನಿಂದ ಕಲ್ಕತ್ತದ ಎಲ್ಗಿನ್ ರಸ್ತೆಯ ನಿವಾಸದ ತಮ್ಮ ಕೋಣೆಯಲ್ಲಿ ಇಲ್ಲ. ಅವರಿಗಾಗಿ ಇರಿಸಿದ್ದ ಆಹಾರ ಹಾಗೇ ಇದೆ. ಸುಭಾಷರ ಬಹು ದಿನಗಳ ಇಚ್ಛೆಯಂತೆ ಹಿಮಾಲಯಕ್ಕೆ ಹೋಗಿರಬೇಕೆಂದು ಅವರ ಪರಿವಾರದ ಸದಸ್ಯರು ಹೇಳಿದರೆ, ತಪಸ್ಸಿಗಾಗಿ ಏಕಾಂತ ಸ್ಥಳ ಹುಡುಕಿಕೊಂಡು ಹೋಗಿದ್ದಾರೆಂದು ಕೆಲವರು ತಮ್ಮ ಊ[illegible] ಭೂ ಬಿಡುತ್ತಾರೆ. ಅವರದು ತಪಸ್ಸು ಗಿಪಸ್ಸು ಮಾಡುವ ಜಾಯಮಾನವಲ್ಲ

ಮಹತ್ವದ ಕೆಲಸ ಸಾಧಿಸಿಕೊಂಡು ಬರಲು ಹೋಗಿದ್ದಾರೆ. ಅದನ್ನು ಮಾಡಿಕೊಂಡೇ ಅವರು ಹಿಂದಿರುಗುವುದು ಎಂದು ಹಲವರ ಪ್ರವಾದಿ ವಾಣಿ ಉಲಿಯುತ್ತದೆ. ಮನೆ, ಮಾರುಕಟ್ಟೆ, ಟೀ ಅಂಗಡಿ, ರಸ್ತೆ ಬದಿ ಸೆಲೂನ್ ಎಲ್ಲೆಲ್ಲೂ ಇದೇ ಸುದ್ದಿ. ರೆಕ್ಕೆಪುಕ್ಕ ಹಚ್ಚಿಕೊಂಡು ಹಾರಾಡುತ್ತಿತ್ತು. "ಸುಭಾಷರ ಸುದ್ದಿ ಕೇಳಿ ನನಗೆ ದಿಗ್ಭ್ರಮೆ ಉಂಟಾಗಿದೆ. ನಿಜವಾಗಿ ಅವರಿಗೆ ಏನಾಗಿದೆ ತಿಳಿಸಿ, ಅವರಿಗೆ ಯಾವ ವಿಪತ್ತೂ ಆಗದಿರಲಿ ಎಂದು ಆಶಿಸುತ್ತೇನೆ" ಎಂದು ಗಾಂಧೀಜಿ ಯವರು ಶರಚ್ಚಂದ್ರ ಬೋಸರಿಗೆ ತಾರು ಕಳುಹಿಸಿ ಮರುತ್ತರ ಪಡೆದುಕೊಳ್ಳು ತ್ತಾರೆ.

ಹಕ್ಕಿ ಹಾರಿತು

ಇತ್ತ ಚಳಿಗಾಲದ ಮಧ್ಯರಾತ್ರಿಯಲ್ಲಿ ಸುಭಾಷರು ಇಪ್ಪತ್ತನಾಲ್ಕು ತಾಸುಗಳ ಬಿಗಿ ಪಹರೆ ಯನ್ನು ಭೇದಿಸಿ, ತಮ್ಮ ಎಲ್ಗಿನ್ ರಸ್ತೆಯ ಪಂಜರದಿಂದ ಹಾರಿ 'ಎಂಪೈರ್ ಆಫ್ ಇಂಡಿಯಾ ಲೈಫ್ ಅಶೂರೆನ್ಸ್ ಕಂಪನಿ'ಯ ಪ್ರವಾಸಿ ಇನ್‌ಸ್ಪೆಕ್ಟರ್ ಮೊಹಮದ್ ಜಿಯಾ ಉದ್ದೀನ್ ಆಗಿ ಫ್ರಾಂಟಿಯರ್ ಮೈಲ್ ಗಾಡಿಯಿಂದ ಪೆಷಾವರ್ ರೈಲು ನಿಲ್ದಾಣದಲ್ಲಿ ಇಳಿದಿದ್ದರು. ಈ ಹಿಂದೆಯೇ ರೂಪಿಸಿದ್ದ ತಂತ್ರದಂತೆ ರಹಮತ್ ಖಾನ್ (ಸುಭಾಷರ ಮುಂದಿನ ಪಯಣದ ವ್ಯವಸ್ಥೆ ಹೊಣೆ ಹೊತ್ತಿದ್ದ ಫಾರ್‌ವರ್ಡ್ ಬ್ಲಾಕಿನ ಸದಸ್ಯರಾಗಿದ್ದ ಭಗತ್‌ರಾಮ್ ತಲ್ವಾರ್) ಜೊತೆಗೂಡಿ ಅಪರಿಚಿತ ದುರ್ಗಮ ಬೆಟ್ಟ ಗುಡ್ಡ ಕಾಡುಗಳ ಹತ್ತಾರು ಮೈಲುಗಳ ಪ್ರಯಾಣ ನಡೆಸಿ, ಎತ್ತರದ ಬೆಟ್ಟ ಹತ್ತಿ ಇಳಿಯುವ ಹೊತ್ತಿಗೆ ಮಧ್ಯರಾತ್ರಿಯ ಕಾವಳ ಕವಿದಿತ್ತು. ರಾತ್ರಿ ಅಲ್ಲೇ ಮಲಗಿ ಮರುದಿನ ನಸುಕಿನಲ್ಲಿ ಇಬ್ಬರೂ ಪ್ರಯಾಣ ಮುಂದುವರಿಸಿದರು. ದಾರಿಯಲ್ಲಿ ಎದುರಾಗಿ ಪ್ರಶ್ನಿಸಿದವರಿಗೆ ರಹಮತ್ ಖಾನರು ನನ್ನ ದೊಡ್ಡಪ್ಪ ಜಿಯಾ ಉದ್ದೀನ್ ಕಾಯಿಲೆ ಇದ್ದಾರೆ. ಇದಕ್ಕಾಗಿ ಇವರನ್ನು ಆಫ್‌ಘಾನಿಸ್ತಾನದ 'ಅಡ್ಡಾ ಷರೀಫ್' ದೇವಾಲಯಕ್ಕೆ ಕರೆದೊಯ್ಯುತ್ತಿದ್ದೇನೆ ಎಂದು ಹೇಳಿದರೆ ಮತ್ತೆ ಕೆಲವರಿಗೆ ಈತ ಮೂಗ ಮಾತು ಬರುವುದಿಲ್ಲ ಎಂದು ಹೇಳಿ ತಮ್ಮ ಪಯಣ ಮುಂದುವರಿಸಿ, ಜನವರಿ ೩೧ರಂದು ಕಾಬೂಲ್ ತಲಪುತ್ತಾರೆ. ಹಿಂದೆಯೇ ಸುಭಾಷರ ಆರೋಗ್ಯ ಕೆಟ್ಟು ದೇಹ ಕೃಶ ವಾಗಿದ್ದುದು ಇಲ್ಲಿ ಹೆಚ್ಚು ಪ್ರಯೋಜನಕ್ಕೆ ಬರುತ್ತದೆ.

ಸುಭಾಷರು ಕಾಬೂಲ್‌ನಿಂದ ಶೀಘ್ರ ವಾಗಿ ಕಾಲ್ತೆಗೆದಷ್ಟೂ ಕ್ಷೇಮವಾಗಿತ್ತು. ಇವರು ಇಲ್ಲಿರುವ ಸುದ್ದಿ ಏನಾದರೂ ಆಫ್‌ಘಾನ್ ಸರ್ಕಾರಕ್ಕೆ ತಿಳಿದರೆ ನಿಂತಲ್ಲೆ ಬ್ರಿಟಿಷರ ಸೆರೆಯಾಗುತ್ತಿದ್ದರು. ಬೋಸರ ಗುರಿ ಜರ್ಮನಿಯಾದರೂ ಮೊದಲು ರಷ್ಯಕ್ಕೆ ಹೋಗುವುದು ಸರಿ ಎಂದು ನಿರ್ಧರಿಸಿದ್ದರು. ಆದರೆ ಇದಕ್ಕಾಗಿ ಪ್ರಯತ್ನ ಮಾಡಿದಷ್ಟೂ ಅಡ್ಡಿ ಆತಂಕಗಳು ಎದು ರಾಗುತ್ತಿದ್ದವು. ಸುಲಭದಲ್ಲಿ ಸೋಲೊಪ್ಪದ ಸುಭಾಷರು ಸತತ ಪ್ರಯತ್ನದ ಫಲವಾಗಿ ಜರ್ಮನಿಯ ದೂತಾವಾಸದ ಅಧಿಕಾರಿ ಗಳನ್ನು ಸಂಪರ್ಕಿಸುತ್ತಾರೆ. ದೀರ್ಘಸಮಾಲೋಚನೆಯ ಅನಂತರ ಇಟಲಿ ದೂತಾವಾಸದ ಗುಮಾಸ್ತ ಆರ್ಲೆಂಡೊ ಮೆಜ್ಜೊಟ್ಟಾ ಎಂಬ ಮರುನಾಮಕರಣದಿಂದ ಸುಭಾಷರು ರಷ್ಯಕ್ಕೆ ಹೋಗಲು ಪರವಾನಗಿ ದೊರಕಿಸಿ ಕೊಳ್ಳುತ್ತಾರೆ.

ಮತ್ತೊಂದು ಅವತಾರ

ಆರ್ಲೆಂಡೋ ಮೆಟ್ಸೋಟ್ಟಾ ಎಂಬ ಈ ಅವತಾರ ಪುರುಷ ೧೯೪೧ರ ಮಾರ್ಚ್ ೧೮ರ ಬೆಳಿಗ್ಗೆ ಹಿಂದೂ ಕುಶ್ ಕಣಿವೆಯ ಮೂಲಕ ಏಪ್ರಿಲ್ ೩ ರಂದು ಬರ್ಲಿನ್ ತಲಪಿದ್ದರು. ಸುಭಾಷರಲ್ಲಿದ್ದ ಕಲ್ಪನೆಗಿಂತ ಜರ್ಮನಿಯಲ್ಲಿನ ಸ್ಥಿತಿಯು ಭಿನ್ನವಾಗಿತ್ತು. ಇವರ ನಿರೀಕ್ಷೆಗೆ ವಿರುದ್ಧವಾದ ಸಮಸ್ಯೆಗಳು ಎದುರಾಗುತ್ತವೆ. ಹಿಟ್ಲರ್ ಸರ್ಕಾರಕ್ಕೆ ಭಾರತದ ವಿದ್ಯಮಾನಗಳ ಬಗ್ಗೆ ತಿರಸ್ಕಾರ ಇದ್ದ ಕಾರಣ, ಜರ್ಮನ್ ಒಳಸುಳಿಗಳನ್ನು ಸರಿಯಾಗಿ ಅರಿತು ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗಿ ಇತ್ತು. ಇದರಲ್ಲಿ ಸ್ವಲ್ಪ ಏರುಪೇರಾದರೂ ಪರಿಸ್ಥಿತಿ ತಿರುಗುಮುರುಗಾಗುತ್ತಿತ್ತು. ಬೋಸರ ಅಸಾಧಾರಣ ನಿರೀಕ್ಷೆಗೆ ಜರ್ಮನರ ಅನಾಸಕ್ತಿ ತಿರುಗೇಟು ಕೊಟ್ಟಿತ್ತು. ಸುಭಾಷರು ಈ ಎಲ್ಲ ಮರ್ಮಗಳನ್ನು ಚಾಣಾಕ್ಷತೆಯಿಂದ ಒಂದೊಂದಾಗಿ ಭೇದಿಸುತ್ತಾ, ತಮ್ಮ ವಿವೇಚನಾಶಕ್ತಿ ಮತ್ತು ಸಂಘಟನಾ ಕೌಶಲದಿಂದ ಜರ್ಮನ್ ಸೇನೆಯಲ್ಲಿದ್ದ ಭಾರತೀಯ ಯುದ್ಧಕೈದಿಗಳು ಮತ್ತು ಅಲ್ಲಿಯ ಯುವಜನತೆಯನ್ನು ಒಗ್ಗೂಡಿಸಿ ಭಾರತದ ವಿಮೋಚನೆಗೆ ಸೇನೆಯನ್ನು ಸಜ್ಜುಗೊಳಿಸುತ್ತಾರೆ. ಫ್ರಾನ್ಸ್, ಇಟಲಿ, ಬೆಲ್ಜಿಯಮ್, ಆಸ್ಟ್ರಿಯಾ, ಜೆಕೊಸ್ಲೋವೇಕಿಯಾ, ದೇಶಗಳ ಪ್ರಧಾನಿಗಳನ್ನು ಜರ್ಮನ್ ದೂತಾವಾಸದ ಅಧಿಕಾರಿಗಳನ್ನು ನಿರಂತರವಾಗಿ ಸಂಪರ್ಕಿಸುತ್ತ, ಮಾತುಕತೆ ಮುಂದುವರಿಸುತ್ತಾರೆ.

ವೀರವಾಣಿ ಮೊಳಗಿತು

ಸುಭಾಷರು ಭಾರತದಿಂದ ಕಣ್ಮರೆಯಾ
ಅನಂತರ ಫೆಬ್ರುವರಿ ೧೯ರಂದು ಅಜಾದ್
ಹಿಂದ್ ರೇಡಿಯೋದ ಮೂಲಕ ಮೊದ
ಬಾರಿಗೆ ಅವರ ವಾಣಿ ಭಾರತೀಯರಿ
ಹೀಗೆ ಕೇಳಿಬಂತು.

"ನಾನು ಸುಭಾಷ್ ಚಂದ್ರ ಬೋಸ್
ಅಜಾದ್ ಹಿಂದ್ ರೇಡಿಯೋದಿಂದ ಮಾ
ನಾಡುತ್ತಿದ್ದೇನೆ. ಕಳೆದ ಒಂದು ವರ್ಷದಿಂ
ಜಗತ್ತಿನ ವಿದ್ಯಮಾನಗಳನ್ನು ಉಸಿರುಗಟ್ಟಿ
ಮೌನಿಯಾಗಿ ಗಮನಿಸುತ್ತಿದ್ದೆ. ಈಗ ನನ
ಮಾತನಾಡುವ ಸುಸಂದರ್ಭ ಒದಗಿಬಂದಿದೆ
ಇದಕ್ಕಾಗಿ ನಾನು ಕಾಣುತ್ತಿದ್ದ ಕನಸ
ಇಂದು ನನಸಾಗಿದೆ. ಬ್ರಿಟಿಷ್ ಅಧಿಕಾ
ಶಾಹಿಯ ಬಿಗಿಹಿಡಿತದಿಂದ ಸಿಂಗಪುರ ಬಿಡಿ
ಕೊಂಡಿದೆ. ಇದು ಸಾಮ್ರಾಜ್ಯಶಾಹಿ ಪತನ
ಸಂಕೇತವಾಗಿದೆ. ಭಾರತದ ಚರಿತ್ರೆಗೆ ಹೊ
ಶಕೆಯ ಬೆಳಗು ಕಾಣುತ್ತಿದೆ. ನನ್ನ ದೇಶ
ವಿಮೋಚನೆಗೆ ನನ್ನದು ನಿಲ್ಲದ ನಿರಂ
ಹೋರಾಟ. ಈ ದಿಶೆಯಲ್ಲಿ ಎಷ್ಟೇ ಅ
ಆತಂಕಗಳು ಎದುರಾದರೂ ಬಗ್ಗಿ ಬಡಿ
ತ್ತೇನೆ. ಇದರಲ್ಲಿ ಯಶಸ್ಸು ಕಟ್ಟಿಟ್ಟ ಬು
ಇದೇ ರೀತಿ ಬ್ರಿಟಿಷರ ಕಬಂಧ ಬಾಹುವಿ
ಬಂದಿಯಾಗಿ ನಲುಗಿ ನರಳುತ್ತಿರು
ಇನ್ನಿತರ ದೇಶಗಳ ಬೆಂಬಲಕ್ಕೂ ಸಹ ನ
ಸದಾಸಿದ್ಧರಿದ್ದು, ಸಹಕರಿಸುತ್ತೇವೆ."

ಹಿಟ್ಲರ್ ಭೇಟಿ

ಛಲ ಬಿಡದ ಪ್ರಯತ್ನದ ಫಲ
೧೯೪೨ರ ಮೇ ೨೯ರಂದು ಬೋ
ಅಡಾಲ್ಫ್ ಹಿಟ್ಲರನನ್ನು ಭೇಟಿಯ
ತ್ತಾರೆ. ಭಾರತ ಸ್ವಾತಂತ್ರ್ಯ ಪಡೆಯ

ಇನ್ನೂ ೧೫೦ ವರ್ಷಗಳೇ ಬೇಕಾಗುತ್ತವೆ ಎಂಬ ಹಿಟ್ಲರನ ಭ್ರಾಮಕ ಕಲ್ಪನೆಯ ಬೇರು ಅಲುಗಿಸುವುದು ಈ ಭೇಟಿಯಿಂದ ಸಾಧ್ಯವಾಗಲಿಲ್ಲವಾದರೂ, ಸುಭಾಷರು ಕೈಗೊಂಡಿರುವ ಪ್ರಯತ್ನಕ್ಕೆ ತನ್ನ ಬೆಂಬಲ ನೀಡುವ ಭರವಸೆ ಹಿಟ್ಲರ್‌ನಿಂದ ದೊರೆಯುತ್ತದೆ. ಈ ಒಂದು ಭೇಟಿ ಹಲವು ಹತ್ತು ಸಮಸ್ಯೆಗಳ ಪರಿಹಾರಕ್ಕೆ ಸಹಕಾರಿಯಾಗುತ್ತದೆ.

ಸೈನಿಕರ ದೀಕ್ಷೆ

ಜರ್ಮನಿಯಲ್ಲಿ ಆಜಾದ್ ಹಿಂದ್ ಸೇನಾ ಪಡೆಯ ವಿಶೇಷ ಮಿಲಿಟರಿ ಪ್ರದರ್ಶನ ನಡೆಯಿತು. ಈ ಸಮಾರಂಭದಲ್ಲಿ ಜಪಾನಿನ ರಾಯಭಾರಿ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದುದು ಒಂದು ವಿಶೇಷ. ಅಲ್ಲಿ ನೆರೆದಿದ್ದ ಸುಮಾರು ಮೂರುಸಾವಿರ ಸೈನಿಕರು ಆಜಾದ್ ಹಿಂದ್ ಧ್ವಜದ ಅಡಿ ಸ್ವತಂತ್ರ ಭಾರತಕ್ಕೆ ನಿಷ್ಠೆ ತೋರುವ ಪ್ರಮಾಣ ವಚನ ಸ್ವೀಕರಿಸುತ್ತಾರೆ. ಈ ಸಂದರ್ಭದಲ್ಲಿ ಸುಭಾಷರು ಮಾಡಿದ ಭಾಷಣ ಸೈನಿಕರನ್ನು ರೋಮಾಂಚನಗೊಳಿಸಿ, ಉತ್ಸಾಹ ಚಿಮ್ಮಿಸುತ್ತದೆ.

ಜಪಾನಿನತ್ತ ಮುಖಮಾಡಿದ ಮತ್ಸುದಾ

ಸುಭಾಷರು ಯೂರೋಪಿನಲ್ಲಿ ಸ್ವಾತಂತ್ರ್ಯದ ಕಹಳೆ ಮೊಳಗಿಸಿ, ಜಪಾನಿನಲ್ಲಿ ಆಂದೋಲನ ಸಂಘಟಿಸಲು ನಿರ್ಧರಿಸುತ್ತಾರೆ. ಇದು ಕತ್ತಿಯ ಅಲಗಿನ ಮೇಲೆ ನಡೆಯುವ ಸಾಹಸವಾಗಿತ್ತು. ಇಂತಹ ಸಾಹಸಗಳಲ್ಲೇ ತೃಪ್ತಿ ಕಾಣುತ್ತಿದ್ದ ಸುಭಾಷರು ೧೯೪೩ರ ಫೆಬ್ರುವರಿಯಲ್ಲಿ ಜರ್ಮನಿಯಿಂದ ಭೂಗತರಾಗಿ ಮೇ ೧೯ರಂದು 'ಮತ್ಸುದಾ' ಎಂಬ ಹೆಸರಲ್ಲಿ ಟೋಕಿಯೋದಲ್ಲಿ ಪ್ರತ್ಯಕ್ಷರಾಗುತ್ತಾರೆ. ಸುಭಾಷರ ಈ ಪ್ರಯಾಣದ ಘಟನೆ ಕೇಳುಗರ ರಕ್ತವನ್ನು ಹೆಪ್ಪುಗಟ್ಟಿಸುತ್ತದೆ. ಇವರು ಪ್ರಯಾಣಿಸುತ್ತಿದ್ದ ನೌಕೆಯು ಇಂಧನ ಸಾಗರಮಧ್ಯದಲ್ಲಿ ಮುಗಿಯುತ್ತದೆ. ಮೇಲೆ ಮುಗಿಲೆತ್ತರದ ಅಲೆಗಳ ರುದ್ರ ನೃತ್ಯವಾದರೆ, ಕೆಳಗೆ ಬೀಭತ್ಸವಾಗಿ ಬಾಯ್ದೆರೆದು ಬೇಟೆಗಾಗಿ ಕಾತರಿಸುತ್ತಿರುವ ದೈತ್ಯ ಶಾರ್ಕ್‌ಗಳ ಪಡೆ. ಇವಾವುದನ್ನೂ ಲೆಕ್ಕಿಸದ ಅಸೀಮಸಾಹಸಿ ಸುಭಾಷ್ ತಮ್ಮ ಸಾಮಾನು ಸರಂಜಾಮನ್ನು ಬೆನ್ನಿಗೇರಿಸಿ, ನೌಕೆಯಿಂದ ಸಾಗರಕ್ಕೆ ಚಿಮ್ಮುತ್ತಾರೆ. ಹಲವಾರು ತಾಸುಗಳು ಸತತವಾಗಿ ಈಜಿ ದಡ ಸೇರುತ್ತಾರೆ. ಈ ಸಂದರ್ಭದಲ್ಲಿಯೂ ಪ್ರಶಾಂತರಾಗಿ ಉಲ್ಲಾಸಭರಿತರಾಗಿಯೇ ಇರುತ್ತಾರೆ. ಇದು ಸುಭಾಷರಿಗೆ ಮಾತ್ರ ಸಾಧ್ಯ!

ಬೋಸರಿಬ್ಬರ ಮಿಲನ

ಮೊದಲ ಮಹಾಯುದ್ಧದ ದಿನಗಳಲ್ಲಿ ಸರ್ಕಾರದ ವಿರುದ್ಧ ಭಾರತೀಯ ಸೇನೆಯಲ್ಲಿ ಬಂಡಾಯ ಎಬ್ಬಿಸಿ, ೧೯೧೨ರಲ್ಲಿ ದೆಹಲಿ ಚಾಂದಿನಚೌಕದ ಬಳಿ ವೈಸ್‌ರಾಯ್ ಹಾರ್ಡಿಂಗ್ ಮೆರವಣಿಗೆ ಮೇಲೆ ಬಾಂಬ್ ಎಸೆದು, ಪೋಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ, ಕಣ್ಮರೆಯಾಗಿ ಜಪಾನ್‌ನಲ್ಲಿ 'ಠಾಕೂರ್' ಎಂಬ ಹೆಸರಿನಲ್ಲಿ ನೆಲೆಸಿದ್ದ ಕ್ರಾಂತಿಕಾರಿಯೇ ರಾಸ್ ಬಿಹಾರಿಬೋಸ್.

೧೯೪೩ರ ಜೂನ್ ಎರಡನೆಯ ವಾರದ ಅಂತ್ಯದಲ್ಲಿ ಟೋಕಿಯೋ ಇಂಪೀರಿಯಲ್

ಹೊಟೇಲಿನಲ್ಲಿ ಬೋಸ್‌ದ್ವಯರ ಮೊದಲ ಭೇಟಿಯಾಗುತ್ತದೆ. ಇಬ್ಬರೂ ಪರಸ್ಪರ ಆಲಂಗಿಸಿಕೊಂಡು ಮಾತುಮೀರಿದ ಮೌನ ದಲ್ಲಿ ಬಂಧಿಯಾಗುತ್ತಾರೆ. ದೀರ್ಘ ಕಾಲದ ಮಿತ್ರರಂತೆ ಸ್ವಭಾಷೆಯಲ್ಲಿ ಸಂಭಾಷಿಸುತ್ತಾರೆ. ರಾಸ್‌ಬಿಹಾರಿ ಬೋಸರ ಹೆಗಲಮೇಲಿದ್ದ ಸೈನ್ಯದಭಾರ ಈಗ ಸುಭಾಷ ರಿಗೆ ವರ್ಗವಾಗಿ ರಾಸ್‌ಬಿಹಾರಿ ನೆಮ್ಮದಿ ಉಸಿರುಬಿಡುತ್ತಾರೆ.

ಇನ್ನು ಮುಂದೆ ಬೋಸರ ಮುಸುಕಿನ ಮರೆಯ ಸಾಹಸ ಕ್ರಿಯೆಗೆ ತೆರೆ ಬೀಳುತ್ತದೆ. ೧೯೪೩ ಜೂನ್ ೧೬ರಂದು ಜಪಾನ್ ಸಂಸತ್ತು ಇವರನ್ನು ಆಹ್ವಾನಿಸುತ್ತದೆ. ೧೯ರಂದು ಪತ್ರಿಕಾಗೋಷ್ಠಿ ಕರೆದು ನನಗೆ ಜಪಾನೀಭಾಷೆ ಬರುವುದಿಲ್ಲವಾದ್ದರಿಂದ ನನ್ನ ಶತ್ರು ಭಾಷೆಯಾದರೂ ಇಂಗ್ಲಿಷ್‌ನಲ್ಲೇ ಮಾತನಾಡುತ್ತೇನೆ ಎಂದು ವಿಷಾದಿಸಿ, ಈವರೆಗೆ ತಡೆಗಟ್ಟಿ ಹಾಕಿದ್ದ ತಮ್ಮ ನಿಲುವು ಗಳನ್ನು ಸ್ವಚ್ಛಂದವಾಗಿ ಹರಿಯ ಬಿಡು ತ್ತಾರೆ.

ಭಾರತೀಯ ರಾಷ್ಟ್ರೀಯ ಸೇನೆ (ಐಎನ್‌ಎ)

ಜೂನ್ ೨೬ರಂದು ಸಿಂಗಪುರ ತಲುಪಿದ ಬೋಸ್ ದ್ವಯರನ್ನು ಜಪಾನೀ ಸೇನೆಯು ಅಮಿತೋತ್ಸಾಹದಿಂದ ಅಭೂತಪೂರ್ವ ವಾಗಿ ಬರಮಾಡಿಕೊಳ್ಳುತ್ತದೆ. ಇದರಿಂದ ಬೋಸರಿಗೆ ತಮ್ಮ ಕನಸು ನೆನಸಾಗುವ ಭರವಸೆ ಮೂಡುತ್ತದೆ. ಜುಲೈ ೪ರಂದು ರಾಸ್ ಬಿಹಾರಿ ಬೋಸರು ಸುಭಾಷರನ್ನು ಹೊಸ ಅಧ್ಯಕ್ಷರೆಂದು ಅಧಿಕೃತವಾಗಿ ಘೋಷಿಸುತ್ತಾರೆ. ಸುಡು ಬಿಸಿಲಿದ್ದರೂ ನೇತಾಜಿ ಅವರು ಮಿಲಿಟರಿ ಸಮವಸ್ತ್ರ ಸಿಪಾಯಿ ಶಿಸ್ತಿನಲ್ಲಿ ನಿಂತು ದೀರ್ಘ ಕಾಲದ ತಮ್ಮ ವೈನವಿರೇಳಿಸುವ ಭಾಷ ದಲ್ಲಿ ಜಾಗತಿಕ ಸ್ಥಿತಿಗತಿ, ಸೈನಿಕನಲ್ಲಿ ಬೇಕಾದ ಧ್ಯೇಯ, ನಿಷ್ಠೆ, ಮನೋಬಲ ಬಗ್ಗೆ ಮನವರಿಕೆ ಮಾಡಿಕೊಡುತ್ತಾರ ಪ್ರಚಂಡ ಸೈನ್ಯ ಸಾಗರ ಈ ಮಹ ನಾಯಕನ ಅಸ್ಖಲಿತ ವಾಣಿಯನ್ನು ಮಂತ್ರ ಮುಗ್ಧವಾಗಿ ಆಲಿಸಿ, ತಮ್ಮ ಸರ್ವಸ ವನ್ನೂ ಪಣವಿಟ್ಟು ದಾಸ್ಯವಿಮೋಚನೆ ಹೋರಾಡುವುದಾಗಿ ಸೈನಿಕ ಸಮೂ ದೀಕ್ಷೆತೊಡುತ್ತದೆ.

ಜಪಾನ್ ಶರಣಾಗತಿ

ಮುಂದೆ ಅಮೆರಿಕ ಮತ್ತು ಇಂಗ್ಲೆಂಡ ಗಳ ಸಂಯುಕ್ತ ಶಕ್ತಿಗೆ ಜರ್ಮನಿ ಮತ್ತ ಜಪಾನ್ ಮಣಿಯುವುದು ಅನಿವಾರ್ಯ ವಾಗುತ್ತದೆ. ಏಪ್ರಿಲ್ ೬ರಂದು ಹಿರೋಷಿಮ ಮತ್ತು ಆಗಸ್ಟ್ ೯ರಂದು ನಾಗಸಾಕಿಯ ಮೇಲೆ ಬಿದ್ದ ಪರಮಾಣುಬಾಂಬಿನಿಂ ಜಪಾನ್ ತತ್ತರಿಸುತ್ತದೆ. ಈ ಸಂದರ್ಭದ ಜಪಾನಿನಲ್ಲಿ ಬೋಸರು ಚರ್ಚಿಸುವುದಕ್ ಅಧಿಕಾರಿಗಳ ಕೊರತೆ ಎದ್ದು ಕಾಣುತ್ತ ಮಲಯದ ಸೆರಂಬನ್‌ನಲ್ಲಿ ಬಿಡಾ ಮಾಡಿದ್ದ ನೇತಾಜಿ ಅವರಿಗೆ ರಷ್ಯಾ ಜಪಾನ್‌ಮೇಲೆ ಯುದ್ಧ ಸಾರಿದ ಸುದ್ದಿ ತ ಪಿದರೆ, ಆಗಸ್ಟ್ ೧೧ರ ನಡು ರಾತ್ರಿಯ ಜಪಾನ್ ಶರಣಾಗತಿಯಾದ ವರ್ತಮಾನ ಸಿಡಿಲಿನಂತೆ ಬಂದೆರಗುತ್ತದೆ. ಜಪಾನ್‌ನ ಇಷ್ಟೆಲ್ಲ ಸ್ಥಿತ್ಯಂತರ ನಡೆದರೂ ಐಎನ್‌ಎ ಅ ಯಾನ ಅಭಾದಿತವಾಗಿ ನಡೆಯುತ್ತ ಜಪಾನ್ ಮತ್ತು ಐಎನ್‌ಎ ಗುಂಗ

ಪ್ರತ್ಯೇಕವಾದರೂ ಪರಸ್ಪರ ಪ್ರೇರಕ ಮತ್ತು ಪೂರಕವಾಗಿದ್ದುವು.

ವಿಮಾನ ದುರಂತ

ಆಗಸ್ಟ್ ೧೭ರಂದು ದಕ್ಷಿಣ ವಿಯಟ್ನಾಮ್ ಸೈಗಾನ್ ನಿಲ್ದಾಣದಿಂದ ಸಂಜೆ ೫-೩೦ರ ಸುಮಾರಿಗೆ ವಿಮಾನ ಹಾರಿತು. ಇದರಲ್ಲಿ ನೇತಾಜಿ ಅವರೊಡನೆ ಹತ್ತು ಮಂದಿ ಸಿಬ್ಬಂದಿ ವರ್ಗ, ಬರ್ಮಿ ಸೇನಾಧಿಕಾರಿ ಲೆಫ್ಟಿನೆಂಟ್ ಜನರಲ್ ಶಿಡಾಇ ಮತ್ತು ನೇತಾಜಿ ಅವರ ಮಿಲಿಟರಿ ಸಹಾಯಕರಾದ ಕರ್ನಲ್ ಹಬೀಬ್ ರೆಹಮಾನ್ ಸಹ ಇದ್ದರು. ವಿಮಾನ ಸುಮಾರು ೯೦೦ ಮೀಟರ್ ಉದ್ದದ ರನ್‌ವೇ ತುದಿ ತಲಪುವುದಕ್ಕೆ ಸ್ವಲ್ಪ ಮುಂಚೆ ಗಗನಗಾಮಿಯಾಯಿತು. ಕ್ಷಣಾರ್ಧದಲ್ಲಿಯೇ ಭಯಂಕರ ಆಸ್ಫೋಟನೆಯಿಂದ ಇಂಜನ್‌ನಿಂದ ಬೇರೆಯಾದ ವಿಮಾನ ನೆಲಕ್ಕೆ ಅಪ್ಪಳಿಸುತ್ತದೆ. ನೇತಾಜಿಯವರನ್ನು ವಿಮಾನದಿಂದ ಮೊದಲು ಹೊರಗೆ ಕಳುಹಿಸಲು ನಿಷ್ಠ ಪರಿಚಾರಕ ಹಬೀಬ್ ರೆಹಮಾನ್ ಪಡುತ್ತಿದ್ದ ಎಲ್ಲ ಸಾಹಸಗಳು ಭಗ್ನಗೊಳ್ಳುತ್ತಿದ್ದುವು. ಧಗಧಗನೆ ಹೊತ್ತಿ ಉರಿಯುತ್ತಿದ್ದ ವಿಮಾನದಿಂದ ತುಂಬಿತುಳುಕುತ್ತಿದ್ದ ಸಾಮಾನು ಸರಂಜಾಮುಗಳ ನಡುವೆ ಹೇಗೋ ದಾರಿ ಮಾಡಿಕೊಂಡು ನೇತಾಜಿಯವರು ರೆಹಮಾನ್ ಕೂಡಿಕೊಂಡು ಕೊನೆಗೂ ಹೊರಬಂದರು. ನೇತಾಜಿ ಧರಿಸಿದ್ದ ಮಿಲಿಟರಿ ಖಾಕಿ ಸಮವಸ್ತ್ರ ಬೆಂಕಿ ಜ್ವಾಲೆಯೊಂದಿಗೆ ನರ್ತಿಸುತ್ತಿತ್ತು. ನೇತಾಜಿ ಅವರನ್ನು ರೆಹಮಾನ್ ನೆಲದ ಮೇಲೆ ಮಲಗಿಸಿದರು. ತಲೆಯ ಎಡಭಾಗದಲ್ಲಿ ದೊಡ್ಡ ಗಾಯವಾಗಿ ಹಣೆ ಸೀದು ಕರಕಲಾಗಿತ್ತು. ತನ್ನ ತಲೆಯಿಂದ ರಕ್ತ ಹರಿಯುತ್ತಿದ್ದರೂ ರೆಹಮಾನ್, ನೇತಾಜಿ ಅವರ ಹಣೆಯಲ್ಲಿ ಒಸರುತ್ತಿದ್ದ ರಕ್ತಸ್ರಾವ ನಿಲ್ಲಿಸಲು ಕರವಸ್ತ್ರ ಬಿಗಿಯುತ್ತಿದ್ದರು. ಯಥಾ ಗುರು ತಥಾ ಶಿಷ್ಯ.

ಅಮರ ನೇತಾಜಿ ಭರತ ವಾಕ್ಯ

ತಾನು ಉಳಿಯುವುದು ಅಸಾಧ್ಯ ಎಂದು ನೇತಾಜಿ ಹೇಳಿದಾಗ ರೆಹಮಾನ್ "ಇಲ್ಲ ಇಲ್ಲ ನಿಮ್ಮನ್ನು ಖಂಡಿತವಾಗಿಯೂ ದೇವರು ಉಳಿಸುತ್ತಾನೆ" ಎಂದರು. ಅದಕ್ಕೆ ನೇತಾಜಿ "ನಾನು ಬದುಕುವ ಯಾವ ನಂಬಿಕೆಯೂ ಉಳಿದಿಲ್ಲ. ನನ್ನ ಉಸಿರಿರುವವರೆಗೆ ದೇಶದ ವಿಮೋಚನೆಗಾಗಿ ಸೆಣಸಿದ್ದೇನೆ. ನಾನಿಲ್ಲ ಎಂದು ಈ ಹೋರಾಟ ಇಲ್ಲಿಗೇ ನಿಲ್ಲಬಾರದು. ಇರುವವರು ಇದನ್ನು ಮುಂದುವರಿಸಬೇಕು. ಭಾರತ ಶೀಘ್ರದಲ್ಲೇ ಮುಕ್ತವಾಗುವ ಭರವಸೆ ನನಗಿದೆ. ಇನ್ನು ಮುಂದೆ ಭಾರತವನ್ನು ದಾಸ್ಯದಲ್ಲಿಡಲು ಯಾರಿಂದಲೂ ಸಾಧ್ಯವಿಲ್ಲ. ನೀವು ಭಾರತಕ್ಕೆ ಹಿಂದಿರುಗಿದ ಮೇಲೆ ಅಲ್ಲಿಯ ನನ್ನ ಬಾಂಧವರಿಗೆ ಈ ವಿಷಯ ತಿಳಿಸಿ" ಎಂದು ಭರತವಾಕ್ಯ ನುಡಿದು ಅಮರರಾಗುತ್ತಾರೆ.

"ದೇಶ ಬದುಕಲೆಂದು ವ್ಯಕ್ತಿ ಸಾಯಬೇಕಾಗುತ್ತದೆ. ಭಾರತ ಬದುಕಿ ಸ್ವಾತಂತ್ರ್ಯವನ್ನು, ಭವ್ಯತೆಯನ್ನು ಗಳಿಸಲೆಂದು ಇಂದು ನಾನು ಸಾಯಲು ಸಿದ್ಧನಿರುವೆ."

ನೇತಾಜಿ

ದೆಹಲಿಯ ಕಿಂದರಿಜೋಗಿ : ಕೇಶವಶಂಕರ ಪಿಳ್ಳೈ

ಟಿ. ಎಸ್. ಲಲಿತ
೭೦೩, ಮೊದಲನೆ ಮಹಡಿ,
೧೭ನೇ ಮೇನ್, ಸರಸ್ವತಿ
ಮೈಸೂರು-೫೭೦೦೦೯

ಸೂರ್ಯನ ಹೊಂಗಿರಣ ಮೂಡಿದ ಬೆಳಗು. ಆದರೂ ನಾನು ನಡುಗುತ್ತಿದ್ದೆ. ಚಳಿಯಿಂದಲ್ಲ, ಗಾಬರಿಯಿಂದ. ನಾನು ಬರೆದ ಮೊದಲ ಮಕ್ಕಳ ಕಥೆಯನ್ನು ಭಾರತದಲ್ಲಿ ಮಕ್ಕಳ ಕಲೆ ಹಾಗೂ ಸಾಹಿತ್ಯಕ್ಕೆ ಮತ್ತೊಂದು ಹೆಸರೆನಿಸಿದ ವ್ಯಕ್ತಿಯ ಬಳಿ ಕೊಂಡೊಯ್ಯುತ್ತಿದ್ದೆ. ಎಲ್ಲರಿಂದಲೂ ಸರಳವಾಗಿ ಶಂಕರ್ ಎಂದು ಕರೆಯಲ್ಪಡುತ್ತಿದ್ದ ಭಾರತೀಯ ವ್ಯಂಗ್ಯ ಚಿತ್ರಗಾರ ಕೇಶವ ಶಂಕರ ಪಿಳ್ಳೈಯೇ ಆ ವ್ಯಕ್ತಿ.

ಮಕ್ಕಳ ಬುಕ್ ಟ್ರಸ್ಟ್ ಆಫೀಸಿನೊಳಗೆ ನಡೆದಾಗ, ಎದುರಾದದ್ದು ವಯಸ್ಸಾದ ತೆಳು ಶರೀರದ ವ್ಯಕ್ತಿ. "ಶಂಕರರವರ ಜೊತೆ ನನ್ನ ಭೇಟಿ ನಿಗದಿತವಾಗಿದೆ" ಎಂದು ನನ್ನ ಸಂಕೋಚವನ್ನು ಸರಿಸುತ್ತ ಹೇಳಿದೆ. ಒಂದೂ ಮಾತಿಲ್ಲದೆ ಆ ವ್ಯಕ್ತಿ, ಉದ್ದನೆಯ ಕಾರಿಡಾರ್‌ನ ಮೂಲಕ, ಆಕರ್ಷಕ, ಭವ್ಯ ಕೊಠಡಿಯೊಂದಕ್ಕೆ ನನ್ನನ್ನು ಕರೆದೊಯ್ದು, ಟೇಬಲ್‌ನ ಹಿಂದಿದ್ದ ಕುರ್ಚಿಯೊಂದರಲ್ಲಿ ಕುಳಿತು, ತುಂಟ ನಗೆ ತುಳುಕಿಸುತ್ತ "ನಾನೇ ಶಂಕರ್" ಎಂದರು.

ಭೂಮಿ ಬಾಯ್ದೆರೆದಂತಾ ಯ
ಶಂಕರರ ಕೀಟಲೆಯ ಬಾಣಕ್ಕೆ ತುತ್ತಾಗಿ
ನಾನು. ದೇಶದ ಅತಿ ಮುಖ್ಯ ರಾಜಕೀ
ಧುರೀಣರು, ವೈಸ್‌ರಾಯ್‌ಗಳು, ಪ್ರಧ
ಗಳು, ಸಮಾಜದ ಉನ್ನತವರ್ಗದ ಮ
ಯರು ಪ್ರಭಾವಶಾಲಿ ವ್ಯಾಪಾರಿ
ಎಲ್ಲರೂ, ನಾಲ್ಕು ದಶಕಗಳಿಗೂ ಹೆ
ಕಾಲ, ಭಾರತದ ಅತ್ಯುತ್ತಮ ವ್ಯ
ಚಿತ್ರಕಾರರೆನಿಸಿದ ಶಂಕರರ ವ್ಯಂಗ್ಯ
ಗುರಿಯಾದವರೇ.

ಒಮ್ಮೆ ಕೇಂದ್ರ ಸರ್ಕಾರದ ಮ
ಯೊಬ್ಬರಿಗೆ ಪುಸ್ತಕವೊಂದನ್ನು ಕಳುಹಿ
ಶಂಕರ್‌ಗೆ ದೊಡ್ಡ ವಂದನಾರ್ಪಣ
ಕಾರ್ಡೊಂದು ಬಂತು. ಅದಕ್ಕೆ
ಹಾಕಿದ್ದವರು ಮಂತ್ರಿಗಳ ಖ
ಸೆಕ್ರೆಟರಿ, ತಕ್ಷಣವೇ ಆ ಪತ್ರಕ್ಕೊ
ವಂದನಾಪತ್ರ ಕಳುಹಿಸಿದ ಶಂಕರ್, ಪ
ತಮ್ಮ ಚಪರಾಸಿಯಿಂದ ಸಹಿ ಹ
ಮುಯ್ಯಿಗೆ ಮುಯ್ಯಿ ತೀರಿಸಿಕೊಂಡಿದ್ದ

ಶಂಕರ್ ನೆನಪಿನಲ್ಲುಳಿಯುವುದು,
ಹಾಸ್ಯಕ್ಕಿಂತ ಹೆಚ್ಚಾಗಿ ಕಿಂದರಜೋ
ಅವರ ಪಾತ್ರದಿಂದ. ಕಾರಣ ಭಾರ

ಮೂಲ: ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಅನೂಪ್‌ಲಾಲ್‌ರ 'ದಿ ಪೈಪರ್ ಆಫ್ ಡೆಲ್ಲಿ' ಲೇಖನ.

ಮಕ್ಕಳಿಗಾಗಿ ಶಂಕರರಂತೆ ಶ್ರಮಿಸಿದವರು ವಿರಳ. ೧೦೦ ದೇಶಗಳಿಂದ ೪೦,೦೦೦ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಳ್ಳುವ ವಾರ್ಷಿಕ ಚಿತ್ರ ಹಾಗೂ ಬರವಣಿಗೆಯ ಸ್ಪರ್ಧೆಗಳು, ವಿಶ್ವದ ಅತಿದೊಡ್ಡ ವಿವಿಧ ಉಡುಗೆಯ ಬೊಂಬೆಯ ಸಂಗ್ರಹ, ಭಾರತೀಯ ಉಡುಪಿನ ಬೊಂಬೆಗಳ ಡಿಸೈನ್ ಸೆಂಟರ್‌ನ ಪ್ರಾರಂಭ, ಭಾರತದಲ್ಲೇ ಅತಿ ದೊಡ್ಡದೆನಿಸಿದ ೩೦,೦೦೦ ಮಕ್ಕಳ ಪುಸ್ತಕಗಳನ್ನು ಹೊಂದಿದ ಮಕ್ಕಳ ಗ್ರಂಥಾಲಯ ಸ್ಥಾಪನೆ, ಅರ್ಧ ಡಜನ್‌ಗೂ ಮೀರಿದ ಭಾರತೀಯ ಭಾಷೆಗಳಲ್ಲಿ ೪೫೦ಕ್ಕೂ ಹೆಚ್ಚು ಅಗ್ರ ದರದ ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವ ಚಿಲ್ಡ್ರನ್ ಬುಕ್ ಟ್ರಸ್ಟ್ (ಸಿಬಿಟಿ)ನ ಸ್ಥಾಪನೆ, ಇವು ಮಕ್ಕಳಿಗಾಗಿ ಶಂಕರರಿತ್ತ ಅಪೂರ್ವ ಕೊಡುಗೆಗಳು.

ಭಾರತದ ಅತ್ಯುನ್ನತ ಪ್ರಶಸ್ತಿಗಳೆನಿಸಿದ ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮವಿಭೂಷಣಗಳಿಂದಲಂಕೃತರಾದುದಲ್ಲದೆ ವಿದೇಶಗಳಿಂದಲೂ ಪುರಸ್ಕರಿಸಲ್ಪಟ್ಟವರು ಶಂಕರ್. ಒಬ್ಬ ವ್ಯಕ್ತಿಯ ಹೃದಯವಂತಿಕೆ, ಸ್ನೇಹ ಒಳ್ಳೆಯತನ ಹಾಗೂ ತಾಳ್ಮೆಯನ್ನು ಗುರುತಿಸಿ ಪ್ರತಿವರ್ಷ, ಪೋಲಿಷ್ ಮಕ್ಕಳ ಸಮಿತಿಯೊಂದರಿಂದ ಕೊಡಲ್ಪಡುವ ಕೊಡಿಗೆ ಆರ್ಡರ್ ಆಫ್ ಸ್ಮೈಲ್ ೧೯೭೭ ರಲ್ಲಿ ಶಂಕರ್‌ಗೆ ಸಂದಿತು. 'ನೈಟ್ ಆಫ್ ದಿ ಆರ್ಡರ್' ಎನಿಸಿದ ಶಂಕರ್ ಎಲ್ಲ ಅಡೆತಡೆಗಳ ಬಿರುಗಾಳಿಯನ್ನೆದುರಿಸಿ, ಮಕ್ಕಳಿಗೆ ಸಂತೋಷತರುವ ಭರವಸೆ ಕೊಡಬೇಕಿತ್ತು. ಆ ಸಂದರ್ಭದಲ್ಲಿ ಒಂದು ಬಟ್ಟಲು, ಹುಳಿ ನಿಂಬೆರಸವನ್ನು ಕುಡಿದು, ಸಂತೋಷ ಸೂಸುವ ಮುಖಚರ್ಯೆ ತೋರಬೇಕಿತ್ತು ಶಂಕರ್. "ಅದು ನಾನೆದುರಿಸಿದ ಅತ್ಯಂತ ಕಠಿಣ ಸ್ಪರ್ಧೆಯಾಗಿತ್ತು" ಎಂದರು. ಶಂಕರ್ ಕಣ್ಣುಗಳಲ್ಲಿ ಹೊಳಪು ಮೂಡಿಸುತ್ತ, ಹುಳಿ ರಸವನ್ನು ಗಂಟಲಿಗಿಳಿಸಿ, ನನ್ನ ಜೀವನದಲ್ಲೇ ಅತ್ಯಂತ ಮೋಹಕವಾದ ನಗೆಯನ್ನು ನನ್ನ ಮುಖದಲ್ಲಿ ಮೂಡಿಸಿ, ಆ ಸ್ಪರ್ಧೆಯಲ್ಲಿ ಗೆದ್ದೆ ಎನ್ನುತ್ತಾರವರು.

ಒಬ್ಬ ವ್ಯಕ್ತಿ ಇಷ್ಟೆಲ್ಲ ಸಾಧಿಸಲು ಹೇಗೆ ಸಾಧ್ಯ? ಅದಕ್ಕೆಲ್ಲಿ ಪ್ರಾರಂಭ? ೧೯೦೨ರ ಜುಲೈ ೩೧ ರಂದು ಕೇರಳದ ಚಿಕ್ಕ ಪಟ್ಟಣ ಕಾಯಂಕುಲಂನಲ್ಲಿ ಹುಟ್ಟಿದರು ಕೇಶವ ಶಂಕರ ಪಿಳ್ಳೈ. ಮಗುವಾಗಿದ್ದಾಗಲೇ ತಂದೆಯ ಸಾವು. ಶಂಕರರ ತಾಯಿ, ಮಗನನ್ನು ಚಿಕ್ಕಪ್ಪನ ಆಶ್ರಯಕ್ಕೊಪ್ಪಿಸಿ ಮತ್ತೊಬ್ಬ ವ್ಯಕ್ತಿಯನ್ನು ಮರುಮದುವೆಯಾದರು.

ಪೆನ್ಸಿಲ್ ಹಿಡಿಯಲು ಬರುವ ಸಮಯದಿಂದಲೇ ಚಿತ್ರ ಬಿಡಿಸುವ ಉತ್ಸಾಹ, ಒಮ್ಮೆ ಟೇಬಲ್ ಮೇಲೆ ಕಾಲಿಟ್ಟು, ತರಗತಿಯಲ್ಲೇ ಗೊರಕೆ ಹೊಡೆಯಲಾರಂಭಿಸಿದ ಶಾಲೆಯ ಹೆಡ್‌ಮಾಸ್ತರರನ್ನು ಚಿತ್ರಿಸಿದರು ಶಂಕರ್. ಕೋಪದಿಂದ ಬುಸುಗುಡುತ್ತ, ದೂರು ಹೊತ್ತು ಶಂಕರರ ಮನೆಗೆ ಧಾವಿಸಿದರು ಹೆಡ್‌ಮಾಸ್ತರ್ ಚಿತ್ರ ನೋಡಿದ, ಶಂಕರರ ಚಿಕ್ಕಪ್ಪನ ನಗೆಯ ಕಟ್ಟೆಯೊಡೆದು "ಈ ಹುಡುಗನಲ್ಲಿ ಇಂಥ ಪ್ರತಿಭೆಯಡಗಿದೆ ಎಂದು ನನಗೆ ತಿಳಿದಿರಲೇ ಇಲ್ಲ" ಎಂದಾಗ ಗಾಬರಿಗೊಂಡಿದ್ದ ಶಂಕರ್, ಸಮಾಧಾನ ಹೊಂದಿದರು.

ಆ ದಿನಗಳಲ್ಲಿ ಚಿತ್ರಗಳು ಎಷ್ಟೇ ಚೆನ್ನಾಗಿದ್ದರೂ, ವ್ಯಂಗ್ಯಚಿತ್ರಕಾರರಿಗೆ ಬೇಡಿಕೆ ಇರಲಿಲ್ಲ. ಕಾಲೇಜು ಡಿಗ್ರಿ ಮುಗಿ

ಸಿದ ಶಂಕರ್, ೧೯೨೭ರಲ್ಲಿ ಮುಂಬಯಿಯ ಹಡಗು ವ್ಯಾಪಾರಿ ನರೋತ್ತಮ ಮೊರಾರ್ಜಿಯವರ ಖಾಸಗಿ ಕಾರ್ಯದರ್ಶಿಯಾಗಿ ನೇಮಕಗೊಂಡರು. ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ಬಿಸಿ ಏರುತ್ತಿತ್ತು. ಶಂಕರ್ ತಮ್ಮ ಕುಂಚದ ಮೂಲಕ ಚಳುವಳಿಗೆ ಸಹಕಾರವಿತ್ತರು. ಬ್ರಿಟಿಷ್ ಸರ್ಕಾರದ ಉನ್ನತ ಅಧಿಕಾರಿಗಳ ವ್ಯಂಗ್ಯಚಿತ್ರಗಳನ್ನು ಚಿತ್ರಿಸಿ ಪ್ರಮುಖ ರಾಷ್ಟ್ರೀಯ ಪತ್ರಿಕೆಗಳಾದ ಬಾಂಬೆ ಕ್ರಾನಿಕಲ್ ಹಾಗೂ ಫ್ರೀಪ್ರೆಸ್ ಜರ್ನಲ್‌ಗಳಿಗೆ ಕಳುಹಿಸಲಾರಂಭಿಸಿದರು. ಇದರಿಂದಾಗಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರೊಂದಿಗೆ ಅವರ ನಿಕಟ ಸಂಪರ್ಕವೇರ್ಪಟ್ಟಿತು. ಅವರ ಕೋಣೆಯಲ್ಲಿಯೇ ಕಾಂಗ್ರೆಸ್ ಪಕ್ಷದ ಬುಲೆಟಿನ್‌ಗಳು ರಹಸ್ಯವಾಗಿ ಮುದ್ರಣವಾಗತೊಡಗಿದವು.

ಶಂಕರರ ಚಿತ್ರಗಳು, ಅತ್ಯಂತ ಜನಪ್ರಿಯವಾಗತೊಡಗಿದಂತೆ, ೧೯೩೨ರಲ್ಲಿ ದೆಹಲಿಯ 'ಹಿಂದುಸ್ಥಾನ್ ಟೈಮ್ಸ್' ಶಂಕರ್‌ರನ್ನು, ತನ್ನ ವ್ಯಂಗ್ಯಚಿತ್ರಕಾರನನ್ನಾಗಿ ನೇಮಿಸಿಕೊಂಡಿತು. ಕೆಲವೇ ತಿಂಗಳು ಇಲ್ಲಿ ಕೆಲಸ ಮಾಡಿದ ಶಂಕರ್‌ರನ್ನು ವೈಸ್‌ರಾಯ್ ಲಾರ್ಡ್ ವಿಲ್ಲಿಂಗ್ಡನ್ ಕರೆಕಳುಹಿಸಿದರು. ತಮ್ಮ ವ್ಯಂಗ್ಯ ಚಿತ್ರಗಳು ವೈಸ್‌ರಾಯರನ್ನು ಸಿಟ್ಟಿಗೆಬ್ಬಿಸಿವೆ ಎಂದು ತಿಳಿದ ಶಂಕರ್, ವೈಸ್‌ರಾಯರ ಭೇಟಿಗೆ ಹೋಗುವ ಮೊದಲು ಆತಂಕದಿಂದ ತಮ್ಮನ್ನು ತಾವೇ ಸಮಾಧಾನಿಸಿಕೊಳ್ಳುವಂತೆ ಮೂರು ಬಟ್ಟಲು ಚಹಾ ಹೀರಿ ಹೊರಟರು. ಬದಲಿಗೆ ವಿಲ್ಲಿಂಗ್ಡನ್ ನಗುಮೊಗದಿಂದ, ಅವರ ಬೆನ್ನು ತಟ್ಟಿ ಸ್ವಾಗತಿಸಿ "ನಿನ್ನ ವ್ಯಂಗ್ಯ ಚಿತ್ರಗಳು ನನ್ನನ್ನು ಸಂತೋಷಗೊಳಿಸುತ್ತವೆ, ಹುಡುಗ" ಎಂದರು. ಅವರೊಂದಿಗೆ ಸೇರಿದ ಲೇಡಿ ವಿಲ್ಲಿಂಗ್ಡನ್, ಕ್ಷೋಭೆಗೊಂಡಿದ್ದ ಶಂಕರ್ ರವರನ್ನು ಕುರಿತು "ನಿನ್ನ ಬಗ್ಗೆ ನನ್ನ
ದೊಂದು ದೂರಿದೆ. ನೀನು ನನ್ನ ಗಂಡನ ಮೂಗನ್ನು ಯಾವಾಗಲೂ ತೀರಾ ಉದ್ದ
ವಾಗಿ ಚಿತ್ರಿಸುತ್ತೀಯೆ" ಎಂದರು.

ತಾನು ಚಿತ್ರಿಸುವ ವ್ಯಕ್ತಿಗಳ ಕೆಲ
ವೊಂದು ಶಾರೀರಿಕ ಲಕ್ಷಣಗಳನ್ನು ಯಾವಾ
ಗಲೂ ಉತ್ಪ್ರೇಕಿಸಿ ಚಿತ್ರಿಸುತ್ತೇನೆನ್ನುವುದು ಶಂಕರರ ವಿವರಣೆ. "ವಿಲ್ಲಿಂಗ್ಡನ್‌ರ ವಿಷಯ
ದಲ್ಲಿ ಉತ್ಪ್ರೇಕ್ಷೆಗೊಳಗಾಗಿರುವುದು ಅವರ
ಮೂಗು. ಕೇವಲ ಅವರ ಮೂಗನ್ನಷ್ಟೇ
ಚಿತ್ರಿಸಿದರೂ, ಜನಗಳಿಗೆ ಅವರು ನಿಮ್ಮ
ಗಂಡನೆಂದು ಗೊತ್ತಾಗುವುದು" ಎಂದರು. ಸಂತೋಷದಿಂದ ಗಹಗಹಿಸಿ ನಕ್ಕರು ಲೇಡಿ
ವಿಲ್ಲಿಂಗ್ಡನ್.

ಜವಹರಲಾಲ್ ನೆಹರೂರಂತಹ
ಭಾರತೀಯ ನಾಯಕರು ಅಷ್ಟೇ ವಿನೋದ
ಪರರಾಗಿದ್ದರು. ೧೫೦೦ಕ್ಕೂ ಹೆಚ್ಚು ಬಾರಿ
ವ್ಯಂಗ್ಯವಾಗಿ ಚಿತ್ರಿಸಲ್ಪಟ್ಟ ನೆಹರೂಗ
ಶಂಕರರ ಚಿತ್ರಗಳ ಬಗ್ಗೆ ತೀವ್ರ ಮೆಚ್ಚಿಕೆ
"ನನ್ನ ಬಗೆಗೇನೂ ದಾಕ್ಷಿಣ್ಯ ತೋ
ಬೇಕಾದ್ದಿಲ್ಲ ಶಂಕರ್" ಎಂದಿದ್ದರೊಮ್ಮೆ
ನೆಹರು.

ಶಂಕರರ ವ್ಯಂಗ್ಯಕ್ಕೆ ಯಾರೂ ಹೊ
ತಾಗಿರಲಿಲ್ಲ. ೧೯೪೩ರ ಬಂಗಾಳದ ಭಯಂಕ
ಕ್ಷಾಮದ ಸಮಯದಲ್ಲಿ, ಭಾರತದ ಆಹಾ
ಮಂತ್ರಿ ಶ್ರೀ ಜೆ. ಪಿ. ಶ್ರೀವಾಸ್ತವ ಹೆಚ್ಚಿ
ಆಹಾರವಿರುವ ಕಡೆಯಿಂದ, ಕಡಿ
ಆಹಾರವಿರುವ ಸ್ಥಳಕ್ಕೆ, ಆಹಾರ ಪದಾರ್ಥ

ಗಳನ್ನು ಸಾಗಿಸುವ ಬಗ್ಗೆ ಜಾರಿಕೆಯ ಮಾತಾಡಿದಾಗ, ಅವರ ಅಗಾಧ ಹೊಟ್ಟೆಯ ಭಾಗದಿಂದ ಸಣ್ಣ ತಲೆಯ ಕಡೆಗೆ ಬಾಣದ ಗುರುತು ಸಾಗುವಂತೆ ವ್ಯಂಗ್ಯವಾಗಿ ಅವರನ್ನು ಚಿತ್ರಿಸಿದ್ದರು.

'ಹಿಂದೂಸ್ಥಾನ್ ಟೈಮ್ಸ್' ಪತ್ರಿಕಾ ಸಂಪಾದಕ ದೇವದಾಸ್‌ಗಾಂಧಿಯವರ ಮಾವ ಭಾರತದ ಕಾಂಗ್ರೆಸ್ ನೇತಾರ 'ಡೆವಿಲ್ ಆಫ್ ಡೆಲ್ಲಿ' ಎಂದು ಕರೆಯಲ್ಪಡು ತ್ತಿದ್ದ ಸಿ. ರಾಜಗೋಪಾಲಾಚಾರಿಯವ ರನ್ನು ವಿಶೇಷವಾಗಿ, ವ್ಯಂಗ್ಯವಾಗಿ ಚಿತ್ರಿಸು ತ್ತಿದ್ದರು. ರಾಜಾಜಿ ಇದರ ಬಗ್ಗೆ ಸಂಪಾದ ಕರಿಗೆ ದೂರಿತ್ತಾಗ ಅಂತಹ ವ್ಯಂಗ್ಯ ಚಿತ್ರ ಗಳನ್ನು ಇನ್ನು ಮುಂದೆ ಬರೆಯದಿರುವಂತೆ, ಶಂಕರ್‌ಗೆ ಸಂಪಾದಕರ ಕೋರಿಕೆಯ ಪತ್ರ ವೊಂದು ಬಂತು. ಆದಕ್ಕೂ ರಾಜಾಜಿಯವರ ವ್ಯಂಗ್ಯಚಿತ್ರ ಬರದೇ ಒಪ್ಪಿಗೆ ಕೊಟ್ಟರು ಶಂಕರ್.

ಈ ಘಟನೆ, ಶಂಕರ್‌ರನ್ನು ಎಷ್ಟು ಕ್ಷೋಭೆಗೊಳಿಸಿತೆಂದರೆ, ಸ್ವಲ್ಪ ಸಮಯ ದಲ್ಲೇ ಪತ್ರಿಕೆಯ ತಮ್ಮ ಕೆಲಸಕ್ಕೆ ರಾಜಿನಾಮೆಯಿತ್ತರು. ತಮ್ಮೆಲ್ಲ ಉಳಿತಾಯದ ೧೦,೦೦೦ ರೂ. ಬಂಡ ವಾಳದ ಜೊತೆ, ಸ್ನೇಹಿತರಿಂದ ಪಡೆದ ಸಾಲ ದೊಂದಿಗೆ ತಮ್ಮದೆ ಸಾಪ್ತಾಹಿಕವೊಂದನ್ನು ಪ್ರಾರಂಭಿಸಿದರು. ಈ ಹೊಸ ಸಾಹಸದ ಭವಿಷ್ಯ ಮಾತ್ರ ನಗೆಪಾಟಲಾಗಲಿಲ್ಲ. ೧೯೪೮ರ ಮೇ ತಿಂಗಳ 'ಶಂಕರ್ಸ್ ವೀಕ್ಲಿ'ಯ ಮೊದಲ ಮುದ್ರಣದ ೧೩,೦೦೦ ಪ್ರತಿಗಳೂ ತಕ್ಷಣವೇ ಮಾರಾಟವಾದದ್ದಲ್ಲದೆ, ಮುಂದಿನ ೨೭ ವರ್ಷಗಳವರೆಗೂ, 'ಶಂಕರ್ಸ್ ವೀಕ್ಲಿ' 'ನಗೆಗೀಡುಮಾಡುವ ಎಲ್ಲದರ ಬಗ್ಗೆಯೂ ನಗಬೇಕು' ಎಂಬ ಸೂತ್ರಕ್ಕನುಸಾರವಾಗಿ ನಡೆದುಕೊಂಡಿತು.

ರಾಜಕಾರಣಿಗಳಲ್ಲದೆ, ಸ್ವತಂತ್ರ ಭಾರತದ ಹೊಸ ಸಾಮಾಜಿಕ ಸ್ತರದಲ್ಲಿ ಮೇಲೇರಿ ಮೆರೆಯಬಯಸಿದವರು, ಹಾಗೂ ವ್ಯಾಪಾರೀ ವರ್ಗದವರನ್ನು ಕತ್ತೆಯ ತಲೆ ಯೊಂದಿಗೆ 'ಬಡಾ ಸಾಬ್' ಹಾಗೂ 'ಮೇಮ್ ಸಾಬ್' ಎಂದು ಕರೆದು ಅವಮಾನ ಗೊಳಿಸಿದರು.

ಭಾರತದ ವೃತ್ತಪತ್ರಿಕೆಗಳು ಹಾಗೂ ನಿಯತಕಾಲಿಕೆಗಳ ಅತಿ ಗಂಭೀರ ಪ್ರಭಾವ ವನ್ನು ಕಮನಗೊಳಿಸುವಂತೆ ಮಾಡಿದ್ದಲ್ಲದೆ, 'ಶಂಕರ್ಸ್ ವೀಕ್ಲಿ' ದೇಶದ ಅನೇಕ ಉದಯೋನ್ಮುಖ ವ್ಯಂಗ್ಯ ಚಿತ್ರಕಾರರಿಗೆ ಬೆಳವಣಿಗೆಯ ಕ್ಷೇತ್ರವಾಗಿಯಿತ್ತು. ವಿವಿಧ ಹಿನ್ನೆಲೆ ಹೊಂದಿದ ಪತ್ರಕರ್ತರು, ರಾಜ ಕಾರಣಿಗಳು, ವಿದ್ಯಾರ್ಥಿಗಳು, ಗೃಹಿಣಿ ಯರು ಮುಂತಾದ ಬರಹಗಾರರನ್ನು ಪ್ರೋತ್ಸಾಹಿಸಿದರು.

ಹಾಸ್ಯಭರಿತ ನಿಯತಕಾಲಿಕೆಯೊಂದನ್ನು ಹೊರಡಿಸುವುದು ಕಷ್ಟಕರವಾದ ಕೆಲಸವೇ ಸರಿ. ಹಾಗಾಗಿ 'ಶಂಕರ್ಸ್ ವೀಕ್ಲಿ'ಯ ಪ್ರಾರಂಭದ ಅನೇಕ ತಿಂಗಳುಗಳವರೆಗೂ ಶಂಕರ್‌ಗೆ ಬಿಡುವಿಲ್ಲದ ದುಡಿಮೆ, ಅನೇಕ ದಿನ ಬೆಳಿಗ್ಗೆ ಶಂಕರರ ಕಛೇರಿಗೆ ಹೋದಾಗ, ಸುತ್ತ ಹರಡಿದ ವ್ಯಂಗ್ಯ ಚಿತ್ರಗಳು, ಸಿಗ ರೇಟಿನ ತುಣುಕುಗಳು ಹಾಗೂ ತಣ್ಣೀರು ತುಂಬಿದ ಪ್ಲಾಸ್ಕ್‌ಗಳೊಂದಿಗೆ, ಕಡು ನೀಲಿಯ ಏಪ್ರನ್ ಧರಿಸಿ, ತನ್ನ ಮಯತೆ ಯಿಂದ ಡ್ರಾಯಿಂಗ್ ಬೋರ್ಡಿನ ಮೇಲೆ ಚಿತ್ರ ಬಿಡಿಸುತ್ತ ರಾತ್ರಿಯನ್ನು ಕಳೆದ ಶಂಕರ್ ನನ್ನು ಕಾಣುತ್ತಿದ್ದೆ" ಎನ್ನುತ್ತಾರೆ.

ಮತ್ತೊಬ್ಬ ವ್ಯಂಗ್ಯ ಚಿತ್ರಕಾರ ಟಿ. ಸ್ಯಾಮ್ಯುಯಲ್.

ಚಿತ್ರ ಬಿಡಿಸದಿದ್ದಾಗ, ತಮ್ಮ ಮತ್ತೆರಡು ಪ್ರಿಯ ಹವ್ಯಾಸಗಳಲ್ಲಿ ತೊಡಗಿಕೊಳ್ಳುತ್ತಿದ್ದರು ಶಂಕರ್—ಬ್ರಿಡ್ಜ್ ಆಡುವುದು, ಇಲ್ಲವೇ ಸ್ನೇಹಿತರಿಗೆ ಆತಿಥ್ಯ ನೀಡುವುದು. ಅವರ ಹಾಸ್ಯ ಸ್ವಭಾವ ಮಾತ್ರ ಎಂದೂ ಅವರಿಂದ ದೂರವಾದದ್ದಿಲ್ಲ.

೧೯೪೯ರ ಪ್ರಾರಂಭದಲ್ಲೇ ತನ್ನ ಸ್ಥಾನವನ್ನು ಭದ್ರಗೊಳಿಸಿಕೊಂಡ ಶಂಕರ್ಸ್ ವೀಕ್ಲಿಯ ಸ್ಥಾಪಕನಿಗೆ ಮಾತ್ರ ವಿರಾಮವೇ ಇಲ್ಲವೆನ್ನುವ ಸ್ಥಿತಿ. ಕಲಾತ್ಮಕವಾದ ತಮ್ಮ ಪ್ರತಿಭೆಯನ್ನು ಹೊರ ಹಾಕಲು ಅವಕಾಶಗಳೇ ಇಲ್ಲದ ಭಾರತೀಯ ಮಕ್ಕಳಿಗಾಗಿ, ಅಖಿಲ ಭಾರತ ಚಿತ್ರ ಬಿಡಿಸುವ ಹಾಗೂ ಬರೆಯುವ ಸ್ಪರ್ಧೆಯೊಂದನ್ನೇರ್ಪಡಿಸಿದ ವಾರದಲ್ಲೇ ಸುಮಾರು ಸಾವಿರ ಸ್ಪರ್ಧಿಗಳಿಂದ, ಶಂಕರ್ಸ್ ವೀಕ್ಲಿಯ ಕಛೇರಿಗೆ ಅರ್ಜಿಗಳು ಬಂದವು. ಬಹುಮಾನ ವಿಜೇತರ ಕೃತಿಗಳಿಗಾಗೇ ವಿಶೇಷ ಸಂಚಿಕೆ ಹೊರತಂದ ಶಂಕರ್ ಮರು ವರ್ಷ ವಿದೇಶಿ ಅಭ್ಯರ್ಥಿಗಳಿಗಾಗಿ ಸ್ಪರ್ಧೆ ಏರ್ಪಡಿಸಿದಾಗ ೧೩ ದೇಶಗಳಿಂದ ಏಳುಸಾವಿರ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ದಾಖಲಿಸಿದರು.

ಸ್ಪರ್ಧೆಗೆ ಕಳಿಸಲ್ಪಟ್ಟ ಚಿತ್ರಗಳನ್ನು ಮಕ್ಕಳು ಬಿಡಿಸದೆ, ಹಿರಿಯರೇ ಬಿಡಿಸಿದ್ದಾರೆಂಬ ದೂರು ಕೇಳಿ ಬಂದಾಗ, ೧೯೫೨ರಿಂದ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲು ಪ್ರಾರಂಭಿಸಿದರು ಶಂಕರ್. ಈಗ ಪ್ರತಿ ವರ್ಷದ ಫೆಬ್ರುವರಿಯಲ್ಲಿ ಕುತೂಹಲ ಭರಿತ ತಂದೆ, ತಾಯಿಯರಿಂದ ಸುತ್ತುವರಿಯಲ್ಪಟ್ಟ ೫–೧೬ ವರೆಗಿನ ೧೫,೦೦೦ಕ್ಕಿಂತ ಹೆಚ್ಚು ಮಕ್ಕಳು, ದೆಹಲಿಯ ...
ಯೊಂದರ ಹಸಿರು ಹುಲ್ಲಿನ ಮೇಲೆ ಕು...
ತಮ್ಮ ಅಮೂಲ್ಯ ಕೃತಿಗಳಿಗೆ ...
ತುಂಬುವುದರಲ್ಲಿ ಮಗ್ನರಾಗುತ್ತಾರೆ. ...
ಯೊಂದು ಸ್ಪರ್ಧೆಗಳಲ್ಲೂ ದೈಹಿಕ...
ಸಂಪೂರ್ಣ ಮೇಲ್ವಿಚಾರಣೆ ನಡೆಸ...
ಸಾಧ್ಯವಾಗದಿದ್ದರೂ ಕೈಲಿ ವಾಕಿಂಗ್ ಸ್ಟಿ...
ಹಿಡಿದ ಶಂಕರ್, ಪ್ರತಿ ಸ್ಪರ್ಧೆಯ ...
ದಂದು ಹಾಜರಿದ್ದು, ತಮ್ಮ ಕಲ್ಪನೆ...
ಪ್ರಪಂಚಕ್ಕೆ ಬಣ್ಣ ತುಂಬುವ ಚಿಣ್ಣರ...
ಹರ್ಷದಿಂದ ವೀಕ್ಷಿಸುತ್ತಿದ್ದರು.

೧೯೫೦ರಲ್ಲಿ ಭಾರತಕ್ಕೆ ಬಂದ ಹ...
ಯನ್ ರಾಯಭಾರಿ, ಅಂತಾರಾಷ್ಟ್ರ...
ಚಿತ್ರಸ್ಪರ್ಧೆಯ ವಿಜೇತರಿಗೆ ಬಹುಮ...
ವಾಗಿ ಕೊಡುವಂತೆ ಬೊಂಬೆಯೊಂದ...
ಕೊಟ್ಟರು. ಆ ಬೊಂಬೆಯಿಂದ ಶಂ...
ಅದೆಷ್ಟು ಆಕರ್ಷಿತರಾದರೆಂದರೆ, ಅದ...
ತಮ್ಮಲ್ಲಿಯೇ ಇರಿಸಿಕೊಂಡು, ಬದ...
ಬೇರೊಂದು ಬಹುಮಾನದ ಏರ್ಪಾ...
ಮಾಡಿದರು. ಆ ಬೊಂಬೆ ವಿಶ್ವದ...
ಯಿಂದ ಬೊಂಬೆಗಳನ್ನು ಕಲೆಹಾಕುವ...
ಶಂಕರ್‌ರನ್ನು ಪ್ರೇರೇಪಿಸಿತು. ಈ ...
ಕಲೆಹಾಕಿದ, ಬೊಂಬೆಗಳ ಪ್ರದ...
ವೊಂದನ್ನು ನೋಡಿದ ನೆಹರು, ಮು...
ತಮಗೆ ಬಳುವಳಿಯಾಗಿ ಬಂದ, ಸು...
ಉಡುಪಿನ ಎಲ್ಲ ಬೊಂಬೆಗಳನ್ನು ಶಂಕ...
ಕೊಡುತ್ತ ಬಂದರು. ಇತರ ಹಿರಿಯ ರಾ...
ಭಾರಿಗಳು ವಿದೇಶೀ ಪ್ರವಾಸಿಗರು ನೆಹ...
ಮಾರ್ಗವನ್ನನುಸರಿಸಿದಾಗ, ಶಂಕ...
ಸಂಗ್ರಹ ಹಿಗ್ಗಿತು.

ಬೊಂಬೆಗಳೊಂದಿಗೆ ಮಕ್ಕಳ ಪು...
ಗಳನ್ನು ಕಲೆಹಾಕಿದ ಶಂಕರ್ ಎ...

ಸಂಗ್ರಹವನ್ನು, ನವದೆಹಲಿಯ 'ಬಹಾದುರ್ ಷಾ ಜಫರ್' ಮಾರ್ಗದಲ್ಲಿ ವಿಶೇಷವಾಗಿ ನಿರ್ಮಿಸಿದ ನಾಲ್ಕಂತಸ್ತಿನ ಕಟ್ಟಡದಲ್ಲಿ ಅಣಿಗೊಳಿಸಿದರು. ತಮ್ಮನ್ನು ಅರ್ಥ ಮಾಡಿಕೊಂಡು, ತಮಗೆ ಸದಾ ಸಹಾಯ ಹಸ್ತ ನೀಡಿದ ವ್ಯಕ್ತಿಯ ಸವಿ ನೆನಪಿನಲ್ಲಿ ಕಟ್ಟಡಕ್ಕೆ 'ನೆಹರು ಹೌಸ್' ಎಂದೇ ನಾಮಕರಣ ಮಾಡಿದರು.

ಶಂಕರ್ ಅವರ ನೆಹರೂ ಹೌಸ್‌ನಲ್ಲಿ, ಮಕ್ಕಳ 'ಬುಕ್ ಟ್ರಸ್ಟ್' (ಸಿಬಿಟಿ) ಒಂದನ್ನು ಸ್ಥಾಪಿಸಿದರು. ಪ್ರಕಟಣೆಗೆ ಮಕ್ಕಳ ಕಥೆಗಳು ಹೆಚ್ಚಿರಲಿಲ್ಲವಾದ್ದರಿಂದ ಅವುಗಳನ್ನು ಸ್ವತಃ ತಾವೇ ಬರೆಯತೊಡಗಿದರು. ಕಥಾ ವಿಷಯವಾಗಿ ಭಾರತದ ಪುರಾಣಗಳು, ಜಾನಪದ, ಪ್ರಾಣಿ ಪ್ರಪಂಚ ಹಾಗೂ ಕೇರಳದ ೨೦ನೇ ಶತಮಾನದ ಹುಡುಗನಾದ ತಮ್ಮ ಅನುಭವಗಳನ್ನೇ ಆಯ್ಕೆ ಮಾಡಿದರು. ಶಂಕರರ ಆನೆಯ ಕಥೆಗಳು, ಮಕ್ಕಳಿಗಾಗಿ ಬರೆದ ಅತ್ಯಂತ ಮನೋಜ್ಞ ಕಥೆಗಳು. ತಾನು ಪ್ರೀತಿಸುತ್ತಿದ್ದ ಪುಟ್ಟ ಹುಡುಗಿಯೊಂದಿಗುಳಿಯಲು, ಕಾಡಾನೆ ತನ್ನ ಜೀವವನ್ನೇ ಪಣಕ್ಕೊಡ್ಡುವ ಕಥೆ ಈಗಲೂ ಮಕ್ಕಳಿಗೆ ಅತ್ಯಂತ ಪ್ರೀತಿಪಾತ್ರವಾದದ್ದಾಗಿದೆ.

೧೯೭೦ರ ವೇಳೆಗೆ ವಿವಿಧ ರೀತಿಯ ತಮ್ಮೆಲ್ಲ ಚಟುವಟಿಕೆಗಳನ್ನು ನಿರ್ವಹಿಸುವುದು ಕಷ್ಟಕರವೆನಿಸಿದಾಗ, ೧೯೭೫ರ ಏಪ್ರಿಲ್‌ನಲ್ಲಿ ತಮ್ಮ ಸಾಪ್ತಾಹಿಕವನ್ನು ನಿಲ್ಲಿಸಿಬಿಡುವುದಾಗಿ ಘೋಷಿಸಿದರು ಶಂಕರ್. ಆದರೆ ಜನತೆಯಿಂದ ಅದಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಯಿತು. ಆಗ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರು ಸಾಪ್ತಾಹಿಕ ನಡೆಸಲು ಧನ ಸಹಾಯ ನೀಡಲು ಮುಂದಾದರು. ತಾವೇ ಪತ್ರಿಕೆ ನಡೆಸುವುದಾಗಿ ಸಹೋದ್ಯೋಗಿಗಳು ಹೇಳಿದರು. ಆದರೂ ೧೯೭೫ರ ಆಗಸ್ಟ್‌ನಲ್ಲಿ ಕೊನೆಗೊಂಡ ಪತ್ರಿಕೆಯಿಂದಾಗಿ, ಮಕ್ಕಳ ಬುಕ್ ಟ್ರಸ್ಟ್‌ಗೆ, ತಮ್ಮ ಅಮೂಲ್ಯ ವೇಳೆಯನ್ನೆಲ್ಲ ವಿನಿಯೋಗಿಸಲು ಅವರಿಗೆ ಸಾಧ್ಯವಾಯಿತು.

ರಾಜಕಾರಣಿಗಳನ್ನುಳಿದು, ಹೆಚ್ಚಿನ ಭಾರತೀಯರು ತಮ್ಮ ಚಟುವಟಿಕೆಯ ಜೀವನದಿಂದ ನಿವೃತ್ತರಾಗುವ ವಯಸ್ಸಿನಲ್ಲೂ, 'ನಿವೃತ್ತಿ', 'ವಿರಾಮ' ಎನ್ನುವ ಪದಗಳು ಶಂಕರರ ನಿಘಂಟಿನಲ್ಲಿ ಕಾಣಲೇ ಇಲ್ಲ. "ಸಾಯುವ ದಿನದವರೆಗೂ ನಾನು ಮಕ್ಕಳ ಬುಕ್ ಟ್ರಸ್ಟಿನ ಟ್ರಸ್ಟಿಯಾಗಿರುತ್ತೇನೆಂದಿದ್ದರು ಶಂಕರ್.

ಶಂಕರರ ಎರಡು ಕನಸುಗಳು ನನಸಾಗದೇ ಉಳಿದವು. ಅವುಗಳಲ್ಲೊಂದು ಮಕ್ಕಳಿಗಾಗಿ ನೂರು ಪುಸ್ತಕಗಳನ್ನು ಬರೆಯುವುದು, ಶಂಕರ್ ಒಟ್ಟು ಐವತ್ತು ಪುಸ್ತಕಗಳನ್ನು ಬರೆದು, ೧೫ ಪುಸ್ತಕಗಳಿಗೆ ಸಹ ಲೇಖಕರಾಗಿದ್ದಾರೆ. ಮತ್ತೊಂದು ಡಾರ್ಮಿಟರಿಗಳು, ಆರ್ಟ್‌ಗ್ಯಾಲರಿಗಳು, ಒಂದು ಹವ್ಯಾಸ ಕೇಂದ್ರ ಎಲ್ಲಕ್ಕೂ ಹೆಚ್ಚಾಗಿ ವಿಶ್ವದ ವಿವಿದೆಡೆಗಳಿಂದ ಮಕ್ಕಳು ಪರಸ್ಪರರನ್ನು ಭೇಟಿಯಾಗಿ ಅರಿತುಕೊಳ್ಳುವಂತಾಗುವ ಅಂತಾರಾಷ್ಟ್ರೀಯ ಕೇಂದ್ರವೊಂದನ್ನು ದೆಹಲಿಯಲ್ಲಿ ಸ್ಥಾಪಿಸುವ ಆಸೆ.

ಶಂಕರರ ವಿಶಾಲ ವಿಶ್ವದೃಷ್ಟಿ ಅವರ ಕುಟುಂಬದಲ್ಲಿ ಎದ್ದು ಕಾಣುತ್ತದೆ. ಒಬ್ಬ

ಮಗನ ಮಡದಿ ಚಿಲಿಯನ್ ಹೆಣ್ಣಾದರೆ, ಮಗಳು ಜೆರ್ ಹುಡುಗನನ್ನು ವಿವಾಹವಾಗಿದ್ದಾಳೆ. ಅಳಿಯ ಉತ್ತರ ಪ್ರದೇಶದವನಾದರೆ, ಸೊಸೆ ಗುಜರಾತಿ.

ಕೇರಳದ ಗಾದೆಯೊಂದರ ಪ್ರಕಾರ, "ಸಸಿಗೆ ಸರಿಯಾದ ಆರೈಕೆ ಬೇಕೇಹೊರತು ಕಾಳಿನ ತೆನೆಗೆ ಗೊಬ್ಬರ ಹಾಕುವುದು ಮೂರ್ಖತನ. ಅದೇ ರೀತಿ ಮಕ್ಕಳ ಬ ನಾವು ಹೆಚ್ಚು ಆಸಕ್ತಿ ತಳೆದಲ್ಲಿ, ಪ್ರಪಂ ವಿನ್ನು ಸುಂದರವಾದೀತು" ಎಂದ ಶಂಕರ್. ನಿಜ ನಮಗೆ ಇಂಥ ನೂರಾ ಶಂಕರರ ಅಗತ್ಯವಿದೆ?

"ನಮಗೆ ಬಿಟ್ರಿಷ್ ಜನತೆಯ ಬಗ್ಗೆ ಯಾವ ದ್ವೇಷವೂ ಇಲ್ಲ. ನಾವು ಹೋರಾಡುತ್ತಿರುವುದು ಇಂಗ್ಲೆಂಡಿನ ಸಾಮ್ರಾಜ್ಯಶಾಹಿಯ ವಿರುದ್ಧ. ನಾವು ಪೂರ್ಣ ಸ್ವತಂತ್ರರಾಗಿ ಇಂಗ್ಲೆಂಡಿನೊಡನೆ ನಮ್ಮ ಸಂಬಂಧ ಹೇಗಿರಬೇಕೆಂದು ನಿರ್ಣಯಿಸ ಬಯಸುತ್ತೇವೆ, ಅಂಥ ಪೂರ್ಣ ಸ್ವಯಂನಿರ್ಣಯಾಧಿಕಾರ ನಮಗೆ ದೊರಕಿದ ನಂತರ ನಾವು ಇಂಗ್ಲೆಂಡ್ ಜನತೆಯೊಂದಿಗೆ ಸೌಹಾರ್ದ ಸಂಬಂಧ ಇರಿಸಿಕೊಳ್ಳಲು ಅಭ್ಯಂತರ ಇಲ್ಲ."

"ಈ ನಶ್ವರ ಜಗತ್ತಿನಲ್ಲಿ ಎಲ್ಲವೂ ನಶಿಸುತ್ತದೆ. ನಶಿಸದೆ ಉಳಿಯುವುವು ಭಾವನೆಗಳು. ಧ್ಯೇಯಗಳು, ಕನಸುಗಳು. ಒಂದು ಭಾವನೆಯ ಸಾಕ್ಷಾತ್ಕಾರಕ್ಕಾಗಿ ಒಬ್ಬ ವ್ಯಕ್ತಿ ಸಾಯಬಹುದು. ಆದರೆ ಅನಂತರ ಭಾವನೆಯು ಅಸಂಖ್ಯ ಪುನರಾವತಾರಗಳಾಗುತ್ತದೆ. ವಿಕಾಸಚಕ್ರ ಚಲಿಸುವುದೇ ಹೀಗೆ. ಒಂದು ಪೀಳಿಗೆಯ ಭಾವನೆ-ಗುರಿ-ಕನಸುಗಳು ಮುಂದಿನ ಪೀಳಿಗೆಗೆ ಪಾರಸಿಕೆಯಾಗುತ್ತದೆ."

"ಒಂದು ಉದಾತ್ತ ತತ್ವಕ್ಕಾಗಿ ಬದುಕಿ ಸತ್ತೆನೆಂಬುದಕ್ಕಿಂತ ಹೆಚ್ಚಿನ ಸಮಾಧಾನ ಒಬ್ಬ ವ್ಯಕ್ತಿಗೆ ಬೇರೆ ಏನಿದ್ದೀತು? ನಾನು ಮುಗಿಸಲಾಗದ ಪ್ರಕ್ರಿಯೆಯನ್ನು ನಾಳಿನವರು ಮುಂದುವರಿಸುತ್ತಾರೆ—ಎಂಬ ಭರವಸೆಗಿಂತ ಹೆಚ್ಚಿನ ಪ್ರತಿಫಲ ಏನಿದ್ದೀತು?"

—ನೇತಾಜಿ

ಮೇಧಾ ಪಾಟ್ಕರ್—ಜನಜಾಗೃತಿಗೆ ಹಾಲೂಡಿಸುತ್ತಿರುವ ತಾಯಿ

ಶ್ರೀಪಾದ ಭಟ್

ಸಂಖ್ಯೆ ೩೦, ದೇವೀರಮ್ಮಣ್ಣಿ ಅಗ್ರಹಾರ
ಖಿಲ್ಲೆ ಮೊಹಲ್ಲ, ಮೈಸೂರು-೫೭೦೦೦೪

ಗುಜರಾತ್, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳ ರಾಜ್ಯ ಸರ್ಕಾರಗಳಿಗೆ ಅಷ್ಟೇ ಏಕೆ ಕೇಂದ್ರ ಸರ್ಕಾರಕ್ಕೂ ಮೇಧಾ ಪಾಟ್ಕರ್‌ರ ಹೆಸರು ಕೇಳಿದರೆ ನಡುಕ ಉಂಟಾಗುತ್ತದೆ. ಸರ್ಕಾರಗಳ ಯೋಜನೆ ಬಡಜನರ ವಿರುದ್ಧ ಜಾರಿಗೊಳ್ಳುವ ಸಂದರ್ಭದಲ್ಲಿ ಅದನ್ನು ತಡೆಯುವುದು ಸುಲಭದ ಮಾತಲ್ಲ. ಅವರಲ್ಲೂ ಒಬ್ಬ ಹೆಣ್ಣಾಗಿ ಮೇಧಾ ಪಾಟ್ಕರರು ಜನರನ್ನು ಸೇರಿಸಿ, ಅವರಿಗೆ ಅರ್ಥೈಸಿ, ಒಂದು ಅದ್ಭುತ ಚಳುವಳಿಯನ್ನೇ ಹುಟ್ಟುಹಾಕಿದ್ದು ಸಾಧಾರಣವಾದ ಕಾರ್ಯವಲ್ಲ. "ನರ್ಮದಾ ಬಚಾವೋ" ಹಾಗೂ "ಸರ್ದಾರ್ ಸರೋವರ ಯೋಜನೆ"ಗಳಲ್ಲಿ ಪ್ರಮುಖವಾಗಿ ಕೇಳಿಬಂದ ಹೆಸರು ಮೇಧಾ ಪಾಟ್ಕರ್.

೧೯೫೪ರಲ್ಲಿ ಮಹಾರಾಷ್ಟ್ರದ ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಜನಿಸಿದ ಮೇಧಾ ಪಾಟ್ಕರರ ಹಿರಿಯರು ಸ್ವಾತಂತ್ರ್ಯದ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ಸಮಾಜೋದ್ಧಾರಕ್ಕಾಗಿ, ರಾಷ್ಟ್ರಕ್ಕಾಗಿ ನೊಂದ ಜನರ ಪರ ಹೋರಾಡುವ ಅವರ ಪ್ರಯತ್ನ ರಕ್ತದ ಗುಣವಾಗಿಯೇ ಬಂದಿದೆ. ತಂದೆ-ತಾಯಿಗಳು ಮಗಳ ಬಗ್ಗೆ ಅಸಾಧಾರಣ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರು. ಅವರ ಆಕಾಂಕ್ಷೆಗಳು ಮಗಳ ಮದುವೆ-ಮನೆ-ಮಕ್ಕಳು ಹಾಗೂ 'ಸುಂದರ ಸಂಸಾರ'ಕ್ಕಷ್ಟೇ ಸೀಮಿತವಾಗಿದ್ದವು. ಇವುಗಳೆಲ್ಲದರ ಬಗ್ಗೆ ಯೋಚಿಸದ ಮೇಧಾರಿಗೆ ಕಾಡುತ್ತಿದ್ದ ಚಿಂತೆಗಳು ಕೇವಲ ಸಾಮಾಜಿಕ ಕಳಕಳಿಯ ವಿಷಯಗಳೇ ಆಗಿರುತ್ತಿದ್ದವು. ಸಮಾಜಶಾಸ್ತ್ರದಲ್ಲಿ ಆಸಕ್ತಿಯಿಂದ ಉನ್ನತ ಶಿಕ್ಷಣ ಪಡೆದ ಮೇಲೆ ಕೆಲವು ಕಾಲ ಕಾಲೇಜೊಂದರಲ್ಲಿ ಉಪನ್ಯಾಸಕಿಯಾಗಿಯೂ ಅವರು ಕೆಲಸ ಮಾಡಿದ್ದಾರೆ. ಕೆಲವೇ ದಿನ ಈ ಕೆಲಸ ನಿರ್ವಹಿಸಿದ ಮೇಧಾ ಉಪನ್ಯಾಸಕಿಯ ಕೆಲಸಕ್ಕೆ ರಾಜೀನಾಮೆ ನೀಡಿ ಸಮಾಜದ ನಿಜವಾದ ಏಳಿಗೆಯ ಕೆಲಸದಲ್ಲಿ ತೊಡಗಿಸಿಕೊಂಡರು. ಸ್ವಾಮಿನಾಥನ್, ಸುಂದರಲಾಲ್ ಬಹುಗುಣ, ಬಾಬಾ ಆಮ್ಟೆ ಮೊದಲಾದವರ ಸಾಮಾಜಿಕ-ಪರಿಸರ ಸಂಬಂಧೀ ಧೋರಣೆಗಳು ಅವರನ್ನು ಹೆಚ್ಚು ಆಕರ್ಷಿಸಿದವು. ಪರಿಸರ ಹಾಗೂ ಸಮಾಜದ ನಡುವಿನ ಸಂಬಂಧವನ್ನು ತಿಳಿಯುವುದಕ್ಕಾಗಿ ಈ ಕುರಿತು ಗಂಭೀರ ಅಧ್ಯಯನ ನಡೆಸಿದ ಮೇಧಾ ಪಾಟ್ಕರ್‌ರು ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡರು. ಇದರಿಂದಾಗಿ ಸರಕಾರ ಮತ್ತು ರಾಜಕೀಯ ಧುರೀಣರ ಕ್ರೂರ ದೃಷ್ಟಿಗೆ ಹಲವಾರು ಬಾರಿ ಒಳಗಾಗಬೇಕಾಯಿತು. ಮನೆಯವರ ಬಲವಂತಕ್ಕಾಗಿ

ಮದುವೆಯಾದ ಮೇಧಾರ ಸಾಂಸಾರಿಕ ಜೀವನ ಹೆಚ್ಚು ಕಾಲ ಉಳಿಯಲಿಲ್ಲ. ಗಂಡ-ಹೆಂಡಿರ ಆಸಕ್ತಿಗಳು ಭಿನ್ನವಾದುದರಿಂದ ಉಂಟಾದ ವಿರಸ ವಿಚ್ಛೇದನಕ್ಕೆ ದಾರಿಮಾಡಿಕೊಟ್ಟಿತು. ಇದರಿಂದ ಮೇಧಾ ವಿಚಲಿತರಾಗಲಿಲ್ಲ. ತನ್ನ ವೈಯಕ್ತಿಕ ನೋವನ್ನು ಜನರ ನಡುವೆ ಇದ್ದಾಗ ಮರೆತರು. ವಂದನಾ ಶಿವ, ಮೇನಕಾಗಾಂಧಿಯವರಂಥ ಸಹಚಿಂತಕರು ಸದಾ ಮೇಧಾ ಪಾಟ್ಕರರ ಜೊತೆ ಕೈಗೂಡಿಸುವುದರಿಂದ ಇವರ ಯೋಜಿತ ಧ್ಯೇಯಗಳು ಕಾರ್ಯಗತಗೊಳ್ಳಲು ಹಾಗೂ ಸರಕಾರಗಳಿಗೆ ಬಿಸಿ ಮುಟ್ಟಿಸಲು ಸಹಕಾರಿಯಾಗಿದೆ.

ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್ ಸರಕಾರಗಳು ಜಂಟಿಯಾಗಿ ಕೈಗೊಂಡ ನರ್ಮದಾ ಯೋಜನೆ ಜನ-ವಿರೋಧಿ ಎಂದು ಅರಿತ ಮೇಧಾ ೧೯೯೦ರ ಡಿಸೆಂಬರ್‌ನಿಂದ ೧೯೯೧ರ ಜನವರಿ ತಿಂಗಳು ಪೂರ್ತಿ ನರ್ಮದಾ ತೀರದುದ್ದಕ್ಕೂ "ಸಂಘರ್ಷ ಯಾತ್ರಾ"ವನ್ನು ಸಂಘಟಿಸಿದರು. ಮೇಧಾರನ್ನು ಗುರಿಯಾಗಿಟ್ಟುಕೊಂಡ ಸರಕಾರ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿತು. ಈ ಯೋಜನೆಯಿಂದ ೪೦,೦೦೦ ಆದಿವಾಸಿ ಬುಡಕಟ್ಟುಗಳು ಗುಳೇ ಹೋಗಬೇಕಾಗುತ್ತದೆ ಹಾಗೂ ೩೩ ಹಳ್ಳಿಗಳು ಮುಳುಗಿಹೋಗುತ್ತವೆ ಎಂಬುದನ್ನು ತಿಳಿದು ಈ ಯೋಜನೆಗೆ ಆದಿವಾಸಿಗಳನ್ನೇ ಸಂಘಟಿಸಿ ಮೇಧಾ ಹೋರಾಡಿದರು. ಧಡಗಾಂ ಎಂಬ ಹಳ್ಳಿಯಲ್ಲಿ ಜನರನ್ನು ಉದ್ದೇಶಿಸಿ ಅವರು ಮಾತಾಡುತ್ತಿದ್ದಾಗ ಸರಕಾರ ಬಂಧಿಸಿತು. ಬಿಡುಗಡೆ ಹೊಂದಿದ ಮೇಧಾ ಮತ್ತೆ ಯಾತ್ರೆಯನ್ನು ಮುಂದುವರೆಸಿದರು. ಯಾತ್ರೆ ಫರ್ಕುವಾ ಗ್ರಾಮದಲ್ಲಿ

ಅಂತ್ಯಗೊಂಡಾಗ ಜನರು ಪ್ರೀತಿಯ
ಉತ್ಸಾಹದಿಂದ 'ಉಕ್ಕಿನ ಮಹಿಳೆ' ಎ
ಕರೆದರು. ಅಲ್ಲಿ ಅವರು ೨೦ ದಿನ ಉಪ
ವ್ರತ ಕೈಗೊಂಡಿದ್ದರು.

೧೯೯೧ರ ಆಗಸ್ಟ್‌ನಲ್ಲಿ ಯೋಜನೆಯ
ಮುಂದುವರಿಸಿದ ಸರಕಾರ ಹಲವು ಹಳ್ಳಿ
ನೀರುಪಾಲಾಗುವಂತೆ ಮಾಡಿತು.
ರಾತ್ ಸರಕಾರ ಮೇಧಾರಿಗೆ ತೀವ್ರ ವಿರೋ
ವನ್ನು ನೀಡಿದರೂ, ಜನಬೆಂಬಲ ಪ
ಮೇಧಾ ಇವುಗಳನ್ನು ಲೆಕ್ಕಿಸದೆ ಚಳ
ಯನ್ನು ಮುಂದುವರೆಸಿದರು. ಧುಲೇ ಜಿ
ಆಡಳಿತ ಮುಳುಗಡೆಯಾಗಲಿರುವ ೩೦
ಹೆಚ್ಚು ಹಳ್ಳಿಗಳಿಗೆ ಮೇಧಾ ಮತ್ತು ಬೆಂ
ಗರು ಪ್ರವೇಶಿಸದಂತೆ ನಿಷೇಧ ಹೊರಡಿಸಿ
ಆದರೆ, ಹೇಗೋ ಒಳಸೇರಿದ ಮೇ
'ಮಣಿಬೇಲಿ'ಯಲ್ಲಿ ಧರಣಿ ಕುಳಿತರು.
ಊರಿನೊಂದಿಗೆ ತಾವೂ ನಾಶವಾಗು
ವೆಂದು ಪಟ್ಟಾಗಿ ಕುಳಿತರು. ಇವರ ಬೆಂ
ಗರು 'ಸಮರ್ಪಿತ ದಳ'ವನ್ನು ರ
ಕೊಂಡರು. ಇದರಿಂದ ಸರ್ಕಾರ ಮಣಿಯ
ಬೇಕಾಯಿತು. ಪರಿಣಾಮ ವಿಶ್ವಬ್ಯಾಂ
ನೀಡಲಿದ್ದ ೧೭೦ ಮಿಲಿಯನ್ ಅಮೆರಿ
ಡಾಲರುಗಳ ಹಣ ಸರಕಾರದ ಕೈತಪ್ಪಿ
ಆಂದೋಲನಕಾರರ ವಾದವನ್ನು
ಬ್ಯಾಂಕಿನ ಸಮಿತಿ ಒಪ್ಪಿತು. ನರ್ಮ
ಯೋಜನೆ ನಿಂತಿತು. ವಿಜಯ ಯಾ
ಯನ್ನು ಮೇಧಾ ಮತ್ತು ಚಳುವಳಿಗಾ
ನಡೆಸಿದರು.

ಸರ್ದಾರ್ ಸರೋವರ ಯೋಜನೆಯ
ಮೇಧಾರದು ಮುಖ್ಯ ಪಾತ್ರವೇ ಆಗಿ
ಬಾಬಾ ಆಮ್ಟೆಯಂಥ ಪರಿಸರ ಪ್ರೇಮಿ
ಬೆಂಬಲದಿಂದ ಈ ಜನವಿರೋಧಿ, ಕೈ

ಕೋದ್ಯಮಿ ಬಂಡವಾಳಶಾಹಿಗಳ ಪ್ರಮುಖ ಯೋಜನೆಗೆ ಕಲ್ಲು ಬೀಳುವಂತಾಯಿತು.

ಮಹಾರಾಷ್ಟ್ರದ ಪ್ರಸಿದ್ಧ ಸ್ವಾತಂತ್ರ್ಯ ಸೇನಾನಿ, ಸಂಘಟಕ ವಸಂತ ಖನೋಲ್ಕರರ ಮಗಳು ಮೇಧಾ ಪಾಟ್ಕರ್. ತಂದೆ ಯಂತೆಯೇ ಸಮಾಜಪ್ರೇಮಿ, ಬಡವರ ಹಿತೈಷಿ. ಸೇವೆಯನ್ನು ರಾಷ್ಟ್ರೀಯ ಸೇವಾ ದಳದಿಂದ ಆರಂಭಿಸಿದ ಮೇಧಾ ಮತ್ತೆ ಹಿಂತಿರುಗಲಿಲ್ಲ. ಮುಂಬೈಯ ಟಾಟಾ ಸಮಾಜ ವಿಜ್ಞಾನ ಸಂಸ್ಥೆಯ ಪದವೀಧರೆ ಯಾದ ಈಕೆ "ಆರ್ಥಿಕ ಬೆಳವಣಿಗೆಗಳು ಮತ್ತು ಸಂಪ್ರದಾಯಸ್ಥ ಆದಿವಾಸಿಗಳ ಮೇಲೆ ಇದರ ಪ್ರಭಾವ"ವನ್ನು ಕುರಿತಂತೆ ಪಿ.ಹೆಚ್.ಡಿ. ಸಂಶೋಧನೆಗೂ ಆಸಕ್ತಿ ತೋರಿದ್ದಿದೆ. ಆದರೆ ತಮ್ಮನ್ನು ತೀವ್ರವಾಗಿ ಚಳುವಳಿ, ಜನಪರ ಸಂಘಟನೆಯಲ್ಲಿ ತೊಡ ಗಿಸಿಕೊಂಡಿದ್ದರಿಂದ ಅವರ ಸಂಶೋಧನೆ ಅರ್ಧಕ್ಕೇ ನಿಂತಿತು. ಗುಜರಾತ್, ಮಹಾ ರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿ ಮಕ್ಕಳ ಅಭಿವೃದ್ಧಿಗಾಗಿ ಯೂನಿಸೆಫ್ ಮೂಲಕ ಅಪಾರ ಕೆಲಸ ಮಾಡಿದ್ದಾರೆ. ಇನ್ನೂ ಮುಖ್ಯವಾಗಿ ಮುಂಬೈನ ೮೦,೦೦೦ ಕೊಳೆಗೇರಿ ನಿವಾಸಿಗಳಿಗೆ ವಿಶ್ವಬ್ಯಾಂಕ್ ನೆರವಿನಿಂದ ಆಸರೆಯನ್ನು ಕಲ್ಪಿಸಿದ್ದಾರೆ. ಆದಿವಾಸಿಗಳ ಕಲ್ಯಾಣಕ್ಕಾಗಿ ಅಪಾರ ಶ್ರಮಿಸಿದ ಮೇಧಾ ಅಹಮದಾಬಾದಿನ ಒಂದು ಸೇವಾ ಸಂಸ್ಥೆಯೊಂದಿಗೆ ಯೂನಿಸೆಫ್ ನೆರವಿನಿಂದ ದುಡಿದಿದ್ದಾರೆ. ನರ್ಮದಾ ಯೋಜನೆಯಿಂದ ಒಮ್ಮೆಲೇ ಮಾಧ್ಯಮಗಳ ಮೂಲಕ ಜಗತ್ತನ್ನು ತನ್ನೆಡೆಗೆ ಸೆಳೆದು ಕೊಂಡ ಮೇಧಾ ತಮ್ಮ ಶ್ರಮಕ್ಕಾಗಿ ಪರ್ಯಾಯ ನೊಬೆಲ್ ಪ್ರಶಸ್ತಿ ಎಂದೇ ಕರೆಯಲಾಗುವ ಸ್ವೀಡನ್ ದೇಶದ ರೈಟ್ ಲೈವ್ಲಿಹುಡ್ ಪ್ರಶಸ್ತಿಯನ್ನು ೧೯೯೧ರಲ್ಲಿ ಪಡೆದರು. ಇದನ್ನು ನರ್ಮದಾ ಬಚಾವೋ ಆಂದೋಲನ ಸಮಿತಿ ಗೆದ್ದಿರುವುದೆಂದು ಬಗೆದ ಮೇಧಾ ೬೭,೦೦೦ ಅಮೆರಿಕನ್ ಡಾಲರು (ಅಂದರೆ ಸುಮಾರು ೧೬,೭೫,೦೦೦ ರೂ.ಗಳು) ಹಣವನ್ನು ಜನಪರ ಹೋರಾಟ ಕ್ಕಾಗಿ ನೀಡಿದರು. "ತಾಯ್ನೆಲದಲ್ಲಿ ದೊರೆ ಯುವ ಗೌರವಕ್ಕಿಂತ ಹೊರಗಿನ ಯಾವ ಪ್ರಶಸ್ತಿಯೂ ಹಿರಿದಲ್ಲ" ಎನ್ನುವುದು ಈ ಸಮಿತಿಯ ನಿಲುವು.

ಹೀಗೆಯೇ ಹಲವಾರು ಪ್ರಶಸ್ತಿ ಪುರಸ್ಕಾರ ಗಳು ಅವರನ್ನು ಹುಡುಕಿಕೊಂಡು ಬಂದಿವೆ, ಬರುತ್ತಿವೆ. ನರ್ಮದಾ ಆಂದೋಳನದ ಕಾರಣ 'ಗ್ರೀನ್ ರಿಬನ್ ಅವಾರ್ಡ್' ದೊರ ಕಿತು. ಬಡವರ ಏಳಿಗೆಗಾಗಿ ನಿರಂತರ ಸಂಘರ್ಷಣೆಗಳನ್ನು ಎದುರಿಸಿದ್ದರಿಂದ ವಿಭಿನ್ನ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪುರಸ್ಕಾರಗಳು ಅವರಿಗೆ ಸಂದಿವೆ. ಅಮೆರಿಕದ 'ಗೋಲ್‌ಮ್ಯಾನ್ ಎನ್ವಿರಾನ್‌ಮೆಂಟ್ ಪುರಸ್ಕಾರ', ಕಲ್ಕತ್ತಾ ಛೇಂಬರ್ ಆಫ್ ಕಾಮರ್ಸ್‌ನ 'ಪ್ರಭಾ' ಪುರಸ್ಕಾರ, 'ನಿಸರ್ಗ ಸೇವಕಿ', 'ತಾರಾ ರಾಣಿ' ಇತ್ಯಾದಿ ಪ್ರತಿಷ್ಠಿತ ಪುರಸ್ಕಾರಗಳು ಅವರಿಗೆ ಲಭ್ಯವಾಗಿವೆ.

ನರ್ಮದಾ ಆಂದೋಳನ ನಿಂತಿಲ್ಲ. ಅದು ಸಾವು ಮತ್ತು ಉಳಿವಿನ ನಡುವಿನ ಹೋರಾಟವೆಂದೇ ಪರಿಗಣಿತವಾಗಿದೆ. ಸಮಾಜಕ್ಕಾಗಿ ತಮ್ಮನ್ನೇ ಸಮರ್ಪಿಸಿ ಕೊಂಡ ಮೇಧಾ ಪಾಟ್ಕರರು ಜನಜಾಗೃತಿ ಯನ್ನು ವಿಭಿನ್ನ ರೀತಿಯಲ್ಲಿ ಉಂಟುಮಾಡು ತ್ತಿದ್ದಾರೆ, ಜನರ ಅರಿವಿಗೆ ಹಾಲೂಡಿಸಿ ರಕ್ಷಿಸುವ ಮಹಾತಾಯಿಯಾಗಿ ನಮಗೆ ಕಾಣುತ್ತಾರೆ.

ಕಣ್ಣುಗಳು ಇಲ್ಲಿಲ್ಲ

ಲಕ್ಷ್ಮೀನಾರಾಯಣ
ರಾಘವೇಂದ್ರಸ್ವಾಮಿ ದೇವಸ್ಥಾನದ ಹ
ರೈಲ್ವೆ ಸ್ಟೇಷನ್ ರಸ್ತೆ
ಕೆ. ಆರ್. ಸಾಗರ–೫೭೭೪೦೧

ನಾನು ರೋಹನಾಕ್ಕೆ ತಲುಪಲು ಬೋಗಿಯೊಳಗೆ ಒಬ್ಬನೇ ಕುಳಿತಿದ್ದಂತೆಯೇ, ಒಂದು ಹುಡುಗಿ ನನ್ನ ಬೋಗಿಯನ್ನು ಹತ್ತಿದಳು. ಬಹುಷಃ ಆ ಹುಡುಗಿಯ ಜತೆಗೆ ಬಂದಿದ್ದವರು ಅವಳ ತಂದೆತಾಯಿಗಳಿರಬಹುದು. ಆ ಹುಡುಗಿಯ ಕ್ಷೇಮದ ಬಗ್ಗೆ ಅವರು ತುಂಬಾ ವ್ಯಾಕುಲರಾಗಿದ್ದರು. ಆ ಹೆಂಗಸಂತೂ, ಆ ಹುಡುಗಿ ತನ್ನ ಸಾಮಾನುಗಳನ್ನು ಎಲ್ಲಿ ಇಟ್ಟುಕೊಳ್ಳಬೇಕು, ಕಿಟಕಿಯಾಚೆ ತಲೆಹಾಕಬಾರದು ಮತ್ತು ಪ್ರಯಾಣಿಸುವಾಗ ಅಪರಿಚಿತರೊಡನೆ ಮಾತಾಡಬಾರದು ಮುಂತಾದ ಸೂಚನೆಗಳನ್ನು ನೀಡುತ್ತಲೇ ಇದ್ದಳು. ರೈಲು ಸ್ಟೇಷನ್ ಬಿಟ್ಟು ಹೊರಡುತ್ತಿದ್ದಂತೆಯೇ ಆ ಹುಡುಗಿಗೆ ವಿದಾಯ ಹೇಳಿದರು.

ನಾನು ಆಗ ಹುಟ್ಟು ಕುರುಡನೇನಾಗಿರಲಿಲ್ಲ. ನನ್ನ ಕಣ್ಣುಗಳು ಕತ್ತಲು ಮತ್ತು ಬೆಳಕನ್ನು ಗುರುತಿಸುವಷ್ಟು ಮಾತ್ರವೇ ಸೂಕ್ಷ್ಮವಾಗಿದ್ದವು. ಆದರೆ ಆ ಹುಡುಗಿ ಹೇಗಿದ್ದಳು ಎಂದು ಹೇಳುವಷ್ಟು ಸಾಮರ್ಥ್ಯವಿರಲಿಲ್ಲ. ಆದರೆ ಅವಳು ಚಪ್ಪಲಿಗಳನ್ನು ಧರಿಸಿರುವಳೆಂದು ಗೊತ್ತಾಗಿತ್ತು, ಏಕೆಂದರೆ
ಅವಳು ನಡೆದು ಬರುವಾಗ ಅವು ಆ
ಹಿಮ್ಮಡಿಗೆ ಬಡಿದು ಸದ್ದು ಮಾಡಿದ್ದ
ಅವಳು ‘ಚೆಲುವೆ’ ಎಂದು ತಿಳಿಯ
ಇನ್ನೂ ಕೆಲವು ಕಾಲ ಬೇಕಾಗಬಹು
ಬಹುಷಃ ಆಗದಿರಲೂಬಹುದು. ಆದರೆ ಅ
ಮಾತಿನ ಧ್ವನಿ ಬಹಳ ಇಂಪಾಗಿದ್ದುದ
ನನಗೆ ಇಷ್ಟವಾಗಿತ್ತು; ಅಷ್ಟೇ ಅಲ್ಲ ಅ
ಚಪ್ಪಲಿಗಳ ಸದ್ದೂ ಕೂಡ!

“ನೀವು ಡೆಹರಾಕ್ಕೆ ಪ್ರಯಾಣಿಸ
ದ್ದೀರಾ?” ನಾನು ಕೇಳಿದೆ. ನನ್ನ ಮಾ
ಸದ್ದು ಅವಳನ್ನು ಚಕಿತಗೊಳಿಸಿತು. ಕಾ
ನಾನು ಬರ್ತಿನ ಕತ್ತಲೆಯ ಮೂಲೆಯ
ರಲ್ಲಿ ಕುಳಿತಿದ್ದೆ. ಸ್ವಲ್ಪ ಗಲಿಬಿಲಿಯೊ
ಹೇಳಿದಳು. “ಇಲ್ಲಿ ಬೇರೆಯವರಿದ್ದಾರೆ
ನನಗೆ ಗೊತ್ತೇ ಇರಲಿಲ್ಲ.” ನಿಜ, ದ
ಚೆನ್ನಾಗಿರುವವರು ತಮ್ಮ ಮುಂದೆ ಏ
ಯೆಂಬುದನ್ನು ತಿಳಿಯಲಾರರು.
ನನಗನ್ನಿಸುತ್ತದೆ, ದೃಷ್ಟಿಯಿಲ್ಲದ
ತಮಗೆ ಅವಶ್ಯವಾದುದನ್ನು
ಇಂದ್ರಿಯಗಳ ಮೂಲಕ ಸ್ಪಷ್ಟವಾಗಿ
ಮಾಡಿಕೊಳ್ಳುವರೆಂದು!

ಆಧಾರ: ರಸ್ಕಿನ್ ಬಾಂಡ್ ಅವರ "ದಿ ಐಸ್ ಆರ್ ನಾಟ್ ಹಿಯರ್" ಎಂಬ ಕ
ಅನುವಾದ.

"ನಾನೂ ಸಹ ನಿಮ್ಮನ್ನು ನೋಡಲಿಲ್ಲ, ಆದರೆ ನೀವು ಒಳಗೆ ಬಂದ ಸದ್ದು ಮಾತ್ರ ಕೇಳಿತು" ನಾನು ಹೇಳಿದೆ. ನಾನು ಕುರುಡನೆನ್ನುವುದನ್ನು ಸಾಧ್ಯವಾದಷ್ಟೂ ಅವಳು ಕಂಡುಹಿಡಿಯಬಾರದು. "ಬಹುಷಃ, ನನ್ನ ಸೀಟಿನಲ್ಲಿ ನಾನು ಹೋಗಿ ಕುಳಿತರೆ ನಾನು ಕುರುಡನೆಂದು ತಿಳಿಯಲು ಅವಳಿಗೆ ಹೆಚ್ಚು ಕಷ್ಟವಾಗಲಾರದು."

ಆ ಹುಡುಗಿ ಉತ್ತರಿಸಿದಳು "ನಾನು ಸಹರಣಪುರದಲ್ಲಿ ಇಳಿಯುತ್ತೇನೆ. ನನ್ನ ಚಿಕ್ಕಮ್ಮ ಅಲ್ಲಿ ನನ್ನನ್ನು ಭೇಟಿಯಾಗುವರು."

"ಹಾಗಾದರೆ ನಾನು ನಿಮಗೆ ಹೆಚ್ಚು ಪರಿಚಿತನಾಗುವುದು ಸರಿಯಲ್ಲ," ನಾನು ಹೇಳಿದೆ. "ಏಕೆಂದರೆ ಚಿಕ್ಕಮ್ಮಂದಿರು ಸಾಮಾನ್ಯವಾಗಿ ಭಯಂಕರ ವ್ಯಕ್ತಿಗಳು."

"ನಿಮ್ಮ ಪ್ರಯಾಣ?" ಆ ಹುಡುಗಿ ಕೇಳಿದಳು.

"ಡೆಹರಾಕ್ಕೆ ಮತ್ತು ಅಲ್ಲಿಂದ ಮುಸ್ಸೂರಿಗೆ."

"ನೀವು ತುಂಬಾ ಅದೃಷ್ಟವಂತರು. ಮುಸ್ಸೂರಿ ನೋಡುವುದೆಂದರೆ ನನಗೆ ಬಹಳ ಇಷ್ಟ. ಅದರಲ್ಲಿಯೂ ಅಕ್ಟೋಬರ್ ತಿಂಗಳಿನಲ್ಲಿ ನೋಡುವುದೆಂದರೆ ಇನ್ನೂ ಖುಷಿಯೆನಿಸುತ್ತದೆ."

"ನಿಜ, ಅದು ಬಹಳ ಒಳ್ಳೆಯ ಕಾಲ" ನೆನಪಿಸಿಕೊಳ್ಳುತ್ತಾ ನಾನು ಹೇಳಿದೆ, "ಆ ಕಾಲದಲ್ಲಿ ಬೆಟ್ಟ ಗುಡ್ಡಗಳೆಲ್ಲಾ ಕಾಡುಹೂಗಳಿಂದ ತುಂಬಿರುತ್ತವೆ, ಹಿತವಾದ ಸೂರ್ಯ ರಶ್ಮಿಗಳು, ನಿರ್ಜನವಾದ ರಸ್ತೆಯಲ್ಲಿ ಇರುಳೆಲ್ಲಾ ಬೆಚ್ಚಗೆ ಬೆಂಕಿಯ ಮುಂದೆ ಕುಳಿತು ಮೌನವಾಗಿ ಸಂಗೀತ ಆಲಿಸುತ್ತಾ ಮೈಮರೆಯುವುದೆಂದರೆ ಎಷ್ಟೊಂದು ಸೊಗಸು. ನಿಜ, ಅಕ್ಟೋಬರ್ ಬಹಳ ಒಳ್ಳೆಯ ಕಾಲ. ಅದಕ್ಕೇ ಪ್ರವಾಸಿಗರು ಆ ಕಾಲದಲ್ಲಿ ಹೆಚ್ಚು ಹೋಗುವುದು."

ಅವಳು ತುಟಿ ಬಿಚ್ಚಲಿಲ್ಲ, ನನಗೆ ಅಚ್ಚರಿಯಾಯಿತು. ನನ್ನ ಮಾತುಗಳು ಅವಳ ಮನಸ್ಸನ್ನು ತಟ್ಟಿತೋ, ಇಲ್ಲ ನನ್ನನ್ನು ಅವಳು 'ರೊಮ್ಯಾಂಟಿಕ್ ಫೂಲ್' ಎಂದು ತಿಳಿದಳೋ ಏನೋ ಕಾಣೆ. "ಅದು ಬಹಳ ಸುಂದರವಾಗಿರುತ್ತದಲ್ಲವೇ?" ಎಂದು ಕೇಳಿ ನಾನೊಂದು ತಪ್ಪು ಮಾಡಿಬಿಟ್ಟೆ.

ಆ ಪ್ರಶ್ನೆಯಿಂದ ಅವಳು ವಿಚಲಿತಳಾದಂತೆ ಕಾಣಲಿಲ್ಲ. ಅವಳೇನಾದರೂ ನಾನು ಕುರುಡನೆಂದು ಗುರುತಿಸಿದಳಾ? ಆದರೆ ತಕ್ಷಣ ಅವಳ ಮರುಪ್ರಶ್ನೆ ನನ್ನನ್ನು ಸಂಶಯದಿಂದ ಪಾರು ಮಾಡಿತು.

"ನೀವೇಕೆ ಕಿಟಕಿಯಾಚೆ ಏನನ್ನೂ ನೋಡುತ್ತಿಲ್ಲ?" ಅವಳು ಕೇಳಿದಳು.

ನಾನು ಬರ್ತ್‌ನಿಂದ ಕೆಳಗಿಳಿದು ಕಿಟಕಿಯ ಪಕ್ಕದಲ್ಲಿ ಕುಳಿತೆ. ಕಿಟಕಿ ತೆರೆದಿತ್ತು. ಕಿಟಕಿಯಾಚೆಗಿನ ನೆಲದ ರೂಪುರೇಷೆಗಳನ್ನು ಗಮನಿಸುತ್ತಿರುವವನಂತೆ ನಟಿಸುತ್ತಾ, ಎಂಜಿನ್ನಿನ ಶಬ್ದ ಮತ್ತು ಗಾಲಿಗಳ ದಡದಡ ಸದ್ದನ್ನು ಕೇಳಿಸಿಕೊಳ್ಳುತ್ತಿದ್ದೆ ಮತ್ತು ಮನಸ್ಸಿನಲ್ಲಿ ಟೆಲಿಗ್ರಾಫ್ ಕಂಬಗಳು ಹಿಂದೆ ಹಿಂದೆ ಓಡುತ್ತಿರುವುದನ್ನು ನೆನಪಿಸಿಕೊಳ್ಳುತ್ತಾ ಕುಳಿತೆ.

"ನೀವು ಗಮನಿಸಿದಿರಾ, ನಾವು ನಿಶ್ಚಲವಾಗಿ ಕುಳಿತಿದ್ದರೂ ಮರಗಿಡಗಳು ಹಿಂದೆ ಹಿಂದೆ ಓಡುತ್ತಿರುವಂತೆ ಕಾಣುತ್ತಿವೆ, ಅಲ್ಲ" ನಾನು ಕೇಳಿದೆ.

"ಅದು ಯಾವಾಗಲೂ ಹಾಗೆಯೇ" ಅವಳು ಹೇಳಿದಳು "ನೀವು ಯಾವುದಾದರೂ

ಪ್ರಾಣಿಗಳನ್ನು ನೋಡಿದ್ದೀರಾ? ಡೆಹರಾದ ಕಾಡಿನ ಪ್ರಾಣಿಗಳು."

ಕಿಟಕಿಯಿಂದ ಆ ಹುಡುಗಿಯ ಮುಖದೆಡೆಗೆ ತಿರುಗಿ, ಅವಳನ್ನೇ ನೋಡುತ್ತಾ ಕುಳಿತೆ. ಕೆಲವು ಕ್ಷಣ ಇಬ್ಬರ ನಡುವೆ ಮೌನ ನೆಲಸಿತು.

"ನಿಮ್ಮ ಮುಖ ಬಹಳ ಆಸಕ್ತಿಯುತವಾಗಿದೆ" ಪ್ರತಿಕ್ರಿಯಿಸಿದೆ. ನನಗೆ ಸ್ವಲ್ಪ ಧೈರ್ಯ ಬಂದಿತ್ತು. ಆದರೆ ಅದು ನಿರಪಾಯದ ಪ್ರತಿಕ್ರಿಯೆಯಾಗಿತ್ತು. ಏಕೆಂದರೆ ಕೆಲವು ಹುಡುಗಿಯರು ಹೊಗಳಿಕೆಯನ್ನು ಪ್ರತಿರೋಧಿಸುತ್ತಾರೆ.

ಅವಳು ಬಹಳ ಹಿತವಾಗಿ ನಕ್ಕಳು. ಸ್ಪಷ್ಟವಾದ ತುಂಬು ನಗು. "ನನ್ನ ಮುಖ ಸುಂದರವಾಗಿದೆ ಎಂದು ಕೇಳುವುದಕ್ಕೆ ಬಹಳ ಖುಷಿಯಾಗುತ್ತದೆ. ಆದರೆ ನನ್ನನ್ನು ನೋಡಿದ ಎಲ್ಲರೂ ನಿನ್ನ ಮುಖ ಸುಂದರವಾಗಿದೆ ಎಂದು ಹೇಳುವ ಮಾತು ಕೇಳಿ ಕೇಳಿ ಬೇಜಾರಾಗಿದೆ."

"ಓ, ನಾನೂ ಊಹಿಸಿದ್ದೆ. ಆಸಕ್ತಿಯುತವಾದ ಮುಖ ಸುಂದರವಾಗಿರಲೂಬಹುದು ಎಂದು", ಗಟ್ಟಿಯಾಗಿ ಹೇಳಿದೆ. "ನಿಜ, ಆಸಕ್ತಿಯುತವಾದ ಮುಖ ಸುಂದರವಾಗಿರಲೇಬೇಕು."

"ನೀವು ಬಹಳ ಕಿಲಾಡಿ ಗಂಡು" ಆ ಹುಡುಗಿ ಹೇಳಿದಳು "ಆದರೂ, ಏಕೆ ನೀವು ಯಾವಾಗಲೂ ಹೆಚ್ಚು ಗಂಭೀರರಾಗಿರುತ್ತೀರಿ?"

ಅವಳಿಗಾಗಿ ನಾನು ನಗಬೇಕೆನ್ನಿಸಿತು. ಆದರೆ, ಆ ನಗುವಿನ ಆಲೋಚನೆ ನನ್ನನ್ನು ತೊಂದರೆಗೀಡುಮಾಡುವುದಲ್ಲದೆ, ಒಂಟಿಯಾಗಿರಲೂಬಹುದು.

"ನಾವು ನಿಮ್ಮ ಸ್ಟೇಷನ್ ತಲುಪುತ್ತಿದ್ದೇವೆ" ಹೇಳಿದೆ.

"ಹೌದು ಬಹಳ ಕಡಿಮೆ ಪ್ರಯಾಣ. ಟ್ರೈನಿನಲ್ಲಿ ಕುಳಿತು ಎರಡು ಮೂರು ಗಂಟೆಗಳ ಕಾಲ ಪ್ರಯಾಣಿಸುವುದು ನನ್ನಿಂದ ಸಹಿಸಲಾಗದು." ಆದರೆ ಅವಳ ಮಾತಿನ ದನಿಯನ್ನು ಕೇಳುತ್ತಾ ನಾನು ಎಷ್ಟು ಕಾಲ ಬೇಕಾದರೂ ಕುಳಿತಿರಬಲ್ಲೆ. ಅವಳ ಸ್ವರ, ಬೆಟ್ಟಗಳಿಂದ ಜಾರುತ್ತಾ ಹರಿಯುವ ನದಿಯ ಜುಳು ಜುಳು ಮಂಜುಳ ನಾದದ ಹಾಗೆ. ಟ್ರೈನಿನಿಂದ ಅವಳು ಇಳಿದು ಹೋದೊಡನೆ ಬಹುಶಃ ನನ್ನ ಪರಿಚಯ ಮರೆಯಬಹುದು. ಆದರೆ ಅವಳ ನೆನಪು ನನ್ನ ಹೃದಯದಲ್ಲಿ ಇಡೀ ಪ್ರಯಾಣದುದ್ದಕ್ಕೂ ಮತ್ತು ಮುಂದೆಯೂ ಸಹಾ ಶಾಶ್ವತವಾಗಿರುತ್ತದೆ.

ಎಂಜಿನ್ನಿನ ಸಿಳ್ಳು ಕಿರುಚುತ್ತಿರುವಂತೆಯೇ ಬೋಗಿಯ ಚಕ್ರಗಳು ತಮ್ಮ ಶಬ್ದ ಮತ್ತು ಲಯಗಳನ್ನು ಬದಲಾಯಿಸುತ್ತವೆ.

ಆ ಹುಡುಗಿ ಎದ್ದು ನಿಂತು ತನ್ನ ಸಾಮಾನುಗಳನ್ನು ಜೋಡಿಸಿಕೊಳ್ಳುತ್ತಾಳೆ. ಪಕ್ಕನೆ ಒಂದು ಯೋಚನೆ ಬರುತ್ತದೆ. ಅವಳು ತನ್ನ ತಲೆಯ ಕೂದಲನ್ನು ಗಂಟು ಹಾಕಿರುವಳೋ ಅಥವಾ ಜಡೆ ಹಾಕಿರುವಳೋ ಅಥವಾ ಸಡಿಲವಾದ ಕೂದಲುಗಳನ್ನು ಭುಜದ ಮೇಲೆ ಹರಡಿರುವಳೋ ಅಥವಾ ಪುಟ್ಟದಾಗಿ ನೀಟಾಗಿ ಕತ್ತರಿಸಿರುವಳೋ?

ನಿಧಾನವಾಗಿ ರೈಲುಗಾಡಿ ಸ್ಟೇಷನ್ನಿನಲ್ಲಿ ನಿಲ್ಲುತ್ತದೆ. ಹೊರಗೆ ಕೂಲಿಗಳ ಹಾಗೂ ತಿಂಡಿ ಮಾರುವವರ ಕಿರುಚಾಟದ ನಡುವೆ

ಎತ್ತರದ ಸ್ವರದಲ್ಲಿ ಕೂಗಿದ ಹೆಂಗಸಿನ ಧ್ವನಿ ಬೋಗಿಯ ಹತ್ತಿರವೇ ಕೇಳುತ್ತದೆ. ಬಹುಶಃ, ಆ ಧ್ವನಿ ಆ ಹುಡುಗಿಯ ಚಿಕ್ಕಮ್ಮನದಿರಬಹುದು.

"ಗುಡ್ ಬೈ" ಆ ಹುಡುಗಿ ಹೇಳುತ್ತಾಳೆ.

ಅವಳು ನನಗೆ ಬಹಳ ಸಮೀಪದಲ್ಲಿ ನಿಂತಿದ್ದಳು, ತುಂಬಾ ಹತ್ತಿರದಲ್ಲಿದ್ದುದರಿಂದ ಅವಳ ತಲೆಗೂದಲಿನ ಪರಿಮಳ ಘಮ್ಮೆನ್ನುತ್ತಿತ್ತು. ಹಾಗೆಯೇ ನನ್ನ ಕೈಗಳಿಂದ ಒಂದು ಸಾರಿ ಅವಳ ಕೇಶರಾಶಿಯನ್ನು ಸ್ಪರ್ಶಿಸಬೇಕೆಂಬ ಉತ್ಕಟ ಬಯಕೆ ಬರುತ್ತಿದ್ದಂತೆಯೇ ಅವಳು ದೂರ ಸರಿದು ಹೋದಳು. ಅವಳು ನಿಂತ ಸ್ಥಳವೆಲ್ಲಾ ಅವಳು ಬಿಟ್ಟುಹೋದ ಪರಿಮಳದಿಂದ ತುಂಬಿತ್ತು.

"ಬೇಕಾದರೆ ನೀವು ಒಂದು ಹೂದಾನಿಯನ್ನು ಒಡೆದು ಚಿಂದಿಮಾಡಿ, ಆದರೂ ಅಲ್ಲೆಲ್ಲಾ ಗುಲಾಬಿಯ ಪರಿಮಳ ತುಂಬಿರುತ್ತದೆ...."

ಅವಳು ಇಳಿದು ಹೋಗುವಾಗ ಬಾಗಿಲ ಹತ್ತಿರ ಏನೋ ಗೊಂದಲವಾಯಿತು. ಒಬ್ಬ ಗಂಡಸು ಕ್ಷಮೆ ಕೋರುತ್ತಾ ಬೋಗಿಯೊಳಗೆ ಹತ್ತಿ ಬಾಗಿಲು ದಢ್ಣನೆ ಮುಚ್ಚಿದ. ನನ್ನ ಪಾಲಿಗಂತೂ ಇಡೀ ಪ್ರಪಂಚದ ಬಾಗಿಲೇ ಮುಚ್ಚಿದಂತೆನಿಸಿತು. ನಾನು ನನ್ನ ಬರ್ತ್‌ಗೆ ಹಿಂದಿರುಗುತ್ತಿದ್ದಂತೆಯೇ ಗಾರ್ಡ್ ಸೀಟಿ ಊದಿದ. ರೈಲುಗಾಡಿ ಚಲಿಸಿತು. ಮತ್ತೆ ಹೊಸ ಪ್ರಯಾಣಿಕನೊಡನೆ ನನ್ನ ಆಟ ಪ್ರಾರಂಭವಾಗುತ್ತದೆ. ರೈಲು ತನ್ನ ವೇಗವನ್ನು ಹೆಚ್ಚಿಸುತ್ತಿದ್ದಂತೆಯೇ ಅದರ ಚಕ್ರಗಳು ಪದ ಹೇಳಹತ್ತಿದವು. ಬೋಗಿ ಅಲುಗಾಡುತ್ತಾ ನರಳುತ್ತಿತ್ತು. ಕಿಟಕಿಯ ಪಕ್ಕ ಕುಳಿತು ನನ್ನ ಪಾಲಿಗೆ ಕತ್ತಲಾಗಿರುವ ಹಗಲನ್ನು ದಿಟ್ಟಿಸುತ್ತಾ ಕುಳಿತೆ. ಕಿಟಕಿಯಾಚೆ ಅನೇಕ ಘಟನೆಗಳು ಸಂಭವಿಸುತ್ತಿರಬಹುದು. ಅವೆಲ್ಲಾ ಬಹಳ ಆಕರ್ಷಕವಾಗಿರಬಹುದು. ಏನೆಲ್ಲಾ ಸಂಭವಿಸುತ್ತಿರಬಹುದೆಂದು ಕಲ್ಪಿಸಿಕೊಳ್ಳುತ್ತಾ ಕುಳಿತೆ.

ಬೋಗಿಯೊಳಗೆ ಬಂದ ವ್ಯಕ್ತಿ ನಾನು ಕಾಣುತ್ತಿದ್ದ ಹಗಲುಗನಸನ್ನು ಮಧ್ಯದಲ್ಲಿಯೇ ತುಂಡರಿಸಿದ.

"ಕ್ಷಮಿಸಿ, ನಿಮಗೆ ಬಹಳ ನಿರಾಶೆಯಾಗಿರಬಹುದು. ಈಗ ಇಳಿದು ಹೋದಳಲ್ಲ ಆ ಹುಡುಗಿಯಷ್ಟು ಆಕರ್ಷಕವಾದ ಸಹಪ್ರಯಾಣಿಕನಲ್ಲ ನಾನು", ಅವನು ಹೇಳಿದ.

"ಅವಳು ಬಹಳ ಸುಂದರವಾದ ಹುಡುಗಿ" ನಾನು ಹೇಳಿದೆ "ಅವಳ ತಲೆಗೂದಲು ಉದ್ದವಾಗಿತ್ತೋ ಇಲ್ಲ ಚಿಕ್ಕದಾಗಿತ್ತೋ, ದಯವಿಟ್ಟು ಸ್ವಲ್ಪ ಹೇಳುತ್ತೀರಾ ?"

"ನನಗೆ ನೆನಪಿಲ್ಲ" ಗೊಂದಲದಿಂದ ಹೇಳಿದ. "ಅವಳ ಕೇಶವನ್ನು ಗಮನಿಸಲಿಲ್ಲ, ಆದರೆ ಅವಳ ಕಣ್ಣುಗಳನ್ನು ಗಮನಿಸಿದೆ. ಬಹಳ ಸುಂದರವಾದ ಕಣ್ಣುಗಳು, ಆದರೆ ಅವುಗಳಿಂದ ಅವಳಿಗೆ ಉಪಯೋಗವಿಲ್ಲ, ಏಕೆಂದರೆ ಅವಳು ಕುರುಡಿ. ನೀವು ಗಮನಿಸಲಿಲ್ಲವೇ ?"

ಹದಿನೈದು ಜನ ಅಸಾಮಾನ್ಯ ಕೊಲೆಪಾತಕರು

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೩ನೇ ಕ್ರಾಸ್, ಚಾಮುಂಡಿಪುರಂ
ಮೈಸೂರು-೫೭೦೦೦೪

ವೈದ್ಯರ ಕ್ಲಬ್ ಮೀಟಿಂಗ್ ಎಂದರೆ ಅದರಲ್ಲೇನೋ ರಹಸ್ಯ ಇದೆ ಎಂದೇ ಅರ್ಥ. ತಮಗೆ ತಿಳಿದಿರುವುದೆಷ್ಟು ಎಂಬುದರ ಬಗ್ಗೆ ಜನರಿಗೆ ಗೊತ್ತಾಗಬಾರದೆಂದೇ ಅವರು ಗುಟ್ಟಾಗಿ ಸೇರುತ್ತಾರೆ ಎಂದು ಕೆಲವರ ಅಭಿಪ್ರಾಯ. ನ್ಯೂಯಾರ್ಕ್‌ನಲ್ಲಿ ಹೆಸರಾಂತ ತಜ್ಞರು ಸ್ಥಾಪಿಸಿಕೊಂಡಿದ್ದ ಎಕ್ಸ್ ಕ್ಲಬ್ ಈ ತಲೆಮಾರಿನಲ್ಲೇ ಅತ್ಯಂತ ರಹಸ್ಯ ವೈದ್ಯರ ಕ್ಲಬ್. ಮೂರು ತಿಂಗಳಿಗೊಮ್ಮೆ ಕಳೆದ ಇಪ್ಪತ್ತು ವರ್ಷಗಳಿಂದ ಇದರ ಸದಸ್ಯರು ವಾಲ್ಟನ್ ಹೋಟೆಲ್‌ನಲ್ಲಿ ಸಂಜೆ ಸೇರುತ್ತಿದ್ದರು. ಬಾಗಿಲುಗಳನ್ನು ಮುಚ್ಚಿ ನಡೆಸುತ್ತಿದ್ದ ಸಭೆ ಬೆಳಗಿನ ಜಾವದವರೆಗೂ ನಡೆಯುತ್ತಿತ್ತು.

ಕ್ಲಬ್‌ನ ಹೊಸ ಸದಸ್ಯ ಡಾಕ್ಟರ್ ಸ್ಯಾಮ್ಯುಯಲ್ ವಾರ್ನರ್ ವಯಸ್ಸಿನಲ್ಲಿ ಚಿಕ್ಕವರಾದರೂ ವೃತ್ತಿಯಲ್ಲಿ ಹೆಸರುಗಳಿಸಿದ್ದರು. ಅವರನ್ನು ಎಕ್ಸ್-ಕ್ಲಬ್‌ಗೆ ಸದಸ್ಯರಾಗಿ ತೆಗೆದುಕೊಂಡಿದ್ದು ಅವರ ಸಾಮರ್ಥ್ಯವನ್ನು ಗುರುತಿಸಿಯೇ. ಅದಕ್ಕಿಂತ ಹೆಚ್ಚಿನ ಮರ್ಯಾದೆ ಅವರಿಗೂ ಬೇಕಾಗಿರಲಿಲ್ಲ. ಮಿಕ್ಕ ಹದಿನಾಲ್ಕು ಜನ ವಯಸ್ಸಾದ ವೈದ್ಯರು ಅವರವರ ಕ್ಷೇತ್ರದಲ್ಲಿ ಘಟಾನುಘಟಿಗಳು. ಕ್ಲಬ್‌ನ ಅರ್ಧದಷ್ಟು ಸದಸ್ಯರು ಡಾ|| ವಾರ್ನರ್‌ರ ಆರಾಧ್ಯ ವೈದ್ಯರು!

ಆ ಸಂಜೆ ಹವಾಗುಣ ಹಿತಕರವಾಗಿಲ್ಲ ದಿದ್ದರೂ ಎಲ್ಲಾ ವೈದ್ಯರೂ ಮೀಟಿಂಗ್‌ಗೆ ಬಂದಿದ್ದರು. ಡಾ|| ವಾರ್ನರ್‌ರ ಅನುಭವ ಗಳನ್ನು ತಿಳಿದುಕೊಳ್ಳಲು ಎಲ್ಲರಿಗೂ ತವಕ

ಹೋಟೆಲ್‌ನ ವಿಶಾಲವಾದ ಕೊಠಡಿಗೆ ಬಂದೊಡನೆ ಎಲ್ಲರೂ ಒಬ್ಬರಿಗೊಬ್ಬರು ನಮಸ್ಕಾರ ಹೇಳಿ ಆರಾಮವಾಗಿ ಕುಳಿತರು. ಹೊಸ ಸದಸ್ಯ ಡಾ|| ವಾರ್ನರ್ ಮೂಲೆ ಯಲ್ಲಿ ಬಿಡಿಯಾಗಿದ್ದ ಕುರ್ಚಿ ಆರಿಸಿ ಕೊಂಡರು. ಅವರ ಮುಖದಲ್ಲಿ ಗಲಿಬಿಲಿ ಕಾಣಿಸುತಿತ್ತು. ಮೀಟಿಂಗ್‌ಗೆ ಬಂದಿದ್ದರೂ ಯಾವುದೋ ಕೇಸ್‌ನಲ್ಲಿ ಭಾಗವಹಿಸಲು ಬಂದವರಂತೆ ಅವರು ಕಾಣುತ್ತಿದ್ದರು.

ಒಂಬತ್ತು ಗಂಟೆ ಹೊಡೆದ ಕೂಡಲೆ ಅತ್ಯಂತ ಹಿರಿಯ ವೈದ್ಯ, ರೋಗ ತಪಾಸಣೆ ತಜ್ಞ ಡಾಕ್ಟರ್ ವಿಲಿಯಂ ಟಕ್ ಎದ್ದು ನಿಂತು, ಡಾ|| ವಾರ್ನರ್‌ರವರನ್ನು ಸಭೆಗೆ ಪರಿಚಯಿಸಿದರು. ನಂತರ ಡಾಕ್ಟರ್...

ಇಂಗ್ಲಿಷ್ ಮೂಲ: ಬೆನ್ ಹೆಚ್‌ನ ಮಿರಾಕಲ್ ಆಫ್ ದಿ ಫಿಫ್‌ಟೀನ್ ಮರ್ಡರರ್ಸ್ ಕಥೆ.

ರ್ನರ್‌ನನ್ನು ಕುರಿತು ಹೇಳಿದರು—
ನಿಮಗೆ ಹಾರ್ದಿಕ ಸ್ವಾಗತ, ಕ್ಲಬ್‌ನ
ಉದ್ದೇಶ ನಿಮಗೆ ಗೊತ್ತಿರಬೇಕು—ಸದ
ಸ್ಯರು ಕಳೆದ ಮೀಟಿಂಗ್‌ನ ಈಚೆ ಅಂದರೆ
ಮೂರು ತಿಂಗಳಲ್ಲಿ ಮಾಡಿರಬಹುದಾದ
ಕೊಲೆ ಬಗ್ಗೆ ತಪ್ಪೊಪ್ಪಿಕೊಳ್ಳುವುದು.
ನಾನು ಹೇಳುತ್ತಿರುವುದು ವೈದ್ಯಕೀಯ
ಕೊಲೆ. ಹೆಡ್ಡತನದಿಂದ ಮಾಡಿರುವ ಕೊಲೆ
ಅಂತ ಭಾವೋದ್ರೇಕದಿಂದ ಮಾಡಿದ ಕೊಲೆ
ಮನಸ್ಸಿಗೆ ಒಂದಷ್ಟು ನೆಮ್ಮದಿ ತರುತ್ತದೆ.
ಕಾರಣ ಏನೇ ಇರಲಿ, ಮಾಡಿದ ತಪ್ಪನ್ನು
ನೊಬ್ಬರ ಮುಂದೆ ಹೇಳಿದಾಗ ಮನಸ್ಸಿಗೆ
ಒಂದು ಬಗೆಯ ಶಾಂತಿ ದೊರಕುತ್ತದೆ ಎಂದು
ನಮ್ಮ ಅಭಿಪ್ರಾಯ. ರೋಗವನ್ನು ಪತ್ತೆ
ಹಚ್ಚುವುದರಲ್ಲಿ ಮಾಡಿದ ತಪ್ಪಿನಿಂದ,
ಅಥವಾ ತಪ್ಪು ಔಷಧೋಪಚಾರದಿಂದ
ಅಥವಾ ಸರಿಯಲ್ಲದ ಶಸ್ತ್ರಚಿಕಿತ್ಸೆಯಿಂದ
ರೋಗಿ ಸತ್ತಿರಬಹುದು; ಚಿಕಿತ್ಸೆಗೆ ಒಳ
ಗಾಗದಿದ್ದರೆ ರೋಗಿ ಬದುಕುಳಿಯಬಹು
ದಾಗಿತ್ತು. ಅನ್ನುವ ಬಗ್ಗೆ ನಮಗೆ ವಿವರ
ಬೇಕು."

ಕ್ಲಬ್‌ನ ಹೊಸ ಸದಸ್ಯ ಡಾಕ್ಟರ್
ವಾರ್ನರ್ ಸ್ವಲ್ಪ ತಾಳ್ಮೆ ಕಳೆದುಕೊಂಡು
"ಇದು ನನ್ನ ಮೊದಲನೆಯ ಮೀಟಿಂಗ್.
ನಿಮಗೆ ಅತಿ ಮುಖ್ಯ ವಿಷಯ ಹೇಳುವು
ದಿದೆ" ಎಂದು ಎತ್ತರದ ಧ್ವನಿಯಲ್ಲಿ
ಹೇಳಿದರು.

"ಕೊಲೆಯೇ?" ಟೀಕ್ ಕೇಳಿದರು.

"ಹೌದು."

"ಸರಿ, ನೀವು ಹೇಳುವುದನ್ನು ಕೇಳಲು
ನಾವು ಅತ್ಯಾಸಕ್ತರಾಗಿದ್ದೇವೆ. ಆದರೆ
ಇಬ್ಬರು ಅವರು ಮಾಡಿರುವ 'ಕೊಲೆ'
ಬಗ್ಗೆ ಮೊದಲು ಹೇಳಬೇಕಾಗಿದೆ."

ಸ್ಟ್ಯಾವರ್ಟ್‌ನ ಮುಖದಲ್ಲಿ ತುಂಬ ದುಗುಡ, ಬೆವರು. ಮನೋರೋಗ ಚಿಕಿತ್ಸಕ ಡಾಕ್ಟರ್ ಫಿಲಿಪ್ ಕರ್ಟೆಫ್, ಸ್ಟ್ಯಾವರ್ಟ್‌ನ ಭುಜದ ಮೇಲೆ ಕೈಯಿಟ್ಟು "ಗಾಬರಿಯಾಗಬೇಡಿ, ನಿಮಗಿಂತಲೂ ಕೆಟ್ಟದ್ದನ್ನು ನಾವು ಮಾಡಿದ್ದೇವೆ" ಎಂದು ಸಮಾಧಾನದ ಮಾತುಗಳನ್ನು ಆಡುತ್ತಿದ್ದುದನ್ನು ಕೇಳಿ. "ಕರ್ಟೆಫ್, ನೀವು ವಾರ್ನರ್‌ರ ಭುಜದ ಮೇಲೆ ಕೈಹಾಕಿ ಅಥವಾ ಕೈಹಿಡಿದುಕೊಳ್ಳಿ. ಆದರೆ ದಯವಿಟ್ಟು ಮಾತನಾಡಬೇಡಿ" ಎಂದು ಆದೇಶಿಸಿ, "ಅಪರಾಧಿ ಮನೋಭಾವವಿರುವ ಡಾಕ್ಟರ್‌ಗಳಿಗೆ ಇದು ಸ್ಯಾನಿಟೋರಿಯಂ ಅಲ್ಲ. ನಮ್ಮದು ವೈಜ್ಞಾನಿಕ ಉದ್ದೇಶ. ಮೊದಲನೆ ಕೇಸನ್ನು ಡಾ॥ ವೆಂಡೆಲ್ ಡೇವಿಸ್ ಮಂಡಿಸುತ್ತಾರೆ" ಎಂದರು ಡಾ॥ ಟೀಕ್.

ಜಠರ ರೋಗಗಳ ತಜ್ಞ ಡಾ॥ ಡೇವಿಸ್ ಮಾತನಾಡಲು ನಿಂತಾಗ ಕೋಣೆಯಲ್ಲಿ ಸೂಜಿ ಬಿದ್ದರೆ ಕೇಳುವಷ್ಟು ನಿಶ್ಶಬ್ದ.

"ಸೆನೇಟರ್ ಬೆಲ್ ತನ್ನ ಚುನಾವಣಾ ಕ್ಷೇತ್ರದಲ್ಲಿನ ಮಕ್ಕಳಿಗೆ ಒಂದು ಪಿಕ್‌ನಿಕ್ ಏರ್ಪಡಿಸಿದ್ದರು. ಅಲ್ಲಿ ಹೋರೋವಿಟ್ಸ್‌ನ ಮಕ್ಕಳು ಹೋಗಿದ್ದರು. ಅಲ್ಲಿ ತಿಂದ ಆಹಾರದಲ್ಲಿ ಅಕಸ್ಮಾತ್ ವಿಷ ಸೇರಿದ್ದು ತಿಂದವರಿಗೆಲ್ಲಾ ಅಸೌಖ್ಯ ಉಂಟಾಯಿತು. ಅತಿಥೇಯ ಸೆನೇಟರ್ ಬೆಲ್‌ಗೆ ಇದಕ್ಕೆ ತಾನೇ ಹೊಣೆ ಎಂದು ಮಕ್ಕಳ ಚಿಕಿತ್ಸೆಗೆ ನನ್ನನ್ನು ಕರೆದರು. ಹೋರೋವಿಟ್ಸ್‌ನ ಒಂಬತ್ತು ಮತ್ತು ಹನ್ನೊಂದು ವರ್ಷದ ಇಬ್ಬರು ಮಕ್ಕಳು ವಾಂತಿ ಮಾಡಿಕೊಂಡಿದ್ದರು. ಅವರು ಏನೇನು ತಿಂದಿದ್ದರು

ಎಲ್ಲಾ ಕೇಳಿ ತಿಳಿದುಕೊಂಡೆ. ಇಬ್ಬರಿಗೂ ಹರಳೆಣ್ಣೆ ಒಂದು ಡೋಸ್ ಕೊಟ್ಟೆ. ಏಳು ವರ್ಷದ ಮೂರನೇ ಹುಡುಗನಿಗೆ ಅಷ್ಟೇನೂ ತೊಂದರೆಯಾಗಿರಲಿಲ್ಲ, ಆದರೆ ಬಿಳಚಿಕೊಂಡಿದ್ದ. ಅವನಿಗೆ ಸ್ವಲ್ಪ ಜ್ವರವಿತ್ತು. ವಾಕರಿಕೆ ಬರುತ್ತಿದ್ದರೂ ಅವನು ವಾಂತಿ ಮಾಡಿರಲಿಲ್ಲ. ಆಹಾರದಲ್ಲಿನ ವಿಷ ಸ್ವಲ್ಪ ಸೇರಿರಬೇಕೆಂದು ತಿಳಿದು ಅವನಿಗೂ ಒಂದು ಹರಳೆಣ್ಣೆ ಡೋಸ್ ಕೊಟ್ಟೆ.

"ಮಧ್ಯ ರಾತ್ರಿ ಹೋರೋವಿಟ್ಸ್ ನನಗೆ ಫೋನು ಮಾಡಿದ. 'ದೊಡ್ಡ ಇಬ್ಬರು ಹುಡುಗರು' ಹುಷಾರಾಗುತ್ತಿದ್ದರೂ, ಕಿರಿ ಹುಡುಗನ ಸ್ಥಿತಿ ಬಿಗಡಾಯಿಸಿದೆ" ಎಂದ.

"'ಯೋಚನೆ ಮಾಡಬೇಡಿ. ವಿಷ ನಿಧಾನವಾಗಿ ಸೇರಿರಬೇಕು. ಭೇದಿ ಆದರೆ ಸರಿ ಹೋಗುತ್ತದೆ' ಎಂದು ನಾನು ಧೈರ್ಯದ ಮಾತುಗಳನ್ನು ಹೇಳಿದೆ."

ವಿಷಪ್ರಾಶನವಾದ ಮಕ್ಕಳು ಕೇವಲ ಹರಳೆಣ್ಣೆಯಿಂದ ಹುಷಾರಾಗುತ್ತಿದ್ದಾರೆಂದು ತಿಳಿದು ನನಗೇ ಸಂತೋಷವಾಗಿತ್ತು. ಮಾರನೇ ದಿನ ಇಬ್ಬರು ದೊಡ್ಡ ಮಕ್ಕಳು ಪೂರ್ಣವಾಗಿ ಗುಣಮುಖರಾದರು. ಆದರೆ ಏಳು ವರ್ಷದ ಹುಡುಗನ ಸ್ಥಿತಿ ಕೆಟ್ಟಿತ್ತು. ಉಗಿಂಸಿ ಅವನಿಗೆ ಜ್ವರ. ದೇಹದ ನೀರು ಹೋಗಿ ಹುಡುಗ ನಿರ್ಜಲನಾಗಿದ್ದ, ಕಣ್ಣುಗಳು ಹೂತುಹೋಗಿದ್ದವು. ಮೂಗಿನ ಹೊಳ್ಳೆಗಳು ಅರಳಿದ್ದವು, ತುಟಿಗಳು ನೀಲಿಗಟ್ಟಿದ್ದವು; ಚರ್ಮ ತಣ್ಣಗಾಗಿ ಸುಕ್ಕುಗಟ್ಟಿತ್ತು." ಡೇವಿಸ್ ಮಾತನಾಡುವುದನ್ನು ನಿಲ್ಲಿಸಿದ.

ಶ್ವಾಸಕೋಶ ತಜ್ಞ ವಿಲ್ಸನ್ ಮಾರಿಸ್ "ಸ್ವಲ್ಪ ಹೊತ್ತಿನಲ್ಲಿ ಹುಡುಗ ಸತ್ತು ಹೋದ, ಅಲ್ಲವೇ? ಎಂದು ಕೇಳಿದರು.

ಅದಕ್ಕೆ ಡೇವಿಸ್ ತಲೆದೂಗಿದರು.

"ಡಾ|| ಡೇವಿಸ್, ಹುಡುಗನಿಗೆ ಬಹುಶಃ ನೀವು ನೋಡಿದಾಗ ಅಪೆಂಡಿಸೈಟಿಸ್ ತೀವ್ರವಾಗಿತ್ತು. ಹರಳೆಣ್ಣೆ ಭೇದಿ ಅಪೆಂಡಿಕ್ಸ್ ಅನ್ನು ಹರಿದು ಹೋಗುವಂತೆ ಮಾಡಿತು."

"ಹೌದು, ಆಗಿದ್ದು ಹಾಗೆಯೇ" ಎಂದರು ಡೇವಿಸ್.

"ಹರಳೆಣ್ಣೆಯಿಂದ ಕೊಲೆ" ಎಂದು ನಕ್ಕರು ಟಿಕ್.

* * *

ಡಾಕ್ಟರ್ ಕೆನ್ನೆತ್ ವುಡ್ ಮಾತನಾಡಲು ಪ್ರಾರಂಭಿಸಿದರು. ಅವರೊಬ್ಬ ಹೆಸರಾಂತ ಸ್ಕಾಟಿಷ್ ಸರ್ಜನ್. ಹೊಸದಾಗಿ ತಮ್ಮ ಕ್ಲಬ್ ಸೇರಿದ ಸರ್ಜನ್ ಕಡೆ ನೋಡುತ್ತಾ, "ಸ್ಯಾವರ್, ನಿಮಗೆ ಗೊತ್ತು. ಗಾಲ್‌ಬ್ಲಾಡರ್ ತೀವ್ರ ಸ್ಥಿತಿಗೆ ಬಂದಾಗ ಏನಾಗುತ್ತದೆ ಎಂದು. ಆ ರಾತ್ರಿ ರೋಗಿಯನ್ನು ಕರೆದುಕೊಂಡು ಬಂದಾಗ, ಆಕೆ ಹೊಟ್ಟೆಯ ಮೇಲ್ಭಾಗ ತುಂಬ ನೋವು ಎನ್ನುತ್ತಿದ್ದಳು. ನೋವು ಬೆನ್ನುಹುರಿಗೆ, ಬಲ ಭುಜಕ್ಕೆ ಹರಡಿತ್ತು. ಗಾಲ್‌ಬ್ಲಾಡರ್‌ನ ತೊಂದರೆಯ ಲಕ್ಷಣಗಳು ಎಂದು ನಾನು ಗುರ್ತಿಸಿದೆ. ನೋವು ಸುಧಾರಿಸಲು ಔಷಧಿಕೊಟ್ಟೆ. ಬೇಗ್ಗೆ ನೋವು ಕಡಿಮೆಯಾಗುವ ಬದಲು ಹೆಚ್ಚಾಗಿತ್ತು. ಗಾಲ್‌ಬ್ಲಾಡರ್‌ನಲ್ಲಿ ರಂಧ್ರವಾಗಿದೆ ಎಂದು ಊಹಿಸಿ, ಆಪರೇಶನ್ ಮಾಡಿದೆ. ಆಪರೇಶನ್ ಆದ ಒಂದು ಗಂಟೆಯಲ್ಲಿ ಆಕೆ ಸತ್ತುಹೋದಳು.

"ಮರಣೋತ್ತರ ಪರೀಕ್ಷೆ ತಿಳಿಸಿದ್ದೇನು?" ಡಾ|| ಸ್ವೀನಿ ಕೇಳಿದರು. ಡಾ|| ಕೆನ್ನೆತ್ ವುಡ್ "ಏನಾಗಿದೆ ಎಂದು ನೀವು ಹೇಳಬೇಕು?" ಎಂದರು.

ಒಂದು ಘಳಿಗೆ ಬಿಟ್ಟು, ಡಾ|| ಕರ್ಟಿಫ್ ಕೇಳಿದರು—

"ನೀವು ಆಕೆಯ ರೋಗದ ಇತಿಹಾಸ ವಿಚಾರಿಸಿದಿರಾ?"

"ಇಲ್ಲ, ಅದೊಂದು ತುರ್ತಾಗಿ ಕೈಗೊಳ್ಳಬೇಕಾಗಿದ್ದ ಪರಿಸ್ಥಿತಿ."

"ಡಾ|| ವುಡ್ ಒಬ್ಬ ಹೆಂಗಸನ್ನು, ನೋವಿನ ಮೂಲ ಯಾವುದೆಂದು ತಿಳಿದುಕೊಳ್ಳದೆ, ಕೊಲೆ ಮಾಡಿದರು. ಗಾಲ್ ಬ್ಲಾಡರ್ ತೊಂದರೆಗೆ ಮಾತ್ರ ಇಂತಹ ನೋವು ಮೀಸಲಲ್ಲ. ಇನ್ನು ಯಾವ ಯಾವ ಸಂದರ್ಭದಲ್ಲಿ ಇಂತಹ ನೋವು ಕಾಣಿಸಿಕೊಳ್ಳಬಹುದು?" ಎಂದು ಪ್ರಶ್ನಿಸಿದರು ಟಿಕ್.

"ಹೃದಯದ ತೊಂದರೆಯಿಂದ" ಡಾ|| ಮಾರಿಸ್ ಉತ್ತರಿಸಿದರು.

"ಮರಣೋತ್ತರ ಪರೀಕ್ಷೆಯಿಂದ ಬಲಭಾಗದ ಕಾರೊನರಿ ಆರ್ಟರಿಗೆ ಸೋಂಕು ತಗುಲಿತ್ತು ಎಂದು ಅನಂತರ ಗೊತ್ತಾಯಿತು", ಎಂದರು ಡಾ|| ವುಡ್.

"ದ್ವಿತೀಯ ತರಗತಿಯಲ್ಲಿ ಓದುವ ಮೆಡಿಕಲ್ ವಿದ್ಯಾರ್ಥಿ ಮಾಡುವಂತಹ ಕೆಲಸ" ಎಂದು ತಮ್ಮ ಅಭಿಪ್ರಾಯ ಸೂಚಿಸಿದರು. ಡಾ|| ಟಿಕ್, "ಸ್ನೇಹಿತರೇ, ನಾವು ಈ ಅಪರಾಧಗಳಿಂದ ವಿಜ್ಞಾನ ಮತ್ತು ಮೌಢ್ಯತೆ ಜೊತೆಯಾಗಿ ಒಂದರೊಡನೆ ಒಂದಿರುತ್ತದೆ ಎನ್ನುವುದನ್ನು ಬಿಟ್ಟು ಇನ್ನೇನನ್ನು ಕಲಿತಿಲ್ಲ, ಹಾಗಿದ್ದರೂ ನಮ್ಮ ಬಳಿ ಒಬ್ಬ ಯುವಕ ಅಸದೃಶ ಸರ್ಜನ್ ಇದ್ದಾರೆ. ಕತ್ತಿ ಉಪಯೋಗಿಸುವುದರಲ್ಲಿ ತುಂಬ ಚತುರತೆ ತೋರಿಸುವ ಅವರಿಂದ ಎಂತಹ 'ಕೊಲೆ'ಯಾಗಿದೆ ಅವರ ಬಾಯಿಯಿಂದಲೇ ಕೇಳೋಣ."

ನಿಜವಾಗಿ ಅಪರಾಧ ಮಾಡಿರುವ ವ್ಯಕ್ತಿಯಂತೆ ಡಾ|| ಸ್ಯಾಮ್ಯುಯಲ್ ವಾರ್ನರ್ ಕುರ್ಚಿಯ ತುದಿಯಲ್ಲಿ ಕುಳಿತು ಚಡಪಡಿಸುತ್ತಿದ್ದರು. ಒದ್ದೆ ಕರವಸ್ತ್ರದಿಂದ ಕತ್ತು ಮತ್ತು ಮುಖವನ್ನು ಒರೆಸಿಕೊಂಡು, ಅವರು ಮಾತನಾಡಲು ಪ್ರಾರಂಭಿಸಿದರು—

"ನನ್ನ ರೋಗಿ ಹದಿನೇಳು ವರ್ಷದ ಹುಡುಗ. ಅಸಾಧಾರಣ ಮೇಧಾವಿ, ಚುರುಕು ಬುದ್ಧಿ ಉಳ್ಳವನು. ಅವನು ಕವಿ ಕೂಡ. ಈಗ ಎರಡು ವಾರಗಳಿಂದ ಅವನಿಗೆ ಹುಷಾರಿರಲಿಲ್ಲ. ನನ್ನನ್ನು ಕರೆದರು. ಅವನನ್ನು ಪರೀಕ್ಷಿಸಿದ ನಾನು ಕೂಡಲೇ ಅವನನ್ನು ಆಸ್ಪತ್ರೆಗೆ ವರ್ಗಾಯಿಸಿದೆ. ಅವನಿಗೆ ಉದರದ ಎಡಭಾಗದಲ್ಲಿ ತೀವ್ರವಾದ ನೋವು ಬರುತ್ತಿತ್ತು. ಆದರೆ ಇದ್ದಕ್ಕಿದ್ದ ಹಾಗೆ ನೋವು ನಿಂತು ಹೋಯಿತು. ಹುಡುಗ ಸ್ವಾಭಾವಿಕವಾಗಿ ತನ್ನ ರೋಗ ಗುಣವಾಯಿತೆಂದು ತಿಳಿದುಕೊಂಡ. ಆದರೆ ಎರಡು ದಿನಗಳ ನಂತರ ಪುನಃ ನೋವು ಕಾಣಿಸಿಕೊಂಡಿತು. ಜೊತೆಗೆ ಜ್ವರ, ಭೇದಿ. ಕೀವು ಮತ್ತು ರಕ್ತ ಹೋಗುತ್ತಿದ್ದರೂ ಅಮೀಬಾ ಆಗಲೀ ರೋಗಕಾರಕ ಬ್ಯಾಕ್ಟೀರಿಯ ಆಗಲೀ ಕಾಣಿಸಲಿಲ್ಲ. ರಿಪೋರ್ಟ್ ನೋಡಿದ ಅನಂತರ ಅಲ್ಸರೇಟಿವ್ ರೋಲಿಟಿಸ್ (ಹುಣ್ಣು) ಎಂದುಕೊಂಡೆ. ಅಪೆಂಡಿಸೈಟಿಸ್‌ನ ಯಾವ ಚರ್ಯೆಯೂ ಕಾಣುತ್ತಿರಲಿಲ್ಲ. ಸಲ್ಫಾಜೈನ್ ಮತ್ತು ಆಹಾರ ತೆಗೆದುಕೊಳ್ಳಲು ಹೇಳಿದೆ. ರೋಗಿಯ ಸ್ಥಿತಿ ಉಲ್ಬಣಿಸಿತು. ಅವನಿಗೆ ಉದರದ ಮೃದುತ್ವ ಜಾಸ್ತಿಯಾಯಿತು. ಎರಡು ವಾರಗಳ ನಂತರ ರೋಗಿ ಸತ್ತು ಹೋದ.

ತಕ್ಷಣವೇ ವುಡ್ ಕೇಳಿದರು—"ಮರಣೋತ್ತರ ಪರೀಕ್ಷೆಯಲ್ಲಿ ನೀವು ಮಾಡಿದ್ದು ತಪ್ಪಾಯಿತೆಂದು ಗೊತ್ತಾಯಿತಾ? ಏನೇ ಇರಲಿ ಇದೊಂದು ಪರಿಪೂರ್ಣ ಅಪರಾಧ"-

"ಇಲ್ಲ, ಹುಡುಗನ ತಾಯಿ ತಂದೆಗೆ ನನ್ನಲ್ಲಿ ಪೂರ್ಣ ನಂಬಿಕೆ. ಹುಡುಗನಿಗೂ ಕೂಡ. ಹುಡುಗನ ಪ್ರಾಣ ಉಳಿಸುತ್ತೇನೆಂದು ನಾನೂ ನಂಬಿದ್ದೆ."

"ನಿಮ್ಮ ಪರಿಶೋಧನೆ (ಡಯೋಗ್ನಾಸಿಸ್) ತಪ್ಪೆಂದು ಹೇಗೆ ಗೊತ್ತಾಯಿತು?"

ಸ್ವಲ್ಪ ಕೋಪಗೊಂಡೇ ವಾರ್ನರ್ ಹೇಳಿದರು—"ವಿಷಯ ಸರಳ, ರೋಗಿ ಸತ್ತುಹೋದ. ನಾನು ಅವನ ರೋಗವನ್ನು ಪತ್ತೆಮಾಡುವುದರಲ್ಲಿ ಎಡವಿದ್ದೆ."

ಡಾ|| ಸ್ವೀನಿ ಹೇಳಿದರು—"ನಮ್ಮ ಮೇಧಾವಿ ಸರ್ಜನ್ ಒಬ್ಬ ಮೇಧಾವಿ ಕವಿಯನ್ನು ಪೂರೈಸಿಬಿಟ್ಟರು."

"ನಿಮ್ಮ ರೋಗಿ ಸತ್ತು ಎಷ್ಟು ದಿವಸಗಳಾಯಿತು?" ಕೇಳಿದರು ಡಾ|| ರಾಸನ್.

"ಕಳೆದ ಬುಧವಾರ. ಏಕೆ?"

"ರೋಗಿಯ ತಾಯಿ ತಂದೆಯರಿಗೆ ನಿಮ್ಮ ಮೇಲೆ ಪೂರ್ಣ ವಿಶ್ವಾಸವಿತ್ತೆಂದು ಹೇಳಿದಿರಿ. ಹಾಗಿದ್ದ ಮೇಲೆ ನಿಮಗೇಕೆ ಅಪರಾಧದ ಮನೋಭಾವ, ಚಿಂತೆ? ಪೋಲೀಸ್ ಕೇಸ್ ಏನಾದರೂ ಆಗಿದೆಯೇ?"

"ಇಲ್ಲ, ಆದರೆ ನಾನು ಮಾಡಿದ್ದು ಪರ್ಫೆಕ್ಟ್ ಕ್ರೈಮ್. ಆದರೆ ನೀವ್ಯಾರೂ ನನ್ನ ರೋಗ ಪರಿಶೋಧನೆ ತಪ್ಪು ಎಂದು ಹೇಳುವ ಹಾಗಿಲ್ಲ."

ಆತ ಹೀಗೆ ಹೇಳಿದ್ದು ಅನೇಕ ಸದಸ್ಯರಿಗೆ ಕೋಪ ತರಿಸಿತು.

ವಾರ್ನರ್‌ನನ್ನು ತನ್ನ ಕಣ್ಣುಗಳಲ್ಲೇ ತಿವಿಯುತ್ತಾ "ಇದರಲ್ಲಿ ಸಿಕ್ಕಿಹಾಕಿಕೊಳ್ಳುವುದಕ್ಕೆ ಒಂದು ವಿಷಯ ಅಡಗಿದೆ" ಎಂದರು ಡಾ|| ವುಡ್.

"ಬಾಕಿಯಾದರಂತೆ ಇದೇನೂ ಸರಳ ಕೇಸ್ ಅಲ್ಲ. ಡಾ|| ವಾರ್ನರ್ ರೋಗಿಯಲ್ಲಿ ಕಂಡ ಚಿಹ್ನೆಗಳು ಅನೇಕ ರೋಗಗಳಲ್ಲಿ ಕಂಡುಬರುವಂತಹವು. ಆತನ ಡಯೋಗ್ನೋಸಿಸ್ ತುಂಬ ಬಾಲಿಶ, ಕೆಳಮಟ್ಟದ್ದು", ಎಂದರು ಡಾಕ್ಟರ್ ಸ್ವೀನಿ.

ಡಾ|| ವಾರ್ನರ್‌ನ ಮುಖ ಕೆಂಪಾಯಿತು. ಆತ ಸ್ವಲ್ಪ ಗಡಸಾಗಿಯೇ "ನೀವು ಹೇಳುವುದಕ್ಕೆ ವೈಜ್ಞಾನಿಕ ಹಿನ್ನೆಲೆ?" ಪ್ರಶ್ನಿಸಿದರು.

"ಹುಡುಗನ ಉದರ, ಕಡೆಯಲ್ಲಿ ಬಹಳ ಮೃದುವಾಗಿತ್ತೆಂದು ಹೇಳಿದಿರಿ. ಹಾಗೆಂದರೆ ಪೆರಿಟೋನೈಟಿಸ್ ಗಾಯವಲ್ಲದೆ, ರಂಧ್ರಗಳಾಗಿರಬಹುದು."

ಡಾ|| ವಾರ್ನರ್ ಮುಖವನ್ನು ಕರವಸ್ತ್ರದಿಂದ ಒರೆಸಿಕೊಳ್ಳುತ್ತಾ ಮೆಲ್ಲಗೆ ಹೇಳಿದ-"ರಂಧ್ರಗಳಾಗಿರಬಹುದೆಂಬ ಯೋಚನೆ ನನಗೆ ಬಂದೇ ಇರಲಿಲ್ಲ."

"ರಂಧ್ರಗಳಾಗುವುದಕ್ಕೆ ಕಾರಣಗಳಿರಬೇಕು ಅಲ್ಲವೇ?" ಕೇಳಿದರು ವಯಸ್ಸಾದ ವೈದ್ಯ ಟರ್.

"ಹುಡುಗನಿಗೆ ಹದಿನೇಳು ವರ್ಷ. ಅವನೇನೂ ಸೂಜಿಗಳನ್ನು ನುಂಗಿರುವುದಿಲ್ಲ", ಎಂದರು ಕರ್ಟಿಫ್.

"ಹೌದು. ಅದು ಕೋಳಿ ಮಾಂಸದಲ್ಲಿರಬಹುದಾದ ಮೂಳೆಗಳಿಂದಲೂ ಆಗಿರಲಾರದು. ಕೋಳಿ ಮೂಳೆಯಾಗಿದ್ದರೆ ಅನ್ನನಾಳದಲ್ಲೇ ಸಿಕ್ಕಿಕೊಂಡು ಜಠರದ ತನಕ ಬರುತ್ತಲೇ ಇರಲಿಲ್ಲ."

"ಕಾರಣ ಹುಡುಕುವುದರಲ್ಲಿ ನಾವು ಹತ್ತಿರ ಹತ್ತಿರ ಬರುತ್ತಿದ್ದೇವೆ. ಉದರದ ಮಾಂಸಖಂಡ ಮೃದುವಾಗಿತ್ತು ಎಂದರೆ ಇನ್‌ಫೆಕ್ಷನ್ ಹರಡುತ್ತಿತ್ತು ಅನ್ನಬಹುದು. ಜಠರದಲ್ಲಿ ವ್ರಣವಾಗದೆ ರಂಧ್ರವಾಗುವುದು ಸಾಧ್ಯವಿದೆ. ಈ ಕೇಸ್‌ನಲ್ಲಿ ರಂಧ್ರವಾಗಿರುವುದು ಸೂಜಿ ಇಂದಲ್ಲ; ಕೋಳಿ ಮೂಳೆ ಇಂದಲ್ಲ. ಹಾಗಾದರೆ ಇನ್ನು ಯಾವುದರಿಂದ ಇರಬಹುದು?"

ಡಾ|| ಸ್ವೀನಿ ಕೂಡಲೇ ಹೇಳಿದರು—"ಮೀನಿನ ಮೂಳೆಯಿಂದ".

"ಹೌದು, ಅದೇ ಇರಬೇಕು" ಎನ್ನುತ್ತಾ ಡಾ|| ಟಿಕ್, "ನಮ್ಮ ಯುವಕ ಸರ್ಜನ್ ತಮ್ಮ ರೋಗಿಗೆ ಅಲ್‌ಸರೈಟಿವ್ ಕೊಲೈಟಿಸ್ ಇದೆ ಎಂದು ಚಿಕಿತ್ಸೆ ನಡೆಸಿದರು. ಆದರೆ ಜಠರದಲ್ಲಿದ್ದ ಮೀನಿನ ಮೂಳೆಯನ್ನು ಆಪರೇಷನ್ ಮಾಡಿ ತೆಗೆಯಬೇಕಾಗಿತ್ತು. ಆಗ ಆತ ಬದುಕುತ್ತಿದ್ದ", ತಮ್ಮ ಅಭಿಪ್ರಾಯ ಸೂಚಿಸಿದರು.

ಡಾ|| ವಾರ್ನರ್ ಕೂಡಲೇ ಕಪಾಟಿನಲ್ಲಿಟ್ಟಿದ್ದ ಕೋಟು ಮತ್ತು ಹ್ಯಾಟನ್ನು ತೆಗೆದುಕೊಂಡು ದಡದಡನೆ ಹೊರಟರು.

"ಮೀಟಿಂಗ್ ಇನ್ನೂ ಮುಗಿದಿಲ್ಲ. ಆಗಲೇ ಎಲ್ಲಿಗೆ ಹೊರಟಿರಿ?" ಕೇಳಿದರು ಡಾ|| ವುಡ್.

"ಎರಡು ವಾರದಿಂದ ಅಲ್ಸರ್ ಎಂದು ಚಿಕಿತ್ಸೆ ಮಾಡುತ್ತಿದ್ದೆ. ಈಗ ಗೊತ್ತಾಯಿತು ನನ್ನ ಡಯಾಗ್ನೋಸಿಸ್ ತಪ್ಪು ಎಂದು. ಇನ್ನು ಇಪ್ಪತ್ತನಾಲ್ಕು ಗಂಟೆಯೊಳಗೆ ಅವನಿಗೆ ಸರಿಯಾದ ವೈದ್ಯಕೀಯ ನೆರವು ಸಿಕ್ಕದಿದ್ದರೆ ಅವನು ಸತ್ತುಹೋಗುತ್ತಾನೆ. ನೀವುಗಳು ಅವನಿಗೆ ಏನಾಗಿದೆ ಎಂದು ಪತ್ತೆಮಾಡಿದ್ದೀರಿ. ಈಗ ನಾನು ನನ್ನ ರೋಗಿಯ ಜೀವ ಉಳಿಸಬಹುದು. ಸಧ್ಯ ನನ್ನ ರೋಗಿ ಇನ್ನೂ ಬದುಕಿದ್ದಾನೆ;" ಎಂದು ಹೇಳುತ್ತಾ ವಾರ್ನರ್ ಕೊಠಡಿ ಬಿಟ್ಟರು.

ಅರ್ಧ ಗಂಟೆಯ ತರುವಾಯ ಎಕ್ಸ್-ಕ್ಲಬ್‌ನ ಸದಸ್ಯರೆಲ್ಲಾ ಸೇಂಟ್ ಮೈಕೇಲ್ ಆಸ್ಪತ್ರೆಯಲ್ಲಿ ವಾರ್ನರ್ ಮಾಡುತ್ತಿದ್ದ ಆಪರೇಷನ್ ನೋಡುತ್ತಿದ್ದರು. ಹದಿನಾಲ್ಕು ಜನ ವೈದ್ಯಕೀಯ ಮಹಾಮಹಿಮರ ಎದುರು ಆಪರೇಷನ್ ಆಯಿತು. ಯಾವ ರಾಜ ಅಥವಾ ಪೋಪ್ ಖಾಯಿಲೆ ಬಿದ್ದಾಗಲೂ ಇಷ್ಟು ಜನ ತಜ್ಞರು ಆಸ್ಪತ್ರೆಯಲ್ಲಿ ಸೇರಿರಲಿಕ್ಕಿಲ್ಲ. ಡಾ|| ವಾರ್ನರ್ ಬಹು ನಾಜೂಕಾಗಿ ರೋಗಿಯ ಹೊಟ್ಟೆ ಕೊಯ್ದು ಜಠರದ ಗೋಡೆಯಲ್ಲಿ ಸಿಕ್ಕಿಕೊಂಡಿದ್ದ ಮೀನಿನ ಮೂಳೆ ತೆಗೆದರು.

ಎಲ್ಲರೂ ಹೊರ ತೆಗೆದ ಮೀನಿನ ಮೂಳೆ ನೋಡಿ—'ಹೌದು, ಮೀನಿನ ಮೂಳೆ' ಅಂದರು.

ಮೂರು ವಾರದಲ್ಲಿ ರೋಗಿ ಪೂರ್ಣವಾಗಿ ಹುಷಾರಾದ.

ಕೇವಲ ಎರಡೇ ಆಪೆಯಿಂದ ಒಂದು ದಿನವಿಡೀ ಕಳೆಯಲು ನಾನು ಅಭ್ಯಾಸ ಮಾಡಿಕೊಂಡಿರುವೆ.

ನೇತಾಜಿ

ಡೆಂಗು ಜ್ವರ ದಂಗಾದ ಜನ

ಡಾ|| ಕರವೀರಪ್ರಭು ಕ್ಯಾಲಕೊಂಡ
೨೦೪, ಶಸ್ತ್ರಚಿಕಿತ್ಸಾವಿಭಾಗ, ಕೆ.ಎಂ.ಸಿ ಆಸ್ಪತ್ರೆ
ಹುಬ್ಬಳ್ಳಿ-೫೮೦೦೨೨

— ಅಪರಿಚಿತ ಮಾರಕವ್ಯಾಧಿ ಸೂಚಿಸುವುದೇನು ? "ಪ್ರಕೃತಿಯನವರತ ಮಾನವನ ತಿದ್ದಿ ತಿರ್ದೊಡೆ ವಿಕೃತಿಗೊಳಿಸಿಹನು ಮಾಕೆಯಂಗಗಳಂ"—ನಿಸರ್ಗದ ವಿರುದ್ಧ ಮಾನವ ಸ್ವಂತ ಪ್ರಗತಿಯ ವ್ಯಾಮೋಹದಲ್ಲಿ ಸಾರುವ ಸಮರದ ದುಷ್ಫಲವೇ ಈ ವ್ಯಾಧಿ. ತಜ್ಞ ವೈದ್ಯರು ಬರೆದಿರುವ ಈ ಆಕರ್ಷಕ ನಿರೂಪಣೆ ಮೇಲಿನ ಹೇಳಿಕೆಗೆ ಇನ್ನೂ ಒಂದು ನಿದರ್ಶನ.

ಸುರೇಶನಿಗೆ ಸೊಳ್ಳೆ ಕಚ್ಚಿತು. ಆಗ ಸುದ್ದಿಯಾಗಲಿಲ್ಲ ನಿಜ. ಮುಂದೆರಡು ವಾರದಲ್ಲಿ ದೊಡ್ಡ ಸುದ್ದಿಯಾಯಿತು. ಸೊಳ್ಳೆ ಕಚ್ಚಿದಾಗಲೇ ಸುರೇಶನ ಶರೀರದೊಳಗೆ ಸಮರದ ಸೈರನ್ ಊದಿತ್ತು. ಕಚ್ಚಿದ ಸೊಳ್ಳೆ ವೈರಸ್‌ಗಳೆಂಬ ವೈರಿಗಳನ್ನು ಯುದ್ಧಕ್ಕೆ ಬಿಟ್ಟಿತ್ತು. ಇವು ಕೆಲವು ನ್ಯೂಕ್ಲಿಕ್ ಆಮ್ಲಗಳ ತುಂಡುಗಳು. ಈ ತುಂಡುಗಳ ಸುತ್ತ ಪ್ರೋಟೀನ್ ರಕ್ಷಾಕವಚ. ಶಿಸ್ತಿನ ಸಿಪಾಯಿಗಳಂತೆ ಕೆಲಸಮಾಡುವ ಬಿಳಿಯ ರಕ್ತಕಣಗಳ ದಂಡು ಚುರುಕಾಯಿತು. ವೈರಿಗಳ ಮೇಲೆ ದಂಡೆತ್ತಿ ಹೋಗಲು ಪ್ರತಿಕಾಯಗಳ ಗುಂಡುಗಳನ್ನು ಬಿಟ್ಟಿತು. ವೈರಿಗಳು ಸುಸ್ತಾದರು, ಸೋಲೊಪ್ಪಿದರು. ಸತ್ತ ವೈರಿಗಳ ಸುತ್ತುಗಟ್ಟಿದ ಬಿಳಿಯ ರಕ್ತಕಣಗಳು ಅವುಗಳನ್ನು ತಿಂದು ತೇಗಿದುವು ವಿಜಯೋತ್ಸವ ಆಚರಿಸಿದುವು.

ಹೊಸ ವೇಷ, ರೋಷಗಳೊಂದಿಗೆ ಮತ್ತೆ ವೈರಸ್ ದಾಳಿಯಾಯಿತು ದೇಹದೊಳಗಿನ
ಪ್ರತಿಕಾಯಗಳು ದೇಹ ರಕ್ಷಿಸುವ ಬದಲು
ಸೋಂಕು ಸಮೃದ್ಧಿಗೆ ಸಹಾಯಕವಾದುವು
ಈ ರೋಗಕ್ಕೆ ನಿಶ್ಚಿತ ಮದ್ದಿಲ್ಲದ್ದರಿಂದ
ಶಿಥಿಲಗೊಳ್ಳುತ್ತಿರುವ ಸಂರಕ್ಷಣೆಯನ್ನು
ವೈದ್ಯರು ಮತ್ತು ಅವರ ತಂಡ ಮೂ
ಪ್ರೇಕ್ಷಕರಾಗಿ ವೀಕ್ಷಿಸುತ್ತ ನಿಂತರು. ಜ್ವ
ಮಾಪಕದಲ್ಲಿಯ ಪಾದರಸ ಏರುತ್ತ ಲಿ
ಇತ್ತು. ದೇಹದೊಳಸೇರಿದ್ದ ವೈರಸ್‌ಗಳ
ಪ್ಲೇಟ್‌ಲೆಟ್‌ಗಳನ್ನು ನುಂಗಿ ನೀರು ಕು
ದವು. ರಕ್ತ ಹೆಪ್ಪುಗಟ್ಟುವಿಕೆಗೆ ಅವಶ
ವಿರುವ ಪ್ಲೇಟ್‌ಲೆಟ್‌ಗಳ ಸಂಖ್ಯೆ ಕು
ಯಿತು. ಮೂಗು, ಕಿವಿ, ಮೂತ್ರ ಮಲ್ಲಗ
ಮೂಲಕ ರಕ್ತ ಹರಿಯಿತು. ಕೈಕಾಲುಗಳ
ತಗಲಿದ್ದ ತಂಪು ಇಡೀ ದೇಹವನ್ನೇ ಆವ
ಸಿತು. ಸಂಚಿನಿಂದ ಇಂಚು ಇಂಚನ್ನು
ಕೊಂದು ಹಾಕಿತು. ಸಾವಿನ ಸುದ್ದಿ
ಯಾಯಿತು. ಭಯ ಭೀತಿಯ ಬಿರುಗಾ
ಬೀಸಿತು. ನಾಡಿನ ಜನತೆಗೆ ದಂಗು ಹಿಡಿಸಿ
ಇದೇ ಡೆಂಗು ಜ್ವರ....

ದೆಹಲಿಯಲ್ಲಿ ಈ ಸಲ ಬೇಸಿಗೆ ಬೆಂಕಿಯಾಗಿತ್ತು. ಆರಕ್ಕೆ ಏರದ ಮೂರಕ್ಕೆ ಇಳಿಯದ ಮಧ್ಯಮ ವರ್ಗದವರಿಗೆ ನುಂಗಲಾರದ ತುತ್ತಾಗಿತ್ತು. ಹವಾನಿಯಂತ್ರಿತ ವ್ಯವಸ್ಥೆ ಅವರಿಗೆ ಗಗನಕುಸುಮವಾಗಿತ್ತು. ಕೈಗೆಟುಕುವ ಕೂಲರ್‌ಗಳ ಮೊರೆ ಹೊಕ್ಕಿತ್ತು. ಬಿಸಿಲಿನ ಬೇಗೆ ನೀಗಿತ್ತು. ಮಳೆಗಾಲ ಬಂತು, ಧೋ ಎಂದು ಸುರಿಯಿತು. ತಂಪು ಹೊತ್ತು ತಂತು, ಜನ ಕೂಲರ್‌ಗಳ ಸ್ವಿಚ್ ಆಫ್ ಮಾಡಿತು. ಕೂಲರ್‌ಗಳಿಗೆ ಹಾಕಿದ ತಿಳಿನೀರು ಅದರಲ್ಲಿಯೇ ಉಳಿಯಿತು. ಏಡಿಸ್ ಈಜಿಪ್ಟಿ ಸೊಳ್ಳೆಗಳ ಸಂಖ್ಯಾಭಿವೃದ್ಧಿಗೆ ಹಾದಿ ಮಾಡಿತು....

ದೇಶದಲ್ಲಿ ಜನಸಂಖ್ಯಾ ಸ್ಫೋಟ. ದೆಹಲಿಗೂ ಇದರ ಬಿಸಿ ತಟ್ಟಿದ್ದು ದಿಟ. ನಿತ್ಯ ನೀರಿಗಾಗಿ ಪರದಾಟ ಅನಿವಾರ್ಯವಾಯಿತು. ನೀರು ಸಂಗ್ರಹಿಸಲು ಕಟ್ಟಿಸಿದ ತೊಟ್ಟಿಗಳು ಕಾಲಕಾಲಕ್ಕೆ ಸ್ವಚ್ಛಗೊಳ್ಳಲಿಲ್ಲ. ತೊಟ್ಟಿ ತಿಳಿನೀರು ಏಡಿಸ್ ಸೊಳ್ಳೆ ಹೆರಿಗೆ ತಾಣಗಳಾದುವಲ್ಲ.

ಮನೆಗಳ ಮುಂದೆ ಮನಮೋಹಕ ಗಾರ್ಡನ್ ನಿರ್ಮಿಸುವುದು ಎಲ್ಲರಿಗೂ ಸಾಧ್ಯವಿಲ್ಲ. ಮಧ್ಯಮ ವರ್ಗದವರು ಮನೆಯ ಮುಂದಿನ ಕಟ್ಟೆ, ಕಿಟಕಿಗಳಲ್ಲಿ ಮನಿಪ್ಲಾಂಟ್ ಬೆಳೆಸುವ ವ್ಯಾಮೋಹ ಬಿಟ್ಟುಕೊಟ್ಟಿಲ್ಲ. ಅಲಂಕೃತ ಕುಂಡಾಗಳಲ್ಲಿಯ ತಿಳಿನೀರು ಏಡಿಸ್ ಸೊಳ್ಳೆಗಳು ತತ್ತಿ ಇಡುವ ತಾಣಗಳಾದುವು ಸೊಳ್ಳೆಗಳ ಸಂಖ್ಯಾಭಿವೃದ್ಧಿಗೆ ನೆರವಾದುವು ...

ದೆಹಲಿಯಲ್ಲಿ ಸ್ಫೋಟಗೊಂಡು, ದೇಶದ ಹಲವು ರಾಜ್ಯಗಳಿಗೂ ಹಬ್ಬಿರುವ ಡೆಂಗು ಜ್ವರದ ರೋಗಪ್ರಸಾರದ ಪ್ರಮುಖ ಪಾತ್ರಧಾರಿಯಾದ ಏಡಿಸ್ ಸೊಳ್ಳೆ ಮಧ್ಯಮ ವರ್ಗದವರ ನೆರವಿನಿಂದ ನಿರಾತಂಕವಾಗಿ ಬೆಳೆಯಿತು. ತ್ವರಿತಗತಿಯಲ್ಲಿ ಡೆಂಗುಜ್ವರ ಕಾರಕಗಳ ಕಾಣಿಕೆಯನ್ನು ಜನರಿಗೆ ನೀಡಿತು ಐಷಾರಾಮ ಬಯಕೆಯು ಬಿಸಿಲುಗುದುರೆ ಬೆನ್ನತ್ತಿದ್ದವರಿಗೆ ಬಿಸಿ ತಟ್ಟಿತು. ದೇಶದ ತುಂಬ ದೊಡ್ಡ ಸುದ್ದಿಯಾಯಿತು. ಈ ಸಾಂಕ್ರಾಮಿಕ ಸ್ಲಮ್ಮುಗಳಿಂದ ಸ್ಫೋಟಗೊಂಡಿಲ್ಲವೆಂಬುದು ಸಮೀಕ್ಷೆಗಳಿಂದ ಸ್ಪಷ್ಟವಾಯಿತು.

ಪತ್ರಿಕೆಯಲ್ಲಿ ಪ್ರಕಟಗೊಂಡ ಸುದ್ದಿಗಳು ದೆಹಲಿ ಹೈಕೋರ್ಟ್ ಗಮನ ಸೆಳೆದುವು. ಆರೋಗ್ಯಾಧಿಕಾರಿಗಳಿಗೆ ಶೋಕಾಸ್ ನೋಟಿಸುಗಳು ರವಾನೆಯಾದುವು. ಆರೋಗ್ಯ ಸಂಸ್ಥೆಗಳು ತಮ್ಮ ಕೈ ತೊಳೆದುಕೊಳ್ಳಲು ಹವಣಿಸಿದುವು. ಶೀತಲ ಸಮರಕ್ಕೆ ಸೋಪಾನ ಹಾಕಿದುವು. ಜಾಗತಿಕ ಆರೋಗ್ಯ ಸಂಸ್ಥೆ ಡೆಂಗುಜ್ವರ ಸ್ಫೋಟದ ಬಗ್ಗೆ ಒಂದು ತಿಂಗಳು ಮೊದಲೇ ಎಚ್ಚರಿಕೆ ನೀಡಿರುವುದಾಗಿ ಹೇಳಿತು. ದೆಹಲಿ ಆರೋಗ್ಯ ಮಂತ್ರಿಗಳು ಇದು ತಮ್ಮ ಗಮನಕ್ಕೆ ಬಂದಿಲ್ಲವೆಂದರು. ವ್ಯತಿರಿಕ್ತವಾಗಿ ಕೇಂದ್ರ ಆರೋಗ್ಯ ಸಚಿವಾಲಯ ದೆಹಲಿಯಲ್ಲಿಯ ಡೆಂಗುಜ್ವರದ ಹಾವಳಿಯನ್ನು ಸಾಂಕ್ರಾಮಿಕವೆಂದು ಸಾರಲು ಸೂಚಿಸಿತು. ಆಡಳಿತ ಯಂತ್ರಕ್ಕೆ ಹಿಡಿದ ತುಕ್ಕು ಬಿಡಲಿಲ್ಲ. ವೈದ್ಯರು ಮತ್ತು ಅವರ ಸಿಬ್ಬಂದಿ ಸಾವಿನ ದವಡೆಯಲ್ಲಿ ಸಿಕ್ಕು ತತ್ತರಿಸುತ್ತಿದ್ದ ರೋಗಿಗಳ ಆರೈಕೆಮಾಡುವ ಸಮರ ಸಾರಿದರು. ಶಾಂತ ಚಿತ್ತದಿಂದ ಹೋರಾಟ ನಡೆಸಿದರು....

ಕೆಲವು ವರ್ಷಗಳ ಹಿಂದೆಯಷ್ಟೇ ಸಂಧಿಪದಿಗಳ ಮೂಲಕ ಹರಡಬಹುದಾದ ವೈರಸ್‌ಗಳನ್ನು ಹಲವಾರು ರೋಗಿಗಳಲ್ಲಿ, ಪ್ರಾಣಿಗಳಲ್ಲಿ ಪ್ರಪಂಚಾದ್ಯಂತ ಪ್ರತ್ಯೇಕಿಸಲಾಗಿದೆ. ಈ ವೈರಸ್‌ಗಳ ಸಮೂಹಕ್ಕೆ 'ಆರ್ಬೋವೈರಸ್'ಗಳೆಂದು ಹೆಸರು. ಇವುಗಳಲ್ಲಿ ಕೆಲವು ಮಾತ್ರ ಮನುಷ್ಯರಿಗೆ ಸೋಂಕನ್ನು ಬಳುವಳಿ ನೀಡುವ ಶಕ್ತಿ ಸಾಮರ್ಥ್ಯಹೊಂದಿವೆ. ಇನ್ನು ಕೆಲವು ರೋಗವನ್ನು ಉಂಟುಮಾಡಬಲ್ಲವುಗಳಾಗಿವೆ. ಇವು ಉಷ್ಣವಲಯದಲ್ಲಿ ಸಾರ್ವಜನಿಕ ಆರೋಗ್ಯ ಸಮಸ್ಯೆಗಳನ್ನುಂಟು ಮಾಡುವಲ್ಲಿ ಇತ್ತೀಚೆಗೆ ಹೆಸರುವಾಸಿಯಾಗಿವೆ. ಇವುಗಳಲ್ಲಿ ಡೆಂಗು ಜ್ವರ ಅಗ್ರಸ್ಥಾನದಲ್ಲಿದೆ.

೧೯೫೩ರಲ್ಲಿ ಮನಿಲಾದಲ್ಲಿ ರಕ್ತಸ್ರಾವದ ಡೆಂಗುಜ್ವರ ತನ್ನ ಕರಾಳ ಛಾಯೆಯನ್ನು ಚೆಲ್ಲಿತ್ತು. ೧೯೫೮ರಲ್ಲಿ ಬ್ಯಾಂಕಾಕದಲ್ಲಿ ಭುಗಿಲೆಬ್ಬಿಸಿತು ದಿಗಿಲು ಹರಡಿತ್ತು. ಮ್ಯಾನ್‌ಮಾರದಲ್ಲಿ ೧೯೬೦ ರಿಂದಲೂ ಆಗೊಮ್ಮೆ ಈಗೊಮ್ಮೆ ದರ್ಶನ ನೀಡುತ್ತಲೇ ಇದೆ. ೧೯೮೧ರಲ್ಲಿ ಹವಾನಾ ಹಾವಳಿಗಳು ಡೆಂಗುಜ್ವರದ ಇತಿಹಾಸದಲ್ಲಿ ಅಚ್ಚಳಿಯದೇ ನಿಚ್ಚಳವಾಗಿ ನಿಲ್ಲುವಂತಹವು. ಭಾರತದ ವಿವಿಧ ಭಾಗಗಳಲ್ಲಿ ಈ ಕಾಯಿಲೆ ಆಗಾಗ ಪಿಡುಗಾಗಿ ಕಾಣುತ್ತಲಿದೆ. ಉದಾಹರಣೆಗೆ ಕಲ್ಕತ್ತ (೧೯೬೩), ವಿಶಾಖಪಟ್ಟಣ, ಮದ್ರಾಸ್ (೧೯೬೪), ಜಬಲ್‌ಪುರ (೧೯೬೬), ಪಾಂಡಿಚೇರಿ (೧೯೬೮) ಹೀಗೆ ದೇಶದ ಉತ್ತರ ಭಾಗದಲ್ಲಿ ವ್ಯಾಪಿಸಿರುವ ಈ ಕಾಯಿಲೆ ೧೯೮೦ ರಲ್ಲಿ ಐದು ಸಾವಿರ ಜನರನ್ನು ಕಾಡಿ, ಹತ್ತು ಜನರನ್ನು ಬಲಿತೆಗೆದುಕೊಂಡಿದೆ. ೧೯೬೦ ರ ಈಚೆಗೆ ಗ್ವಾಲಿಯರ್, ದೆಹಲಿ, ಲಕ್ನೋ ಕಾನ್ಪುರಗಳಲ್ಲಿ ಈ ಕಾಯಿಲೆ ಹೆಚ್ಚಾಗಿ ಗೋಚರಿಸಿತ್ತು. ೧೯೮೮ರಲ್ಲಿ ದೆಹಲಿಯಲ್ಲಿಯೇ ಈ ರೋಗದ ಸಾಂಕ್ರಾಮಿಕ ದರ್ಶನವಾಗಿತ್ತು ಆದರೆ ಇಷ್ಟು ಅಪಾಯಕಾರಿಯಾಗಿರಲಿಲ್ಲ. ಅಪರಿಮಿತವಾಗಿ ಅವ್ಯಾಹತವಾಗಿ ಹಾವಳಿಯನ್ನು ಮಾಡಿರಲಿಲ್ಲ. ರೋಗಿಗಳನ್ನು ದಂಡಿಸಿರಲಿಲ್ಲ. ಜೀವ ಹಿಂಡಿರಲಿಲ್ಲ, ಹಾಗೆಂದು ಇದರ ಬಗ್ಗೆ ಅಲಕ್ಷಿಸಿದ್ದು ಸರಿಯಲ್ಲ. ಹೊಂಚುಹಾಕಿ ಕೂತು, ಸಂಚಿನಿಂದ ಸಾಕಷ್ಟು ಮಾರ್ಪಾಡುಗಳನ್ನು ಮಾಡಿಕೊಂಡು, ನಮ್ಮ ಜಡತ್ವದ ಲಾಭ ಪಡೆದು ರಾಜಧಾನಿಯಲ್ಲಿ ಅಬ್ಬರದಿಂದ ಸದ್ದು ಮಾಡಿದೆ, ಸುದ್ದಿ ಮಾಡಿದೆ. ಉತ್ತರಪ್ರದೇಶ, ರಾಜಸ್ಥಾನ, ಪಂಜಾಬ್, ಒರಿಸ್ಸಾ, ಮಧ್ಯಪ್ರದೇಶಗಳಿಗೂ ಮುತ್ತಿಗೆ ಹಾಕಿದೆ. ಕರ್ನಾಟಕಕ್ಕೂ ಕಾಲಿಟ್ಟಿದೆ. ಈವರೆಗೆ ಸುಮಾರು ೧೨,೪೩೮ ಜನರಿಗೆ ರೋಗ ತಗಲಿದೆ. ೩೯೫ ಜನರು ಅಸುನೀಗಿದ್ದಾರೆ.

ರೋಗಕಾರಕ

ಡೆಂಗುಜ್ವರ ಆರ್ಬೋವೈರಸ್‌ದ ನಾಲ್ಕು ಪ್ರಭೇದಗಳಿಂದುಂಟಾಗುವುದು (ಡೆಂಗು-೧, ಡೆಂಗು-೨, ಡೆಂಗು-೩, ಡೆಂಗು-೪) ಅವುಗಳೆಲ್ಲಕ್ಕೂ ಮನುಷ್ಯನೇ ಮೂಲ. ಮಂಗಗಳು, ಇಣಚಿಗಳು ಇದಕ್ಕೆ ಸಹಕರಿಸುವವು. ೨ ಮತ್ತು ೩ನೇ ಪ್ರಕಾರದ ರೋಗಾಣುಗಳ ಹಾವಳಿ ಕ್ಯಾರಿಬಿಯನ್‌ದಲ್ಲಿ ಹೆಚ್ಚು. ಪ್ರಭೇದ ೧ರ ಹಾವಳಿ ಪಶ್ಚಿಮ ಆಫ್ರಿಕದಲ್ಲಿ, ಥಾಯ್ಲೆಂಡ್‌ನಲ್ಲಿ ನಾಲ್ಕನೇ ಪ್ರಕಾರದ ರೋಗಾಣುವಿನಿಂದ ಜನ ಬಳಲುವರು. ಆದರೆ, ಭಾರತದಲ್ಲಿ ಎಲ್ಲ ನಾಲ್ಕು ಪ್ರಕಾರದ ರೋಗಾಣುಗಳ ಹಾವಳಿ ಕಂಡು ಬಂದಿದೆ.

ಈ ರೋಗದ ಪ್ರಸಾರದಲ್ಲಿ ಏಡಿಸ್ ಸೊಳ್ಳೆಗಳು, ಅದರಲ್ಲೂ 'ಏಡಿಸ್ ಈಜಿಪ್ಟಿ' ಪ್ರಮುಖ ಪಾತ್ರ ವಹಿಸುವುದು. ಮಾರ್ಪಾಡು ಮಾಡಿಕೊಂಡು ಬೆಳೆಯುತ್ತಿರುವ ಈ ವೈರಸ್ ಮೂರನೇ ತಲೆಮಾರಿಗೆ (ಥರ್ಡ್ ಜನರೇಶನ್) ಬದಲಾಗಿದ್ದು, ಹಾವಳಿಯ ಹರವನ್ನು ಹೆಚ್ಚಿಸಿಕೊಂಡು ಜನರಿಗೆ ದಂಗು ಹಿಡಿಸಿದೆ. ಮಳೆಗಾಲದಲ್ಲಿ ಈ ರೋಗದ ಸಾಂಕ್ರಾಮಿಕಗಳು ಸ್ಫೋಟಗೊಳ್ಳುವುದು ಸಾಮಾನ್ಯ. ಏಕೆಂದರೆ ಈ ರೋಗ ಪ್ರಸಾರದಲ್ಲಿ ಪಾಲ್ಗೊಳ್ಳುವ ಏಡಿಸ್ ಸೊಳ್ಳೆ ಈ ಋತುವಿನಲ್ಲಿ ಸಂಖ್ಯಾಭಿವೃದ್ಧಿಯಾಗುವುದು. ರೋಗವಾಹಕ ಸೊಳ್ಳೆ ವರ್ಷವಿಡೀ ಇರುವ ಪ್ರದೇಶಗಳಲ್ಲಿ ಈ ರೋಗ ಸ್ಥಳಜನ್ಯವಾಗಿರುತ್ತದೆ.

ಏಡಿಸ್ ಈಜಿಪ್ಟಿಯ ವೈಶಿಷ್ಟ್ಯಗಳು

ಏಡಿಸ್ ಸೊಳ್ಳೆಗಳು ಇತರ ಸೊಳ್ಳೆಗಳಂತೆಯೇ ಕಂಡರೂ ಇವುಗಳ ಗಾತ್ರ ಸ್ವಲ್ಪ ದೊಡ್ಡದು. ಇವು ಕಪ್ಪು ಬಣ್ಣದವಾಗಿದ್ದರೂ, ಮೈಮೇಲೆ ಅಲ್ಲಲ್ಲಿ ಬಿಳಿಪಟ್ಟೆ ಇರುತ್ತವೆ. ಹೀಗಾಗಿ ಈ ಸೊಳ್ಳೆಗಳನ್ನು 'ಪಟ್ಟೆ ಸೊಳ್ಳೆ', 'ಹುಲಿಸೊಳ್ಳೆ' ಎಂದೂ ಕರೆಯುತ್ತಾರೆ. ಚಳಿಜ್ವರದ ಛಳಿಯನ್ನು ಬಳುವಳಿ ನೀಡುವ ಸೊಳ್ಳೆಗಳೆಲ್ಲಾ ಸಾಮಾನ್ಯವಾಗಿ ಹೊಲಸು ನೀರಿನಲ್ಲಿ ಮೊಟ್ಟೆಯಿಟ್ಟು ಮರಿಮಾಡುವುವು. ಆದರೆ ಏಡಿಸ್ ಈಜಿಪ್ಟಿ ಇದಕ್ಕಾಗಿ ನಿಂತ ತಿಳಿನೀರನ್ನು ಆಯ್ಕೆ ಮಾಡುವುದು. ಅನಾಫೆಲಿಸ್ ಸೊಳ್ಳೆ ರಾತ್ರಿ ಕಚ್ಚುವುದು. ಏಡಿಸ್ ಈಜಿಪ್ಟಿ ಭಯ ಭೀತಿಗಳಿಲ್ಲದೇ ಹಾಡುಹಗಲೇ ಮನುಜರನ್ನು ಕಚ್ಚುವುದು. ಇದು ಮನುಷ್ಯರ ರಕ್ತವನ್ನೇ ಕುಡಿಯಲು ಇಷ್ಟ ಪಡುವುದು ಇದಕ್ಕಾಗಿ ಕಷ್ಟಪಡುವುದು. ಬೇಟೆಗಾರನಂತೆ ಛಲದಿಂದ ಬೆನ್ನು ಹತ್ತುವುದು. ಮನುಷ್ಯನ ತಪ್ಪಿಸಿಕೊಳ್ಳುವ ಎಲ್ಲ ತಂತ್ರಗಳಿಗೆ ತಣ್ಣೀರೆರಚಿ, ಕಚ್ಚೇಬಿಡುವುದು. ಇವು ಮೊಣಕಾಲಿನ ಕೆಳಭಾಗವನ್ನು ಹೆಚ್ಚಾಗಿ ಕಚ್ಚುತ್ತವೆ. "ಇಂದಿನ ದಿನಗಳಲ್ಲಿ ನೀರು ಸಂಗ್ರಹಿಸಲು ಬಳಸುವ ಡ್ರಮ್, ಬ್ಯಾರಲ್, ಸಿಂಟೆಕ್ಸ್ ಟ್ಯಾಂಕುಗಳು ಏಡಿಸ್ ಈಜಿಪ್ಟಿಯ ಸಂಖ್ಯಾಭಿವೃದ್ಧಿಯ ತಾಣಗಳಾಗಿವೆ" ಎಂದು ಡೆರಿಕ್ ರಾಬಿನ್‌ಸನ್ ಹೇಳಿರುವುದು ಔಚಿತ್ಯ ಪೂರ್ಣವಾಗಿದೆ.

ರೋಗ ಪ್ರಸಾರ

ರೋಗಾಣುಗಳನ್ನು ಹೊಂದಿರುವ ವಾಹಕ ಸೊಳ್ಳೆ ನಿರೋಗಿಯನ್ನು ಕಚ್ಚುವ ಮೂಲಕ ರೋಗದ ಕಾಣಿಕೆ ನೀಡುವುದು. ಏಡಿಸ್ ಈಜಿಪ್ಟಿ ಸೊಳ್ಳೆಗಳು ರೋಗದಿಂದ ಬಳಲುತ್ತಿರುವ ರೋಗಿಯ ರಕ್ತವನ್ನು ಹೀರುವಾಗ ರಕ್ತದ ಜೊತೆಗೆ ವೈರಸ್‌ಗಳನ್ನೂ ಪಡೆಯುತ್ತವೆ. ಈ ವೈರಸ್‌ಗಳು ಸೊಳ್ಳೆಯಲ್ಲಿ ಬದಲಾವಣೆ ಹೊಂದುತ್ತ ಬೆಳವಣಿಗೆಯಾಗುತ್ತವೆ. ಸುಮಾರು ೮ ರಿಂದ ೧೪ ದಿನಗಳಲ್ಲಿ ಈ ಸೊಳ್ಳೆಗಳು ಸೋಂಕುಕಾರಕ ಸೊಳ್ಳೆಗಳಾಗಿ ರೂಪಾಂತರಗೊಳ್ಳುವವು. ಒಮ್ಮೆ ಸೊಳ್ಳೆ ಸೋಂಕುಕಾರಕವಾಗಿ ಬದಲಾವಣೆಯಾದಲ್ಲಿ, ಅದು ಉಳಿದ ಜೀವಿತ ಕಾಲದುದ್ದಕ್ಕೂ ರೋಗಾಣುಗಳ ಉಡುಗೊರೆ ನೀಡುವ ಉಗ್ರಾಣವಾಗಿಯೇ ಉಳಿಯುವುದು. 'ಮನುಷ್ಯ–ಸೊಳ್ಳೆ–ಮನುಷ್ಯ'ರ ಸೋಂಕಿನ ಸರಪಳಿ ಆದಿ ಅಂತ್ಯಗಳಿಲ್ಲದ ವಿಷವೃತ್ತವಾಗಿ ಬೆಳೆಯುವುದು.

ಈ ಸರಪಳಿಯ ಕೊಂಡಿಗಳು ಕಳಚಿಕೊಂಡಾಗಲೇ ಈ ರೋಗ ಕಣ್ಮರೆಯಾಗುವುದು. ಈ ನಿಟ್ಟಿನಲ್ಲಿ ನಾವು ಶ್ರಮಿಸಬೇಕು. ಆಗ ಶ್ರಮ ಸಾರ್ಥಕ.

ರೋಗದ ಲಕ್ಷಣಗಳು

ಬಹಳಷ್ಟು ಸಂದರ್ಭಗಳಲ್ಲಿ ಈ ಜ್ವರ ಪ್ರಕಟಗೊಳ್ಳದೇ ಇರಬಹುದು ಇಲ್ಲವೆ ಸೌಮ್ಯಸ್ವರೂಪದಲ್ಲಿ ಸಮಾಧಾನಪಟ್ಟುಕೊಳ್ಳಬಹುದು. ರೋಗಾಣುಗಳ ಸಾಂದ್ರತೆ ಸೋಂಕಿಕ ಗುಣ, ವ್ಯಕ್ತಿಯ ರೋಗ ಪ್ರತಿರೋಧಕ ಶಕ್ತಿಗಳಿಗನುಗುಣವಾಗಿ ರೋಗ ಸಾಧಾರಣ ತೀವ್ರತೆ ಹೊಂದಿರಬಹುದು ಇಲ್ಲವೆ ತೀವ್ರತರ ದೈಹಿಕ ತೊಂದರೆಗಳನ್ನು ತೋರ್ಪಡಿಸಬಹುದು.

ಈ ರೋಗದ ಅಧಿಶಯನಕಾಲ ೨–೧೫ ದಿನಗಳು ಡೆಂಗು ಜ್ವರಕ್ಕೆ ಬಡವಬಲ್ಲಿದರೆಂಬ ಭೇದಭಾವವಿಲ್ಲ. ಹೆಣ್ಣುಗಂಡೆಂಬ ತಾರತಮ್ಯವಿಲ್ಲ. ವಯಸ್ಸಿನ ನಿರ್ಬಂಧವಿಲ್ಲ ಹಿಂದೆ ರೋಗದಿಂದ ಬಳಲಿದವರೂ ರಕ್ಷಣೆಯ ರಕ್ಷಾಕವಚ ಪಡೆಯುವುದಿಲ್ಲ. ಈ ರೋಗದಲ್ಲಿ ಮುಖ್ಯವಾಗಿ ಮೂರು ಪ್ರಕಾರಗಳನ್ನು ಗುರುತಿಸಲಾಗಿದೆ.

೧. ಸಾಮಾನ್ಯ ಡೆಂಗುಜ್ವರ
೨. ರಕ್ತಸ್ರಾವದ ಡೆಂಗುಜ್ವರ
೩. ರಕ್ತ ಸ್ರಾವದಿಂದೊಡಗೂಡಿದ ಧಕ್ಕೆ (ಶಾಕ್) ಲಕ್ಷಣಕೂಟ.

ಪ್ರಾರಂಭದಲ್ಲಿ ಆಲಸ್ಯ, ವಿಪರೀತ ತಲೆನೋವು ಕಾಣಿಸಿಕೊಂಡು, ದಡಾರದಲ್ಲಿಯಂತಹ ಕೆಂಪಡರಿದ ದದ್ದುಗಳು ಮೈತುಂಬ ಗೋಚರಿಸಬಹುದು. ಅನಂತರ ಮೈಕೈ ನೋವು, ತೀವ್ರತರದ ಬೆನ್ನುನೋವು, ಸಂದು ಸಂದುಗಳಲ್ಲಿ ನೋವು ತೋರಬಹುದು. ಸಂದು ನೋವುಗಳು ವ್ಯಕ್ತಿಯ ಚಲನವಲನಗಳಿಗೆ ಅಡ್ಡಿಯನ್ನೊಡ್ಡುವುವು. ಹಾಸಿಗೆಯನ್ನು ಹಿಡಿಸುವುದು ಕೆಂಗಣ್ಣು (ಕಂಜಂಕ್ಟೈವಿಟೀಸ್) ಕಾಣಿಸಿಕೊಂಡು, ಕಣ್ಣು ಚಲನೆ ನೋವನ್ನುಂಟುಮಾಡುವುದು. ಹೀಗೆ ದೇಹವನ್ನೆಲ್ಲಾ ಅಸಾಧ್ಯವಾದ ನೋವು ವ್ಯಾಪಿಸುತ್ತದೆ. ದೇಹದ ಮೂಳೆಗಳೆಲ್ಲವೂ ಪಟಪಟನೆ ಮುರಿದುಬಿಡುತ್ತವೆಯೇನೋ ಎನಿಸಿಬಿಡುತ್ತದೆ. ಹೀಗಾಗಿ ಈ ಕಾಯಿಲೆಗೆ 'ಬ್ರೇಕ್‌ಬೋನ್ ಫೀವರ್', 'ದಾಂಡಿ ಫೀವರ್' ಎಂದು ಕರೆಯುತ್ತಾರೆ.

ಹಸಿವು ಕುಗ್ಗುವುದು, ಬಲಹೀನತೆ ಹಿಗ್ಗುವುದು, ಓಕರಿಕೆ, ವಾಂತಿ ಆಗಬಹುದು. ಜ್ವರ ೪೮ ರಿಂದ ೯೬ ಗಂಟೆಗಳವರೆಗೆ ಏಕಪ್ರಕಾರವಾಗಿ ನಿಂತು, ನಂತರ ಇಳಿಯುತ್ತವೆ. ಸಂಪೂರ್ಣವಾಸಿಯಾಗುವ ಮೊದಲು ಮತ್ತೆ ಜ್ವರ ಏರಿಕೆಯಾಗುವುದು. ಈ ರೀತಿಯ ಜ್ವರದ ಏರಿಳಿಕೆಗಳ ತೆರೆಗಳ ತಿರುಗಣಿಯಲ್ಲಿ ರೋಗಿಗಳು ಗಿರಕಿ ಹೊಡೆಯುವರು. ಇದಕ್ಕೆ 'ಸ್ಯಾಡಲ್ ಬ್ಯಾಗ್ ಸಿಂಡ್ರೋಮ್' ಎನ್ನುವರು. ನಿಧಾನವಾಗಿ ನರ್ತನಗೈಯುವುದು. ಕುತ್ತಿಗೆ ಹಾಲ್ರಸ ಗ್ರಂಥಿಗಳು ಊದಿಕೊಳ್ಳಬಹುದು. ಬಿಳಿಯ ರಕ್ತಕಣಗಳ ಸಂಖ್ಯೆಯ ಇಳಿತ ಈ ರೋಗದಲ್ಲಿ ಗೋಚರಿಸುತ್ತದೆ.

ಸೌಮ್ಯ ಸ್ವರೂಪದ ರೋಗಗಳಲ್ಲಿ ನೆಗಡಿ, ಕೆಮ್ಮು ಕಾಣಿಸಬಹುದು. ಕೆಲವೊಮ್ಮೆ ಖಿನ್ನತೆ ಕಾಡಬಹುದು. ಕೆಲವರಿಗೆ ನಿದ್ರಾಹೀನತೆ ಕಾಡುತ್ತದೆ. ಕೆಲವರಿಗೆ ಮಂಪರು ಕವಿಯುತ್ತದೆ. ಮೂರ್ಛೆ ಹೋಗುತ್ತಾರೆ.

...ಡೆಂಗು-೨, ಡೆಂಗು-೩ ವೈರಸ್‌ಗಳಿಂದ ...ಂಗುಜ್ವರ ಉಂಟಾದಲ್ಲಿ, ರಕ್ತೋದ್ರೇಕ ...ಳ್ಳಬಹುದು. ಜ್ವರಬಂದ ಮೂರು ...ಲ್ಕು ದಿನಗಳ ನಂತರ ಚರ್ಮದಡಿ ರಕ್ತ ...ಂತುರು, ರಕ್ತಕಲೆ, ಮೂಗು, ಕಿವಿ, ...ಣ್ಣುಗಳಿಂದ ರಕ್ತ ಸೋರಿಕೆ, ರಕ್ತವಾಂತಿ, ...ಕ್ತಮೂತ್ರ, ರಕ್ತಮಲ ಗೋಚರಿಸಿ ರಕ್ತ ...ಚಾರ ಕುಸಿಯಬಹುದು. ಈ ರೀತಿ ...ಗ್ರವಾದ ಬೇನೆ ಬಂದವರಿಗೆ ಧಕ್ಕೆ ...ಂಟಾಗಿ ಸಾವು ಸಂಭವಿಸುವ ಸಾಧ್ಯತೆ ...ಚ್ಚಾಗಿರುತ್ತದೆ. ಅಂಥ ರೋಗಿಗಳಿಗೆ ...ಕ್ತ ನೀಡಬೇಕಾಗಿ ಬರಬಹುದು. ಆದರೆ ...ಷ್ಟಾರು! ರಕ್ತದ ಬ್ಯಾಂಕುಗಳಲ್ಲಿ ಶುದ್ಧ ...ಕ್ತ ಸಿಗಲಿಕ್ಕಿಲ್ಲ. ಏಡ್ಸ್ ವೈರಸ್‌ಗಳುಳ್ಳ ...ಕ್ತ ಸಿಗಬಹುದು. ದಿಲ್ಲಿಯಲ್ಲಿ ರಕ್ತ ...ಾರುವವರ ಹಾವಳಿಯೇ ಹೆಚ್ಚಾಗಿ ಭಾರೀ ...ಾಟೆಯಾಗಿತ್ತು. ಸಾಧ್ಯವಾದಷ್ಟು ...ಟ್ಟಿಗೆ ರೋಗಿಯ ಬಂಧುಗಳೇ ರೋಗಿಗೆ ...ಕ್ತದಾನ ಮಾಡಬೇಕು. ನೋವು ...ಮನಕ್ಕೆ ಆಸ್ಪಿರಿನ್ ಮಾತ್ರೆ ಸೇವಿಸಿದರೆ ...ಕ್ತಸ್ರಾವ ಹೆಚ್ಚಿಗೆ ಆದೀತೆಂದು ವೈದ್ಯರು ...ೇಳುತ್ತಾರೆ. ರೋಗದ ಲಕ್ಷಣಗಳೆಲ್ಲಾ ...ತ್ತು ದಿನಗಳಷ್ಟು ಕಾಲಮಾತ್ರ. ...ದಾಗ್ಯೂ ರೋಗದಿಂದ ಮುಕ್ತನಾದ ...ಕ್ತಿ, ಚೇತರಿಸಿಕೊಳ್ಳಲು ಒಂದೆರಡು ...ಗಳೇ ಬೇಕಾಗುತ್ತದೆ.

...ತೀವ್ರತೆಗನುಗುಣವಾಗಿ ರಕ್ತಸ್ರಾವದ ...ಗು ಜ್ವರವನ್ನು ನಾಲ್ಕು ಗುಂಪುಗಳಾಗಿ ...ಗಡಿಸಲಾಗಿದೆ.

...ಂಪು ೧ : ಜ್ವರ+ನೆಗಡಿ, ಕೆಮ್ಮು, ಮೈಕೈನೋವು ಇತ್ಯಾದಿ.

ಗುಂಪು ೨ : ಗುಂಪು ೧ + ವಸಡು, ಚರ್ಮ, ಅನ್ನನಾಳದಿಂದ ರಕ್ತಸ್ರಾವವಾಗುವುದು.

ಗುಂಪು ೩ : ಗುಂಪು ೨+ಧಕ್ಕೆ (ಶಾಕ್)

ಗುಂಪು ೪ : ಗುಂಪು ೩ + ದೀರ್ಘಕಾಲಿಕ ಮಯುಕ್.

ಗುಂಪು ೩ ಮತ್ತು ೪ಕ್ಕೆ ಸಂಬಂಧಿಸಿದ ರೋಗದ ಲಕ್ಷಣಗಳನ್ನು ಹೊಂದಿದವರಿಗೆ 'ಡೆಂಗು ಧಕ್ಕೆ ಲಕ್ಷಣಕೂಟ' (ಡೆಂಗೆ ಶಾಕ್ ಸಿಂಡ್ರೋಮ್) ಎಂದು ಕರೆಯುವರು. ಈ ಗುಂಪಿನ ರೋಗಿಗಳಿಗೆ ಸಾವು ನೋವು ಹೆಚ್ಚು.

ಚಿಕಿತ್ಸೆ

ಈ ರೋಗಕ್ಕೆ ನಿಶ್ಚಿತ ಚಿಕಿತ್ಸೆಯಿಲ್ಲ. ತ್ರಾಸಕ್ಕೆ ತಕ್ಕ ಚಿಕಿತ್ಸೆ ನೀಡುವುದೊಂದೇ ಉಳಿದಿರುವ ಮಾರ್ಗ. ತೀವ್ರತರ ನೋವನ್ನು ನೋವು ನಿವಾರಕಗಳಿಂದ ದೂರ ಮಾಡಬಹುದು. ಜ್ವರ ನಿಯಂತ್ರಣಕ್ಕೆ ಹಣೆಯ ಮೇಲೆ ತಣ್ಣೀರ ಪಟ್ಟಿ ಹಾಕುವುದು. ಜ್ವರ ಶಾಮಕ ಗುಳಿಗೆ ಕೊಡುವುದು; ಸಾಕಷ್ಟು ದ್ರವ ಆಹಾರ ಸೇವಿಸುವುದು ಒಳ್ಳೆಯದು, ದ್ರವ ಮತ್ತು ರಕ್ತ ಪೂರಣ (ಬ್ಲಡ್ ಟ್ರಾನ್ಸ್‌ಫ್ಯೂಶನ್), ಸ್ಟೀರಾಯಿಡ್‌ಗಳನ್ನು ರಕ್ತೋದ್ರೇಕದಲ್ಲಿ ನೀಡಬೇಕಾಗಬಹುದು. ಸತ್ವಯುತ, ಶಕ್ತಿಯುತ ಆಹಾರದಿಂದ ರೋಗಿಯ ಆರೈಕೆ ಮಾಡಬೇಕು. ರೋಗಿಗೆ ಧೈರ್ಯ ಹೇಳಿ ಭಯ, ಭೀತಿ, ಆತಂಕಗಳನ್ನು ದೂರ ಮಾಡಬೇಕು.

ಪ್ರತಿಬಂಧಕೋಪಾಯಗಳು

ಪ್ರಕ್ಷಾಲನಾತಹಿ ಪಂಕಸ್ಯ ದೂರಾದ ಸ್ಪರ್ಶನಂವರಂ” ಎಂಬುದು ಡೆಂಗು ಜ್ವರದಲ್ಲಂತೂ ನೂರಕ್ಕೆ ನೂರು ಸತ್ಯ.

೧) ವಾಹಕಗಳ ನಿಯಂತ್ರಣ (ವೆಕ್ಟರ್ ಕಂಟ್ರೋಲ್): ಡೆಂಗು ಜ್ವರಕ್ಕೆ ಸೂಕ್ತವಾದ ಲಸಿಕೆ ಇಲ್ಲ. ಹೀಗಾಗಿ ಏಡಿಸ್ ಜಾತಿಯ ಸೊಳ್ಳೆಗಳನ್ನು ಸಂಹರಿಸದ ಹೊರತು ಡೆಂಗು ಜ್ವರಕ್ಕೆ ವಿದಾಯ ಕೋರುವುದು ಅಸಾಧ್ಯ. ಈ ಸೊಳ್ಳೆಗಳು ಮಳೆಗಾಲದ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ ವ್ಯಾಪಕವಾಗಿರುತ್ತದೆ. ಈ ಕಾಲದಲ್ಲಿ ಏಡಿಸ್ ಸೊಳ್ಳೆ ಹೆಚ್ಚಾಗದಂತೆ ಖಾಲಿ ಡಬ್ಬಿ, ಬಾಟಲಿ, ತೆಂಗಿನ ಕರಟ, ಮರದ ಪೊಟರೆ, ಮೊಟ್ಟೆಚಿಪ್ಪುಗಳಲ್ಲಿ, ಟ್ಯೂಬು, ಟಾಯರ್‌ಗಳಲ್ಲಿಯ ನೀರಿನಲ್ಲಿ ಸೊಳ್ಳೆ ಸಂತತಿ ಹೆಚ್ಚಾಗದಂತೆ ನೋಡಿಕೊಳ್ಳಬೇಕು.

ವಾಸಸ್ಥಳದ ಸುತ್ತ ಮುತ್ತ ನೀರು ನಿಲ್ಲದಂತೆ ನಿಗಾವಹಿಸುವುದು. ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದು. ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ. ಒಳಚರಂಡಿ ಯೋಜನೆಯಿಂದ ನೈರ್ಮಲ್ಯ ಕಾಪಾಡುವುದು. ಸೊಳ್ಳೆಮರಿಗಳ ನಾಶಪಡಿಸಲು ಆರ್ಗಾನೊ ಫಾಸ್ಪರಸ್ ಕ್ರಿಮಿನಾಶಕ ಮುಂತಾದುವನ್ನು ಬಳಸುವುದು. ಇದು ಸಾಂಕ್ರಾಮಿಕತೆ ತಡೆಗಟ್ಟುವಲ್ಲಿ ಹೆಚ್ಚು ಪ್ರಯೋಜನಕಾರಿ. ಆದರೆ, ಸಾಂಕ್ರಾಮಿಕತೆ ಆಗಲೆ ಸ್ಫೋಟಗೊಂಡಿದ್ದಲ್ಲಿ, ಇದರ ಬಳಕೆಯಿಂದ ತ್ವರಿತ ಫಲಾಪೇಕ್ಷೆಯಾಗಲಾರದು. ಸಾಂಕ್ರಾಮಿಕತೆ ಸ್ಫೋಟಗೊಂಡಾಗ ರೋಗ ಪ್ರಸಾರಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ ಕೀಟನಾಶಕಗಳ ಸಿಂಪರಣೆ, ಧೂಳೀಕರಣ ಉಪಯುಕ್ತ. ಇದಕ್ಕಾಗಿ ಮೆಲಾಥಿಯಾನ್ ಅಥವಾ ಸುಮಿಥಿಯಾನ್ ಬಳಸಬೇಕು. ಮನೆಯ ಬಾಗಿಲು ಮತ್ತು ಕಿಟಕಿಗಳಿಗೆ ಸೊಳ್ಳೆಗಳು ಒಳನುಗ್ಗದಂತೆ ಜಾಲರಿಗಳನ್ನು ಹಚ್ಚಬೇಕು.

೨) ವೈಯಕ್ತಿಕ ರಕ್ಷಣೆ: ಮಲಗುವಾಗ ಸೊಳ್ಳೆ ಪರದೆಯನ್ನು ಬಳಸುವುದು. ಮೈಗೆ ಸೊಳ್ಳೆ ನಿರೋಧಕ ಮುಲಾಮನ್ನು ಹಚ್ಚಿ ಕೊಳ್ಳುವುದು. ಘಾಟು ಪದಾರ್ಥಗಳನ್ನು ಬಳಸಿ ಸೊಳ್ಳೆಗಳನ್ನು ಓಡಿಸುವುದು. ಈ ರೋಗಕ್ಕೆ ರಕ್ಷಣೆ ನೀಡುವ ಲಸಿಕೆ ಇಷ್ಟರಲ್ಲಿ ಸಿದ್ಧವಾಗಲಿದೆ ಎಂದು ಸಂಶೋಧಕರು ಹೇಳಿದ್ದಾರೆ. ಲಸಿಕೆ ಆವಿಷ್ಕಾರಗೊಂಡಲ್ಲಿ ಸಾಮೂಹಿಕವಾಗಿ ಲಸಿಕೆ ಹಾಕಿಸಿಕೊಳ್ಳಲು ಸಹಕರಿಸುವುದು.

೩) ಆರೋಗ್ಯ ಶಿಕ್ಷಣ: ಪರಿಸರ ನೈರ್ಮಲ್ಯ, ವೈಯಕ್ತಿಕ ನೈರ್ಮಲ್ಯ, ರೋಗದ ಬಗ್ಗೆ ತಿಳುವಳಿಕೆ ನೀಡುವ ಸಲು ವಾಗಿ ಜನರಿಗೆ ಆರೋಗ್ಯ ಶಿಕ್ಷಣ ನೀಡು ವುದು. ಇದಕ್ಕಾಗಿ ಲಭ್ಯವಿರುವ ಎಲ್ಲ ಸಮೂಹ ಮಾಧ್ಯಮಗಳನ್ನು ಬಳಸಿಕೊಂಡು ಜನಜಾಗೃತಿ ಉಂಟು ಮಾಡುವುದು. ನಾವು ಪರಿಸರದ ಸ್ವಚ್ಛತೆಗೆ ಲಕ್ಷ್ಯವಹಿಸಿದಲ್ಲಿ ಪರಿಸರ ನಮಗೆ ಸ್ವಾಸ್ಥ್ಯದ ಭಾಗ್ಯವನ್ನು ದಯಪಾಲಿಸುತ್ತದೆ.

ತಳಿವಿಜ್ಞಾನ ಪಿತಾಮಹ ಗ್ರೆಗೊರಿ ಯೋಹನ್ ಮೆಂಡಲ್

ಸಾತನೂರು ದೇವರಾಜ್
೯೯೨, ೯ನೇ ಮುಖ್ಯರಸ್ತೆ,
ಮೊದಲನೆಯ ಅಡ್ಡ ರಸ್ತೆ,
ವಿವೇಕಾನಂದನಗರ, ಮೈಸೂರು-೫೭೦ ೦೦೭

ನಾನೇಕೆ ಅಪ್ಪ-ಅಮ್ಮನಂತೆ! ಅಥವಾ ಸಿಂಹದ ಹೊಟ್ಟೆಯಲ್ಲಿ ನರಿ ಹುಟ್ಟುವುದಿಲ್ಲವೇಕೆ? ಈ ಮೂಲಭೂತ ಪ್ರಶ್ನೆಗಳಿಗೆ ವೈಜ್ಞಾನಿಕ ಉತ್ತರ ಪಡೆಯುವ ದಿಶೆಯಲ್ಲಿ ಮೆಂಡಲ್ ನಿರ್ವಹಿಸಿದ ಪಾತ್ರ ಅವಿಸ್ಮರಣೀಯ.

ಆಹಾರೋತ್ಪಾದನೆಯ ಕ್ರಾಂತಿಗೆ ನಾಂದಿ ಹಾಡಿದ ಮಹಾವಿಜ್ಞಾನಿ ಗ್ರೆಗೊರಿ ಯೋಹನ್ ಮೆಂಡಲ್ (೧೮೨೨-೮೪). ಮೆಂಡಲ್ ಪ್ರತಿಪಾದಿಸಿರುವ ತಳಿವಿಜ್ಞಾನದ ವೈಜ್ಞಾನಿಕ ಸಂಗತಿ ಅರಿವಿಲ್ಲದಿದ್ದರೂ ಆತನ ಹೆಸರು ಗೊತ್ತಿಲ್ಲದವರು ವಿರಳವೆಂದೇ ಹೇಳಬಹುದು. ಹದಿನೆಂಟನೇ ಶತಮಾನದ ಮಧ್ಯದ ಅವಧಿಯಲ್ಲಿ ತಳಿವಿಜ್ಞಾನ ಎಂದರೇನೆಂದು ತಿಳಿದಿರಲಿಲ್ಲ. ತಳಿ ವಿಜ್ಞಾನದ ರೂಪರೇಶೆಗಳನ್ನು ನಮ್ಮೆಲ್ಲರಿಗೂ ಪರಿಚಯಿಸಿಕೊಟ್ಟು ತಳಿವಿಜ್ಞಾನವನ್ನು ಹುಟ್ಟು ಹಾಕಿದ ಮಹಾಪುರುಷನೇ ಮೆಂಡಲ್.

ಆಸ್ಟ್ರಿಯಾ ಹಸುರು ಸಸ್ಯವರ್ಗದಿಂದ ಕೂಡಿದ್ದು ಸಂವೃದ್ಧಿಯಿಂದ ತುಂಬಿ ತುಳುಕುತ್ತಿದ್ದ ರಾಷ್ಟ್ರ. ಆ ರಾಷ್ಟ್ರದ ಹೆಂಜೆಂಡಾರ್ಫ್ ಎಂಬ ಹಳ್ಳಿಯೊಂದರಲ್ಲಿ ೧೮೨೨ನೇ ಇಸವಿಯ ಜುಲೈ ತಿಂಗಳ ೨೨ನೇ ದಿನಾಂಕದಂದು ಮೆಂಡಲ್ ಜನಿಸಿದ.

ಮೆಂಡಲ್‌ನ ತಂದೆ ವೃತ್ತಿಯಲ್ಲಿ ಹಣ್ಣಿನ ವ್ಯಾಪಾರಿ. ಆದರೆ ಇತರ ವ್ಯಾಪಾರಿಗಳಂತೆ ಈತ ಬರೀ ಹಣ್ಣುಗಳನ್ನು ವ್ಯಾಪಾರ ಮಾಡುವುದರಲ್ಲಿ ಮಾತ್ರ ಆಸಕ್ತಿ ಇಟ್ಟುಕೊಂಡಿರಲಿಲ್ಲ. ಮಾರಾಟದ ಜೊತೆಗೆ ಹಣ್ಣಿನ ಕೃಷಿಯನ್ನು ಸಹ ಕೈಗೊಂಡಿದ್ದ. ಬಾಲಕನಾಗಿದ್ದಾಗಲೇ ಮೆಂಡಲ್ ಹಣ್ಣಿನ ಗಿಡಗಳಿಗೆ ಕಸಿ ಕಟ್ಟುವಿಕೆಯ ತಂತ್ರವನ್ನು ತಂದೆಯಿಂದ ಕಲಿತಿದ್ದ. ಮೆಂಡಲ್‌ನ ತಾಯಿಯ ಸಂಬಂಧಿ ದೊಡ್ಡಪ್ಪ ಆ ಹಳ್ಳಿಯಲ್ಲಿ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೋಸ್ಕರ ಖಾಸಗಿ ಶಾಲೆ ತೆರೆದಿದ್ದ. ಬಾಲ್ಯದಲ್ಲಿ ಮೆಂಡಲ್ ಚುರುಕಾಗಿದ್ದನಲ್ಲದೇ ಭರವಸೆ ಮೂಡಿಸುವ ವಿದ್ಯಾರ್ಥಿಯಾಗಿದ್ದ. ಇದರಿಂದಾಗಿ ಈತನ ವಿದ್ಯಾಭ್ಯಾಸಕ್ಕಾಗಿ ತಂದೆ ಹೆಚ್ಚಿನ ವೆಚ್ಚ ಭರಿಸಬೇಕಾಯಿತು. ವಿದ್ಯಾಭ್ಯಾಸ ಮುಗಿದ ನಂತರ ಬ್ರೌನ್ ಪಟ್ಟಣದ ಚರ್ಚ್ ಒಂದರಲ್ಲಿ ಪಾದ್ರಿಯಾಗಿ ೧೮೪೩ರಲ್ಲಿ ಸೇರಿದ. ಯೋಹನ್

ಎಂಬುದು ಬ್ಯಾಪ್ಟಿಸ್ಮ್‌ದ ಹೆಸರು. ಪಾದ್ರಿಯಾಗಿ ಸೇರಿಕೊಂಡ ನಂತರ ಗ್ರೆಗರ್ ಎಂಬ ಹೆಸರು ಮೆಂಡಲ್‌ಗೆ ಸೇರಿಕೊಂಡಿತು. ಚರ್ಚ್ ಆಡಳಿತ ಉನ್ನತ ವಿದ್ಯಾಭ್ಯಾಸಕ್ಕೆಂದು ವಿಯೆನ್ನಾ ವಿಶ್ವವಿದ್ಯಾಲಯಕ್ಕೆ ಮೆಂಡಲ್‌ನನ್ನು ನಿಯೋಜಿಸಿತು. ಉನ್ನತ ವ್ಯಾಸಂಗ ಮುಗಿದ ನಂತರ ಬ್ರೌನ್ ಪಟ್ಟಣದ ಶಾಲೆಯೊಂದರಲ್ಲಿ ಅಧ್ಯಾಪಕನಾಗಿ ಸೇವೆ ಸಲ್ಲಿಸಿದ. ಮೆಂಡಲ್ ಇತರ ಸಾಮಾನ್ಯ ಶಿಕ್ಷಕರಂತಲ್ಲ. ಬೋಧನೆಯ ವಿಷಯದಲ್ಲಿ ಅಪ್ರತಿಮ. ಅಲ್ಲದೇ ಅದಮ್ಯ ಆಸಕ್ತಿ ಕೂಡ ಇಟ್ಟುಕೊಂಡಿದ್ದ. ಇದರಿಂದಾಗಿ ಆ ಕಾಲದಲ್ಲಿ ಉತ್ತಮ ಶಿಕ್ಷಕನಿಗೆ ಇರಬೇಕಾದ ಲಕ್ಷಣಗಳೆಲ್ಲಾ ಮೆಂಡಲ್‌ನಲ್ಲಿ ಮೇಳೈಸಿದ್ದವು. ಶಿಕ್ಷಕ ವೃತ್ತಿಯಲ್ಲಿದ್ದಾಗ ಶ್ರದ್ಧೆಯಿಂದ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುತ್ತಿದ್ದ. ತನ್ನ ಅಮೂಲ್ಯ ಸಮಯವನ್ನು ಬೋಧನೆಗೆ ಮೀಸಲಿಟ್ಟಿದ್ದ. ಇಂದು ವಿಶ್ವಮಟ್ಟದಲ್ಲಿಯೇ ಮೆಂಡಲ್‌ನಿಗೆ ಇರುವ ಗೌರವಕ್ಕೆ ಶಿಕ್ಷಕ ವೃತ್ತಿಯಲ್ಲಿದ್ದಾಗ ಸಲ್ಲಿಸಿದ್ದ ವಿಶಿಷ್ಟ ಸೇವೆಯೇ ಮೂಲ ಕಾರಣವೆಂದರೆ ತಪ್ಪಾಗಲಾರದು.

ಚರ್ಚ್ ಮುಂದಿನ ಖಾಲಿ ಸ್ಥಳದಲ್ಲಿ ವಿಶಾಲವಾದ ತೋಟವೊಂದಿತ್ತು. ಬಾಲ್ಯದಲ್ಲಿ ಹಣ್ಣಿನ ಗಿಡಗಳಿಗೆ ಕಸಿ ಮಾಡುವಿಕೆಯ ತಂತ್ರ ಮೆಂಡಲ್ ಹೇಗೂ ಕಲಿತಿದ್ದನಷ್ಟೆ. ಚರ್ಚ್ ಮುಂಭಾಗದ ತೋಟದಲ್ಲಿ ಸಸ್ಯಗಳ ನಡವಳಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವಲೋಕಿಸಲು ಮೆಂಡಲ್ ಮುಂದಾದ.

೧೮೫೭ರಲ್ಲಿ ಬಟಾಣಿ ಗಿಡಗಳ ಮೇಲೆ ತಳಿವಿಜ್ಞಾನ ಪ್ರಯೋಗವನ್ನು ಮೆಂಡಲ್ ಪ್ರಾರಂಭಿಸಿದ್ದ. ಸುಮಾರು ಎಂಟು ವರ್ಷಗಳ ದೀರ್ಘ ಕಾಲವವರೆಗೆ ಈ ಪ್ರಯೋಗಗಳನ್ನು ಮುಂದುವರಿಸಿದ. ಈ ಅವಧಿಯಲ್ಲಿ ಸುಮಾರು ಹತ್ತು ಸಾವಿರ ಬಟಾಣಿ ಗಿ
ಗಳನ್ನು ಬಿತ್ತಿ ಬೆಳೆದು ಅವುಗಳನ್ನು
ಅವಲೋಕಿಸುವುದರ ಮೂಲಕ ತಳಿವಿಜ್ಞಾನ
ದಲ್ಲಿ ಯಶಸ್ವಿಯಾದ. ೧೮೬೫ರಲ್ಲಿ ಬ್ರೌನ್
ಪಟ್ಟಣದ ಪ್ರಕೃತಿ ವಿಜ್ಞಾನದ ಸಂಸ್ಥೆಯಲ್ಲಿ
"ಸಸ್ಯ ತಳಿವಿಜ್ಞಾನದ ಪ್ರಯೋಗಗಳು"
ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದ.
ಈ ಪ್ರಯೋಗಗಳ ಬಗೆಗಿನ ಸುದೀರ್ಘ ವರದಿ
೧೮೬೬ರಲ್ಲಿ ಪ್ರಕಟವಾಯಿತು. ಮೆಂಡಲ್
ಸಿದ್ಧಪಡಿಸಿದ ಪ್ರಬಂಧ ಸಾಮಾನ್ಯ ಜನರಿ
ಗಾಗಿ ಸಿದ್ಧಪಡಿಸಿದ್ದಾಗಿತ್ತು. ವೈಜ್ಞಾನಿ
ನಿಯತಕಾಲಿಕೆಗೆಂದಲ್ಲ. ಬಹುಶಃ ಈ ಕಾರಣ
ದಿಂದಲೇನೋ ಮೆಂಡಲ್‌ನ ಪ್ರಯೋಗ
ವಿಜ್ಞಾನಿಗಳ ಮನಮುಟ್ಟಲಿಲ್ಲ.

ಮೆಂಡಲ್‌ನ ಪ್ರಯೋಗ ೧೮೬೫ರಲ್ಲಿ
ಪ್ರಕಟಗೊಂಡ ನಂತರ ಈ ಸಂಗತಿ ವಿಶ್ವದ
ಅನೇಕ ವಿಜ್ಞಾನಿಗಳ ಗಮನಕ್ಕೆ ಬಂತು.
ಆದರೂ ಯಾವೊಬ್ಬ ವಿಜ್ಞಾನಿಯೂ ಅದರ
ಬಗ್ಗೆ ಚಕಾರವೆತ್ತಲಿಲ್ಲ. ಮೆಂಡಲ್ ಒಬ್ಬ
ಕ್ರಿಯಾಶೀಲ ವ್ಯಕ್ತಿ. ಅಲ್ಲದೇ ಕಷ್ಟಪಟ್ಟು
ದುಡಿಯುವ ಶ್ರಮಜೀವಿ ಆಗಿದ್ದ. ತನ್ನ
ಹೆಚ್ಚಿನ ಅವಧಿಯನ್ನು ಬೋಧಿಸುವುದ
ಕ್ಕೆಂದು ಮೀಸಲಿಟ್ಟಿದ್ದ. ಇದೇ ಅಲ್ಲದ
ತೋಟದಲ್ಲಿಯ ಸಸ್ಯಗಳ ವೀಕ್ಷಣೆಗೆ ಹೆಚ್ಚಿನ
ಸಮಯವನ್ನು ವ್ಯಯಿಸುತ್ತಿದ್ದ. ಬಟಾಣಿ
ಗಿಡಗಳನ್ನು ವೀಕ್ಷಿಸುವುದರ ಜೊತೆಗೆ ಜೇನು
ಹುಳುಗಳ ಅನುವಂಶೀಯತೆಯ ಬಗ್ಗೆ
ಆಸಕ್ತಿ ಇಟ್ಟುಕೊಂಡವನಾಗಿದ್ದ. ವಿವಿಧ
ಭೌಗೋಳಿಕ ಸನ್ನಿವೇಶಗಳಿಂದ ರಾಣಿಜೇನು
ಗಳನ್ನು ಸಂಗ್ರಹಿಸಿ ಸ್ಥಳೀಯ ಪ್ರದೇಶಗಳಲ್ಲಿ
ದೊರೆಯುವ ಜೇನುಗಳ ಜೊತೆ ಸಂತಾನಾಭಿ

ದ್ಧಿ ನಡೆಸಿ ದೊರಕಿದ ಮಾಹಿತಿಗಳನ್ನು
ಗ್ರಹಿಸಿ ಇಟ್ಟುಕೊಂಡಿದ್ದ. ಮೆಂಡಲ್
ಯುವುದಕ್ಕೆ ಕೆಲದಿವಸಗಳ ಮುಂಚಿತ
ಗಿ ಅರೆಪ್ರಜ್ಞಾವಸ್ಥೆಯಲ್ಲಿದ್ದಾಗ ಜೀನು
ಳುಗಳ ಅನುವಂಶೀಯತೆಗೆ ಸಂಬಂಧಪಟ್ಟ
ಖಲೆಗಳು ನಾಶಗೊಂಡಿರಬಹುದೆಂದು
ಭಿಪ್ರಾಯಪಡಲಾಗಿದೆ.

ಬಟಾಣಿ ಗಿಡದ ಮೇಲಿನ ಸಂಶೋಧನೆಯ
ಲಿತಾಂಶ ಹೊರಬಿದ್ದನಂತರ ಮೆಂಡಲನಿಗೆ
ಂಶೋಧನೆಯಲ್ಲಿ ಉಜ್ವಲ ಅವಕಾಶಗಳು
ವಗಿಬಂದಿರಬಹುದೆಂದು ಊಹಿಸುವುದು
ಹಜವೇ. ಆದರೆ ಹಾಗೆ ಆಗದೇ ಬೇರೇನೋ
ಡೆದುಹೋಯಿತು ಅಸ್ಟ್ರಿಯಾ ದೇಶದಲ್ಲಿ
ಡೆದ ದುರಂತಮಯ ಘಟನೆಯಿಂದಾಗಿ
ೀವವಿಜ್ಞಾನ ಕ್ಷೇತ್ರದಲ್ಲಿ ಸಾಧಿಸಬೇಕಾದ
ಾರ್ಯ ಮುಂದಕ್ಕೆ ನೂಕಲ್ಪಟ್ಟಿತು. ೧೮೭೪
ಲ್ಲಿ ಅಸ್ಟ್ರಿಯಾ ಸರ್ಕಾರ ಹೊರಡಿಸಿದ
ವೈಜ್ಞಾನಿಕ ಕಾಯಿದೆ, ವೈಜ್ಞಾನಿಕ
ಪ್ರಗತಿಗೆ ಅಡ್ಡಿಯಾಯಿತು! ೧೮೭೪ರಲ್ಲಿ
ೊರಡಿಸಿದ ಹೊಸ ಕಾಯಿದೆಯಿಂದಾಗಿ
ಂದು ನಿರ್ದಿಷ್ಟ ಜನಾಂಗಕ್ಕೆ ಸಂಬಂಧಪಟ್ಟ
ರ್ಮಸಂಸ್ಥೆಗಳಿಗೆ ಆಸ್ತಿ ತೆರಿಗೆ ಹೇರ
ಾಯಿತು. ಈ ಕಾಯಿದೆ ಅವೈಜ್ಞಾನಿಕವೇ
ಲ್ಲದೆ ನ್ಯಾಯವಲ್ಲದ್ದು ಎಂಬ ತೀರ್ಮಾನಕ್ಕೆ
ಮೆಂಡಲ್ ಬಂದುದೇ ಅಲ್ಲದೆ ತನ್ನ
ತಿಭಟನೆಯನ್ನೂ ವ್ಯಕ್ತಪಡಿಸಿದ. ಇತರ
ಾದ್ರಿಗಳಂತೆ ಮೆಂಡಲ್ ಹಿಂದೂ ಮುಂದೂ
ೋಡದೆ ಯಾರ ಮರ್ಜಿ, ಮುಲಾಜಿಗೂ
ಳಗಾಗದೆ ತನ್ನ ಪ್ರತಿಭಟನೆ ವ್ಯಕ್ತಪಡಿ
ದ. ಕಾನೂನಿನ ಪ್ರಕಾರ ಪ್ರಜೆಗಳೆಲ್ಲರೂ
ಂದೆ. ಆದ್ದರಿಂದ ಆಸ್ತಿ ತೆರಿಗೆಯನ್ನು
ೇರುವುದಾದರೆ ಎಲ್ಲ ಜನಾಂಗಕ್ಕೆ ಸಂಬಂಧ
ಟ್ಟ ಧರ್ಮಸಂಸ್ಥೆಗಳಿಗೆ ಹೇರಿ ಎಂದು ವಾದಿಸಿದ. ಮೊದಮೊದಲು ಹಲವಾರು ಪಾದ್ರಿಗಳು ಒಕ್ಕೊರಳಿನಿಂದ ಪ್ರತಿಭಟಿಸಿದರು. ಆದರೆ ಕೊನೆಕೊನೆಗೆ ಹಲವಾರು ಪಾದ್ರಿಗಳು ಸರ್ಕಾರದ ಕಾನೂನಿಗೆ ಮಣಿದರು. ಮೆಂಡಲನಂತೂ ತನ್ನ ಪ್ರತಿಭಟನೆಯನ್ನು ಯಾರಿಗೂ ಅಂಜದ ದೃಢ ಮನಸ್ಸಿನಿಂದ ಪ್ರತಿಭಟಿಸಿದ. ಇದರಿಂದಾಗಿ ಸರ್ಕಾರದ ವೈರವನ್ನು ಕಟ್ಟಿಕೊಳ್ಳುವುದರ ಜೊತೆಗೆ ಭಾರಿ ತೊಂದರೆಯನ್ನೇ ಎದುರಿಸಬೇಕಾಯಿತು.

ಮೊದಲಿನ ಜೀವಿತ ಅವಧಿಯ ಹತ್ತು ವರ್ಷಗಳಂತೂ ನಿರಾಸೆ ಮತ್ತು ಕಹಿಯಿಂದ ಕೂಡಿದ ದಿವಸಗಳಾಗಿದ್ದವು. ಬಾಲ್ಯ ಮತ್ತು ಯೌವನದ ದಿವಸಗಳಲ್ಲಿ ಕ್ರಿಯಾಶೀಲ, ಸ್ನೇಹಮಯಿಯಾಗಿದ್ದ ಮೆಂಡಲ್ ಸಂಶಯ ಪ್ರವೃತ್ತಿಯ ಪಿಶಾಚಿಗೆ ಬಲಿಯಾದದ್ದು ಮಾತ್ರ ಈ ಕ್ಷೇತ್ರಕ್ಕಾದ ಹಾನಿಯೆ ಸರಿ. ಮೆಂಡಲ್‌ನ ಜೀವಮಾನದಲ್ಲಿ ಈ ದುರ್ಘಟನೆ ನಡೆಯದಿದ್ದರೆ, ಆತನಿಂದ ತಳಿವಿಜ್ಞಾನಕ್ಕೆ ಸಂಬಂಧಿಸಿದ ಅದೆಷ್ಟೋ ಸಂಶೋಧನೆ ಹೊರಬೀಳುತ್ತಿತ್ತು. "ಅಂದಾಜು ಮಾಡುವುದು ಅಸಾಧ್ಯ ಕೆಲಸವೇ ಸರಿ. ಈ ದೃಷ್ಟಿಯಿಂದ ಮೆಂಡಲ್‌ಗೆ ಒದಗಿದ ದುರ್ಗತಿಯು ಮಾತ್ರ ಬೆಲೆಕಟ್ಟಲಾಗದ ನಷ್ಟವೇ ಸರಿ.

ಪ್ರಪಂಚಾದ್ಯಂತ ವಿಜ್ಞಾನಿಗಳ ತಂಡ ಮೆಂಡಲ್ ಹಾಕಿಕೊಟ್ಟ ದಾರಿಯಲ್ಲಿಯೇ ಸಾಗಿದರು. ಮೆಂಡಲ್ ಹುಟ್ಟು ವೀಕ್ಷಣೆಗಾರ. ಸಾವಿರಾರು ಬಟಾಣಿ ಬೀಜಗಳನ್ನು ಎಣಿಕೆ ಮಾಡುವುದರಲ್ಲಿ ಎಂದೂ ಸಹನೆ ಕಳೆದುಕೊಳ್ಳಲಿಲ್ಲ. ಇದೇ ಅಲ್ಲದೆ ಅವನ ಸಾಮರ್ಥ್ಯವೂ ಸಹ ಕುಗ್ಗಲಿಲ್ಲ. ವಾತಾ

ವರಣದ ವಾಯುಗುಣವನ್ನು ದಾಖಲಿಸಿ ಪ್ರಕಟಿಸುತ್ತಿದ್ದ. ಈ ಹವ್ಯಾಸಗಳ ಜೊತೆಗೆ ಮೆಂಡಲ್ ಒಬ್ಬ ಒಳ್ಳೆಯ ವ್ಯಾಪಾರಿ ಕೂಡ. ಬ್ರೌನ್ ಪಟ್ಟಣದ ಬ್ಯಾಂಕ್ ಒಂದರ ಅಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದ್ದ. ಚದುರಂಗ ಆಡುವುದರಲ್ಲಿಯಂತೂ ನಿಪುಣ. ತನ್ನ ಕುಟುಂಬದ ಸದಸ್ಯರುಗಳ ಗುಣಲಕ್ಷಣಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಲೀಲಾಜಾಲವಾಗಿ ಬಿಡಿಸುತ್ತಿದ್ದ. ತನ್ನ ಹುಟ್ಟೂರಿನಲ್ಲಿ ಅಗ್ನಿಶಾಮಕ ದಳವನ್ನೂ ಸಹ ಸಂಘಟಿಸಿದ್ದ. ಇವನ ಸಮಕಾಲೀನ ವಿಜ್ಞಾನಿಗಳು ಮೆಂಡಲ್‌ನ ಸಂಶೋಧನೆಗೆ ವೈಜ್ಞಾನಿಕ ಮನ್ನಣೆ ಕೊಡದೆ ತಿರಸ್ಕರಿಸಿದರು. ಇದರಿಂದಾಗಿ ಮೆಂಡಲ್ ನಿರಾಶನಾದ. ಆ ಕಾಲದಲ್ಲಿ ಪ್ರಖ್ಯಾತ ವಿಜ್ಞಾನಿ ಎನಿಸಿದ್ದ ನೆಗ್ಗಲಿಯೂ ಗಮನ ಕೊಡಲಿಲ್ಲ. ಮೆಂಡಲ್ ಪ್ರಯೋಗದ ಫಲಿತಾಂಶವನ್ನು ವಿಶ್ವವಿಖ್ಯಾತ ತಜ್ಞರಲ್ಲಿ ಕಳುಹಿಸಿದ ಸಂಶೋಧನೆಯ ಪತ್ರಿಕೆಯನ್ನು ವಿಖ್ಯಾತ ವಿಜ್ಞಾನಿಗಳು ಬಹುಶಃ ಬಿಚ್ಚಿ ನೋಡಲಿಲ್ಲ.

ಅನುವಂಶೀಯತೆಗೆ ಸಂಬಂಧಪಟ್ಟಂತೆ ಅಧ್ಯಯನ ಮಾಡಿದವರಲ್ಲಿ ಮೆಂಡಲ್ ಮೊದಲಿಗನಂತೂ ಅಲ್ಲವೇ ಅಲ್ಲ. ಮೆಂಡಲ್ ನಿಗಿಂತ ಮುಂಚಿತವಾಗಿ ಕ್ನೈಟ್ ೧೭೯೯ ರಲ್ಲಿಯೂ, ಗಾಸ್ ೧೮೨೪ ರಲ್ಲಿಯೂ ಪ್ರಯತ್ನಿಸಿ ಸೋಲು ಅನುಭವಿಸಿದರು. ಮೆಂಡಲ್ ಮಾತ್ರ ಈ ಕೆಲಸದಲ್ಲಿ ಜಯಶೀಲನಾದುದಾದರೂ ಹೇಗೆ ಎನ್ನುವ ಪ್ರಶ್ನೆ ಏಳುವುದು ಸಹಜವೇ ಸರಿ.

ಒಬ್ಬ ಸಾಮಾನ್ಯ ವ್ಯಕ್ತಿ ವಿಜ್ಞಾನಿಯಾಗಿ ರೂಪಿತವಾಗಬೇಕಾದರೆ ಅತ್ಯವಶ್ಯವಾಗಿ ಇರಲೇಬೇಕಾದ ವಿಶಿಷ್ಟ ಸಾಮರ್ಥ್ಯಗಳೂ ಮೆಂಡಲ್‌ನಲ್ಲಿದ್ದವು. ಪ್ರಕೃತಿಯನ್ನು ಪ್ರಶ್ನಿಸುವ ಮತ್ತು ಪ್ರಕೃತಿಯಿಂದ ಪಡೆದ ಉತ್ತರವನ್ನು ವಿಶ್ಲೇಷಿಸುವ ಸಾಮರ್ಥ್ಯ ಮೆಂಡಲ್‌ನಲ್ಲಿದ್ದವು. ಇವುಗಳ ಜೊತೆಗೆ ತಾಳ್ಮೆ, ಕಷ್ಟಗಳನ್ನು ಎದುರಿಸುವ ವಿಶಿಷ್ಟ ಸಾಮರ್ಥ್ಯವಿತ್ತು. ಈ ಮೇಲಿನ ಗುಣಲಕ್ಷಣಗಳ ಜೊತೆಗೆ ಅಸಾಮಾನ್ಯವಾದ ಬುದ್ಧಿವಂತಿಕೆಯಿಂದಾಗಿ ಮೆಂಡಲ್ ವಿಜ್ಞಾನಿಯಾಗಿ ರೂಪಿತನಾದ.

ಮೆಂಡಲ್ ಬಟಾಣಿ ಗಿಡಗಳ ಮೇಲೆ ನಡೆಸಿದ ಪ್ರಯೋಗಗಳ ಫಲಿತಾಂಶವನ್ನು ಮಾತ್ರ ವಿಶ್ಲೇಷಿಸಿದ. ಆದರೆ ಯಾವ ನಿಯಮಗಳನ್ನೂ ಪ್ರತಿಪಾದಿಸಿರಲಿಲ್ಲ. ಇವನ ಫಲಿತಾಂಶಗಳು ೧೯೦೦ ರವರೆಗೂ ಅಜ್ಞಾತವಾಗಿದ್ದವು. ೧೯೦೦ರಲ್ಲಿ ಯುಗೋ ಡೆವ್ರಿಸ್, ಕಾರೆನ್ಸ್ ಸಸ್ಯವಿಜ್ಞಾನಿಗಳು ಈ ಪ್ರಯೋಗಗಳನ್ನು ಕೂಲಂಕುಷವಾದ ಅಧ್ಯಯನದ ನಂತರ ಅನುವಂಶೀಯತೆಗೆ ಸಂಬಂಧಿಸಿದ ನಿಯಮಗಳನ್ನು ರೂಪಿಸಿದರು. ಇಂದು ಈ ನಿಯಮಗಳು ಮೆಂಡಲ್‌ನ ನಿಯಮಗಳೆಂದು ವಿಶ್ವದಾದ್ಯಂತ ಪ್ರಖ್ಯಾತವಾಗಿವೆ.

ಮೆಂಡಲ್‌ನ ಕೊನೆ ದಿನಗಳಂತೂ ಬಹಳ ಕಠಿಣದಿಂದ ಕೂಡಿರುವುದರ ಜೊತೆಗೆ ದುಃಖದಿಂದ ಕೂಡಿತ್ತು. ವೈಜ್ಞಾನಿಕ ದೃಷ್ಟಿಯಿಂದ ಯಾವ ರೀತಿಯಿಂದಲೂ ಫಲಪ್ರದ ದಿವಸಗಳಾಗಿರಲಿಲ್ಲ. ದೀರ್ಘ ಕಾಲವವರೆಗೆ ಅನಾರೋಗ್ಯದಿಂದ ನರಳಿ ಕೊನೆಗೆ ೧೮೮೪ರ ಜನವರಿ ೬ನೆಯ ದಿನಾಂಕದಂದು ಈ ಲೋಕವನ್ನು ತ್ಯಜಿಸಿದ.

ಎರಡು ಸಲ ಹುಟ್ಟಿದ ಮಗು

ಗ. ನಾ. ಭಟ್ಟ
೩. ೩೦, ೪ನೇ ಅಡ್ಡ ರಸ್ತೆ
ಗಂಗೋತ್ರಿ ಬಡಾವಣೆ, ಮೈಸೂರು-೯

ಗಂಡ ವೈಕ್‌ನ್ನು ಎಬ್ಬಿಸಲಿಚ್ಛಿಸದೆ ರೋಂಡ ಡೆನಿಸ್‌ಳು ನಿಶ್ಶಬ್ದಳಾಗಿ ಹಾಸಿಗೆಯಿಂದ ಈಚೆ ಬಂದು ಫ್ಲೋರಿಡಾದಲ್ಲಿರುವ ತಮ್ಮ ಲಿವಿಂಗ್ ರೂಮ್‌ನ್ನು ಸೇರಿಕೊಂಡಳು. ಅವರ ನಾಲ್ಕು ವರ್ಷದ ಮಗ ಕೋರೀ ಮತ್ತೊಂದು ಹಾಸಿಗೆಯಲ್ಲಿ ಗಾಢ ನಿದ್ದೆಯಲ್ಲಿದ್ದ. ಮೂವತ್ತೊಂದು ವರ್ಷದ ರೋಂಡಾ ಡೆನಿಸ್ ಆರಾಮ ಕುರ್ಚಿಯಲ್ಲಿ ಒರಗಿ ಹತ್ತಿರದಲ್ಲೆ ಇರುವ ಬೈಬಲ್‌ನ್ನು ಎತ್ತಿಕೊಂಡಳು. ಆ ತೆಳು ಶರೀರದ ಮಹಿಳೆ ನಾಲ್ಕು ತಿಂಗಳ ಗರ್ಭಿಣಿಯಾಗಿದ್ದ ಹೊಟ್ಟೆಯೊಳಗಿನ ಶಿಶುವಿನ ಮೃದುವಾದ ಒದೆಯನ್ನು ಅನುಭವಿಸತೊಡಗಿದ್ದಳು. ಅಂತೆಯೇ ಮೌನವಾದ ಪ್ರಾರ್ಥನೆಯೊಂದನ್ನು ಸಲ್ಲಿಸಿ ಮುಂಬರುವ ದಿನಗಳನ್ನು ಎದುರಿಸಲು ಧೈರ್ಯ ತಂದುಕೊಂಡಳು.

"ರೋಂಡಾಳ ಮಗು ಬದುಕಲಾರ"ದೆಂದು ಬೇರೆ ಡಾಕ್ಟರುಗಳು ಹೇಳಿದ್ದ ಮಾತನ್ನು ಅಷ್ಟು ಸುಲಭವಾಗಿ ನಂಬಲಾರದವಳಾಗಿದ್ದ ರೋಂಡ ಡೆನಿಸ್‌ಳು ೧೯೯೪ರ ಜನವರಿ ೧೦ ರಂದು ಗರ್ಭ ತಜ್ಞನೊಬ್ಬನನ್ನು ಭೇಟಿಯಾಗಿದ್ದಳು.

ಜನನ ಪೂರ್ವದಲ್ಲಿ ಮಾಡಿಸುವ ಪರೀಕ್ಷೆಗೆ ಸ್ವಲ್ಪ ದಿನಗಳ ಕೆಳಗೆ ಅವಳ ಪರೀಕ್ಷೆ ನಿಯತ ಕ್ರಮದಂತೆ ಆದಾಗ ಆಕೆ ಸಂತೋಷಪಟ್ಟಿದ್ದಳು. ಅದಕ್ಕೆ ಕಾರಣ ಅವಳು ಹೆಣ್ಣು ಮಗುವೊಂದಕ್ಕೆ ತಾಯಿಯಾಗುವವಳಿದ್ದಳು. ಆದರೆ 'ಅಲ್ಟ್ರಾಸೌಂಡ್' ಪರೀಕ್ಷೆಯ ನಂತರ ವೈದ್ಯರ ಮುಖ ಕಪ್ಪಿಟ್ಟಿತ್ತು. 'ಮಗು ಯಾವುದೋ ತೊಂದರೆಗೊಳಗಾಗಿದೆ'ಯೆಂದು ವೈದ್ಯರು ಮೆಲುದನಿಯಲ್ಲಿ ಹೇಳಿದ್ದರು. ಅದು ಏನೆಂದು ರೋಂಡಾ ಕೇಳಿದ್ದಕ್ಕೆ, ಡಾಕ್ಟರ್, ಮಗುವಿನ ಶರೀರದ ಯಾವುದೋ ಅವಯವ ರೋಗಕ್ಕೆ ಬಲಿಯಾಗಿದೆಯೆಂದು ಸೂಚಿಸಿದ್ದರು. ಕೂಡಲೇ ರೋಂಡಾ ಹಾಗೂ ಅವಳ ಗಂಡ ಮತ್ತೊಂದು ಕ್ಲಿನಿಕ್‌ಗೆ ಹೋದರು. ಅಲ್ಲಿಯೂ ಅವರು ನಿರಾಶೆಪಡುವಂತಾಯಿತು. ಮಗುವಿಗೆ ಬದುಕಲು ಅವಕಾಶ ತೀರಾ ಕಡಿಮೆಯಿದೆಯೆಂದು ಫಲಿತಾಂಶ ಬಂದಿತ್ತು.

"ಅವಳು ಗರ್ಭ ತೆಗೆಯಿಸಿಬಿಡುವುದು ಒಳ್ಳೆಯು"ದೆಂದು ಡಾಕ್ಟರ್ ಸೂಚಿಸಿದರು.

೧೯೯೫ರ ಜುಲೈ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ 'ಜಾನ್ ಪೆಕ್ಕನೆನ್' ಅವರ "ದಿ ಬೇಬಿ ಹು ವಾಸ್ ಬಾರ್ನ್ ಟ್ವೈಸ್" ಎಂಬ ಲೇಖನ.

ಅದು ಆಗದೆಂದೂ, ತಾನೆಂದೂ ಹಾಗೆ ಮಾಡಲಾರಳೆಂದೂ, ರೋಂಡಾ ಉತ್ತರಿಸಿದಳು.

ರೋಗದ ಮುನ್ನರಿವಿನಿಂದ ಸ್ತಂಭೀಭೂತಳಾದ ರೋಂಡಾ ವೈರ್‌ನ ಭುಜವನ್ನಾಶ್ರಯಿಸಿ ಆಸ್ಪತ್ರೆಯ ಕಾರ್ ಪಾರ್ಕ್‌ಗೆ ಹೋದಳು. ಮಕ್ಕಳನ್ನು ಹೆರುವುದು ರೋಂಡಾಳ ಕನಸಾಗಿತ್ತು. ಆರು ವರ್ಷಗಳ ಹಿಂದೆ ವೈರ್ ಈ ವಿಚಾರವನ್ನು ಪ್ರಸ್ತಾಪಿಸಿದಾಗ ಆಕೆ ಒಂದು ಡಜ಼ನ್ ಮಕ್ಕಳನ್ನು ಹೆರುವುದಾಗಿ ಹೇಳಿದ್ದಳು. ೧೯೮೯ರಲ್ಲಿ ಕೊರಿ ಹುಟ್ಟುವುದಕ್ಕೇ ಮೊದಲು ರೋಂಡಾ ಪೂರ್ಣಾವಧಿಯ ತಾಯ್ತನವನ್ನು ನಿರ್ವಹಿಸುವುದಕ್ಕಾಗಿ ತನ್ನ ಕೆಲಸಕ್ಕೆ ರಾಜೀನಾಮೆ ನೀಡಿದ್ದಳು. ಬೆಳೆಯುತ್ತಿರುವ ತನ್ನ ಕುಟುಂಬದ ರಕ್ಷಣೆಗಾಗಿ ವೈರ್ ತನ್ನ ಉದ್ಯೋಗಕ್ಕೆ ಸಂಬಂಧಿಸಿದಂತೆ ಹೆಚ್ಚು ಸಮಯ ದುಡಿಯಲಾರಂಭಿಸಿದ್ದ. ಪ್ರೀತಿ-ವಾತ್ಸಲ್ಯ, ಸಂತೋಷಗಳಿಂದ ಕೂಡಿದ ಅವರ ಮನೆ ಅಕ್ಕ-ಪಕ್ಕದ ಮನೆಯ ಮಕ್ಕಳಿಗೆ ಒಂದೆಡೆ ಕೂತು, ಕಲೆತು ಆಡುವ ಸ್ಥಳವಾಗಿತ್ತು.

ಆ ತರುಣ ದಂಪತಿಗಳು ಮಗುವಿನ ಜನನದಲ್ಲಿಯೇ ಮಗುವನ್ನು ಕಳೆದುಕೊಳ್ಳಬಹುದಾದ ದಾರುಣ ವ್ಯಥೆಯನ್ನನುಭವಿಸಿದರು. ಕಾರಲ್ಲಿ ಕೂತಿದ್ದ ರೋಂಡಾ ಗಂಡನ ಭುಜದ ಮೇಲೆ ತಲೆಯಿಟ್ಟು ಕೂಗಿಕೊಂಡಳು.

ನಾಲ್ಕು ವಾರಗಳಲ್ಲಿ ಅವಳು ಮತ್ತೊಂದು ಪರೀಕ್ಷೆ ಮಾಡಿಸಬೇಕಿತ್ತು. "ಅಷ್ಟು ದಿನಗಳವರೆಗೆ ನಾನು ಕಾಯಲಾರೆ" ಎಂದು ರೋಂಡಾ ವೈರ್‌ಗೆ ತಿಳಿಸಿದಳು. ಹೊಟ್ಟೆಯೊಳಗಿನ ಮಗುವಿಗೇನಾದರೂ ಆಗಿದ್ದಲ್ಲಿ ಆಗಲೇ ಏನಾದರೂ ಮುಂಜಾಗ್ರ ತೆಗೆದುಕೊಳ್ಳಬಹುದೆನ್ನುವುದು ಆಕೆಯ ಉದ್ದೇಶವಾಗಿತ್ತು.

೧೯೯೪ರ ಜನವರಿ ಆರರಂದು ಕೊನೆಯ ದಾಗಿ ರೋಂಡಾ ರೋಗನಿದಾನದ ಕಠಿಣ ಪರೀಕ್ಷೆಗೆ ಗುರಿಯಾದಳು. ಇದು ಡೈಫ್ರಾಗ್ಮ್ಯಾಟಿಕ್ ಹರ್ನಿಯಾ" ಎಂದು ಪ್ರಸೂತಿ ತಜ್ಞ ತಿಳಿಸಿದ. ಅಲ್ಲದೆ ಮಗುವಿನ ವಪೆಯಲ್ಲಿ ತೂತಾಗಿರುವುದಾಗಿಯೂ, ಹೊಟ್ಟೆಯಿಂದ ಸ್ನಾಯು ಮತ್ತು ಹೃದಯ ಗಹ್ವರ ಪ್ರತ್ಯೇಕಗೊಂಡಿರುವುದಾಗಿಯೂ ವಿವರಿಸಿದ. ಗರ್ಭಾಶಯದಲ್ಲುಂಟಾದ ಇಂತಹ ಹರ್ನಿಯಾ ಹೊಟ್ಟೆಯ ವಿವಿಧ ಭಾಗಗಳಾದ ಗುಲ್ಮ, ಕರುಳು, ಯಕೃತ್ತು ಮೊದಲಾದು ವನ್ನು ಹೃದಯಗಹ್ವರಕ್ಕೆ ಸಾಗಿಸಿ, ಅಲ್ಲಿ ತೇಲುವಂತೆ ಮಾಡುತ್ತದೆ ಮತ್ತು ಭ್ರೂಣ ಸರಿಯಾಗಿ ಬೆಳೆಯುವುದನ್ನು ತಡೆಯುತ್ತದೆ. ತಾಯಿಯ ಗರ್ಭಕೋಶದಲ್ಲಿದ್ದ ಮಗು ಗರ್ಭವೇಷ್ಟನದಿಂದ ಆಮ್ಲಜನಕ ವನ್ನು ಪಡೆಯುತ್ತದೆ. ಹೀಗಿದ್ದರೂ ಜನನದ ಸಂದರ್ಭದಲ್ಲಿ ಮಗು ಉಸಿರೆಳೆದು ಕೊಳ್ಳಲಾಗದೇ ಕಷ್ಟಪಡುತ್ತದೆ. ಇಂತಹ ಸಂದರ್ಭಗಳಲ್ಲಿ ಪ್ರತಿಶತ ಆರುವತ್ತರಷ್ಟು ಮಕ್ಕಳು ಸಾವಿಗೀಡಾಗುತ್ತವೆ ಎಂದು ವೈದ್ಯಕೀಯ ವಿವರಣೆಯನ್ನು ಸಾದ್ಯಂತವಾಗಿ ವಿವರಿಸಿದ್ದ.

ನಾಲ್ಕು ದಿನಗಳ ಬಳಿಕ ರೋಂಡಾ ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಿದಳು. ರೋಂಡ ಡಾ|| ಡೆಬ್ರಾ ಜೋನ್ಸ್ ಅಲ್ಟ್ರಾ ಸೌಂಡ್ ಮೂಲಕ ಮಗುವನ್ನು ಪರೀಕ್ಷಿಸಿದಳು. ಮಗುವಿನ ಹೊಟ್ಟೆಗೆ ಸಂಬಂಧಿಸಿದ ಅವಯವಗಳು (ಗುಲ್ಮ, ಕರುಳು,

ಯಕೃತ್ತು ಮುಂತಾದವು) ಮಗುವಿನ ಶ್ವಾಸಕೋಶವನ್ನು ಅಮುಕುತ್ತಿವೆಯೆಂದು ಹೇಳಿದಳು. ಭ್ರೂಣದ ಹೊಟ್ಟೆಯು ಸರಿಯಾದ ಭಾಗದಲ್ಲಿಲ್ಲದ ಹೃದಯವನ್ನು ತಳ್ಳುತ್ತಿದೆಯೆಂದೂ ಇದು ಬಹಳ ಅಪಾಯಕಾರಿಯೆಂದೂ ಡಾ॥ ಜೋನ್ ಯೋಚಿಸಿದಳು. ಇಂಥಾದ್ದೇ ಸಮಸ್ಯೆಯನ್ನು ಹೊಂದಿದ್ದ ಬೇರೆ ಎರಡು ರೋಗಿಗಳನ್ನು ಅವಳು ಜ್ಞಾಪಿಸಿಕೊಂಡಳು. ಆ ಎರಡೂ ಮಕ್ಕಳೂ ಸತ್ತಿದ್ದವು.

ಗರ್ಭಸ್ಥ ಮಗುವಿಗೆ ಶಸ್ತ್ರ ಚಿಕಿತ್ಸೆ ಮಾಡುವ ಪರಿಣತ ಡಾಕ್ಟರೊಬ್ಬರು ಕ್ಯಾಲಿಫೋರ್ನಿಯಾದಲ್ಲಿ ಇರುವರೆಂದು ಡಾ॥ ಜೋನ್ ರೋಂಡಾಗೆ ತಿಳಿಸಿದಳು. ಆದರೆ ಆ ಕೇಂದ್ರ ಜಗತ್ತಿನಲ್ಲೇ ಒಂದೇ ಒಂದು ಇರುವುದೆಂದೂ, ಇದು ತುಂಬಾ ದುಬಾರಿಯೆಂದೂ, ಅಲ್ಲಿ ಅವರಿಗೆ ಅನುಮತಿ ಸಿಗುವುದು ತುಂಬಾ ಕಷ್ಟಸಾಧ್ಯವೆಂದೂ ಹೇಳಿದಳು.

ತಾನಿದನ್ನು ಲಕ್ಷಿಸುವುದಿಲ್ಲವೆಂದೂ, ಮಗುವನ್ನುಳಿಸಿಕೊಳ್ಳಲು ತಾನು ಏನು ಮಾಡಲೂ ಸಿದ್ಧಳಿರುವಳೆಂದೂ ರೋಂಡಾ ಮಾರ್ನುಡಿದಳು. ಜೋನ್ಸ್ ಅವಳ ಮಾತಿಗೆ ಬೆರಗಾದಳು. “ಎಂತಹ ಧೈರ್ಯಶಾಲಿ ಈಕೆ” ಎಂದು ಯೋಚಿಸಿದಳು. ಕ್ಯಾಲಿಫೋರ್ನಿಯಾದ ಆ ಪ್ರಖ್ಯಾತ ಶಸ್ತ್ರಚಿಕಿತ್ಸಕನಿಗೆ ರೋಂಡಾಳ ಸೋನೋಗ್ರಾಮ್‌ನ ವಿವರಣೆಯ ವೀಡಿಯೋ ಮುದ್ರಿಕೆಯೊಂದನ್ನು ಕಳುಹಿಸಿಕೊಡುವುದಾಗಿ ಡಾ॥ ಜೋನ್ ಮಾತು ಕೊಟ್ಟಳು.

ಇಪ್ಪತ್ತಾರು ವರ್ಷ ಮೈಕಲ್ ಹ್ಯಾರಿಸನ್ ಆಗತಾನೇ ತನ್ನ ವೈದ್ಯಕೀಯ ಶಿಕ್ಷಣ ಮುಗಿಸಿದ್ದ. ಹಾರ್ವರ್ಡ್ಸ್ ಮೆಡಿಕಲ್ ಸ್ಕೂಲಲ್ಲಿರುವಾಗಲೇ ಡೈಫ್ರಾಗ್ಮ್ಯಾಟಿಕ್ ಹರ್ನಿಯಾಕ್ಕೆ ಬಲಿಯಾದ ಮಕ್ಕಳು ಸಹಜವಾಗಿ ಉಸಿರೆಳೆದುಕೊಳ್ಳಲಾಗದೇ ಹುಟ್ಟುತ್ತಿದ್ದಂತೆ ಸಾಯುತ್ತಿರುವುದನ್ನು ಮೈಕಲ್ ಹ್ಯಾರಿಸನ್ ಗಮನಿಸಿದ್ದ. ಈ ಮಕ್ಕಳು ಹುಟ್ಟಿದ ಕೂಡಲೆ ಬದುಕಿಸಲ್ಪಡದಿದ್ದರೆ ಹೊಟ್ಟೆಯೊಳಗಿರುವಾಗಲೇ ಯಾಕೆ ಸಾಯಬಾರದೆಂದೂ ಯೋಚಿಸಿದ್ದ. ೧೯೬೯ರ ಸಮಯದಲ್ಲಿ ತನ್ನ ಮನಸ್ಸಿಗೆ ಹೊಳೆದಿದ್ದ ಈ ವಿಚಾರವನ್ನು ಹೊರಗೆಡವಿದ್ದರೆ ಯಾರೂ ಸಾಯುತ್ತಿರಲಿಲ್ಲವೆಂದು ಅವನು ಆ ವಿಚಾರವನ್ನು ತನ್ನ ಮನಸ್ಸಿನೊಳಗೇ ಇಟ್ಟುಕೊಂಡಿದ್ದ. ಒಂಭತ್ತು ವರ್ಷಗಳ ನಂತರ ಆತ ಶಿಶುರೋಗ ತಜ್ಞನಾಗಿ ಹೊರಬಿದ್ದ ಮೇಲೆ (ಯು.ಸಿ.ಎಸ್.ಎಫ್) (ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ ಸ್ಯಾನ್ ಫ್ರಾನ್‌ಸಿಸ್‌ಕೊ)ನ ಮೆಡಿಕಲ್ ಸೆಂಟರ್‌ನಲ್ಲಿ ಕೆಲಸಕ್ಕೆ ಸೇರಿಕೊಂಡ. ಅಲ್ಲಿ ಆತ ಅತ್ಯುಚ್ಚ ಸಂಶೋಧನಾ ತಂಡಕ್ಕೆ ಆಯ್ಕೆಯಾದ ಮತ್ತು ಕುರಿಯ ಭ್ರೂಣದ ಮೇಲೆ ಪ್ರಾಯೋಗಿಕ ವಿಧಾನ ಜೇರೆ ಆರಂಭಿಸಿದ. ಹೃದಯ ಗಹ್ವರವನ್ನು ಸೇರಿಕೊಂಡ ಹೊಟ್ಟೆಯ ಅವಯವಗಳೊಮ್ಮೆ ಸ್ವಚ್ಛಗೊಳಿಸಲ್ಪಟ್ಟರೆ ಶ್ವಾಸಕೋಶವು ಬೇಗ ಬೆಳೆಯುವುದೆನ್ನುವುದನ್ನು ಅವರ ಸಂಶೋಧನೆ ತೋರಿಸಿಕೊಟ್ಟಿತು. ಆದರೆ ಮಾನವನ ಮೇಲಿನ ಈ ಪ್ರಯೋಗ ಒಂದು ಭ್ರಮೆಯೆಂದು ನಂಬಿದ್ದ ನಾಸ್ತಿಕವಾದಿಗಳಿಂದ ಹ್ಯಾರಿಸನ್‌ನ ಸಂಶೋಧನೆ ಅಪಹಾಸ್ಯಕ್ಕೊಳಗಾಯಿತು. ಆದಾಗ್ಯೂ ಸಹ ಹ್ಯಾರಿ

ಸನ್ ತನ್ನ ಸಂಶೋಧನೆಯನ್ನು ಪಟ್ಟು ಹಿಡಿದು ಮುಂದುವರಿಸಿದ. ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಅಭ್ಯಾಸದಲ್ಲಿ ಆತ ಅವಿಶ್ರಾಂತವಾಗಿದ್ದರೂ ರೋಗಗ್ರಸ್ತ ಅತ್ಯಂತ ಸಣ್ಣ ಶಿಶುವನ್ನು ರಕ್ಷಿಸಲು ಬೇಕಾದ ತಂತ್ರ ಕೌಶಲವನ್ನು ಸಾಧಿಸಲು ಪ್ರಯೋಗಾಲಯದಲ್ಲಿ ಯತ್ನಿಸುತ್ತಿದ್ದ. ಕೊನೆಗೆ ಶಿಶುವನ್ನು ಬದುಕಿಸಲು ಶಸ್ತ್ರಚಿಕಿತ್ಸೆಯೊಂದೇ ಅನಿವಾರ್ಯವೆಂಬ ಸಂದರ್ಭದಲ್ಲಿ ಡಾ|| ಹ್ಯಾರಿಸನ್ ಶಿಶುಗಳ ಮೇಲೆ ಪ್ರಯೋಗವನ್ನು ಆರಂಭಿಸಿದ.

೧೯೯೪ಳಕ್ಕೆ ಮೊದಲು ಡಾ|| ಬೋನ್ಸ್‌ಳ ಕಾಗದ ಅವನ ಡೆಸ್ಕ್ ಮೇಲೆ ಕಾಣಿಸಿಕೊಂಡಾಗ, ಹ್ಯಾರಿಸನ್ ಮತ್ತು ಅವನ ತಂಡ ಕೆಲವೇ ಕೆಲವು ಮಕ್ಕಳ ಮೇಲೆ ಪ್ರಯೋಗ ಮಾಡಿ ಮುಗಿಸಿತ್ತು. ಅವರ ಪ್ರಯೋಗ ಯಶಃಪ್ರದವಾಗಿತ್ತು. ಆದರೆ ಬಹು ಮಕ್ಕಳು ಸತ್ತಿದ್ದವು. ಅವುಗಳಲ್ಲಿ ಕೆಲವು ಶಸ್ತ್ರಚಿಕಿತ್ಸಾ ಮೇಜಿನ ಮೇಲಿದ್ದವು. ಮಕ್ಕಳು ಸತ್ತಿದ್ದು ಡಾ|| ಹ್ಯಾರಿಸನ್‌ನ್ನು ನಿರಾಶೆಗೊಳಿಸಿದ್ದವು. ಮಕ್ಕಳನ್ನು ಕಳೆದುಕೊಂಡ ಕುಟುಂಬಗಳಿಗೆ ಯಾವಾಗಲೂ ಧೈರ್ಯದ, ಸಾಂತ್ವನದ ಮಾತುಗಳನ್ನಾಡುತ್ತಿದ್ದ ಅವನು ಮಾತ್ರ ತನ್ನನ್ನು ಭೇಟಿಯಾದ ಕುಟುಂಬಗಳನ್ನು ನಿರಾಶೆಯಿಂದ ನೋಡುತ್ತಿರಲಿಲ್ಲವಾಗಿತ್ತು.

ಹಸುಗೂಸುಗಳ ಮರಣಕ್ಕೆ ಕಾರಣವೇನಿರಬಹುದೆಂದು ಆತ ಬಹುದಿನಗಳವರೆಗೆ ಸಂಶೋಧನೆ ನಡೆಸಿದ. ಅದರ ಪರಿಣಾಮವಾಗಿ ಭ್ರೂಣದ ಯಕೃತ್ತು ಹೃದಯ ಗಹ್ವರವನ್ನು ಪ್ರವೇಶಿಸಿ, ಹೊಕ್ಕಳ ಬಳ್ಳಿಯ ದಃರಿಯನ್ನು ಬದಲಾಯಿಸುತ್ತಿದೆ ಎಂಬ ಸಂಗತಿಯನ್ನು ಗಮನಿಸಿದ. ಯಕೃತ್ತು ಅಜಾಗರೂಕವಾಗಿ ಹಿಂದಕ್ಕೆ ಚಲಿಸುತ್ತಾ ಈ ಜೀವನಗತಿಯಲ್ಲಿ ಆಪತ್ತಿನ ತಿರುವನ್ನುಂಟುಮಾಡುವುದೆನ್ನುವುದನ್ನು ಅರಿತ.

ಡಾ|| ಬೋನ್ ಕಳುಹಿಸಿದ್ದ ಅಸ್ಪಷ್ಟ ಸೋನೋಗ್ರಾಮ್ ವಿವರವನ್ನು ನೋಡುತ್ತಾ ಡಾ|| ಹ್ಯಾರಿಸನ್ ಮಗುವಿನ ಯಕೃತ್ತು ಸಮಸ್ಯಾತ್ಮಕವಾಗಿಲ್ಲವೆಂದು ನೆಮ್ಮದಿಗೊಂಡ. ಯಕೃತ್ತಿನ ಒಂದು ಚಿಕ್ಕ ಭಾಗ ಮಾತ್ರ ಹೃದಯದೊಳಕ್ಕೆ ಸೇರಿಕೊಂಡಿತ್ತು. ಉಳಿದೆಲ್ಲವೂ ಉತ್ತಮ ಲಕ್ಷಣವನ್ನೇ ಹೊಂದಿದ್ದವು. ಮಗು ಶಸ್ತ್ರಚಿಕಿತ್ಸೆಯನ್ನು ತಡೆದುಕೊಳ್ಳುವಷ್ಟು ಬೆಳೆಯದಿದ್ದರೂ ಹೊಲಿಗೆಯನ್ನು ತಡೆದುಕೊಳ್ಳುವಷ್ಟು ಯೋಗ್ಯತೆಯನ್ನು ಹೊಂದಿತ್ತು. ಕೊನೆಗೆ ಡಾ|| ಬೋನ್ಸ್‌ಳ ಅಭಿಪ್ರಾಯದಂತೆ ತಾಯಿ ದೃಢಕಾಯದವಳಾಗಿದ್ದಳು. ಹುಟ್ಟದಿರುವ ಮಗುವನ್ನು ಉಳಿಸಿಕೊಳ್ಳುವುದಕ್ಕೆ ಆಕೆ ಎಂತಹ ತ್ಯಾಗಕ್ಕೂ ಸಿದ್ಧಳಾಗಿದ್ದಳು.

ಡಾ|| ಹ್ಯಾರಿಸನ್‌ಗೆ, ಅವಳು ಶಸ್ತ್ರಚಿಕಿತ್ಸೆಗೆ ಯೋಗ್ಯಳೆಂದು ಅನ್ನಿಸಿತು.

"ಅವರು ನನ್ನನ್ನು ಚಿಕಿತ್ಸೆಗೆ ಸಮ್ಮತಿಸಿದ್ದಾರೆಯೇ" ಎಂದು ರೋಂಡಾ ಡಾ|| ಬೋನ್ಸ್‌ಗೆ ಫೋನ್ ಮಾಡಿ ತಿಳಿದುಕೊಂಡಳು. ಸಮ್ಮತಿಸಿದ್ದ ವಿಚಾರವನ್ನು ತಿಳಿದುಕೊಂಡು ಬೋನ್ಸ್‌ಗೆ ಕೃತಜ್ಞತೆ ಸಲ್ಲಿಸಿ ಮನಸ್ಸಿನಲ್ಲೇ ದೇವರನ್ನು ಸ್ಮರಿಸಿಕೊಂಡಳು. ಅಂದು ರಾತ್ರಿ ಮೈಕ್ ಮನೆಗೆ ಬಂದಾಗ ಮೈಕ್ ಮತ್ತು ರೋಂಡಾ ಸಂತೋಷದಿಂದ ಆಲಿಂಗಿಸಿಕೊಂಡರು.

ತಾನೆಲ್ಲಾದರೂ ಅವಳನ್ನು ಕಳೆದುಕೊಂಡು ಬಿಟ್ಟರೆ" ಎನ್ನುವ ಕಾರಣದಿಂದ ವೈರ್ ಅವಳಿಗೆ ಸಹಾಯ ಮಾಡದವನಾಗಿದ್ದ. ಪ್ರಯೋಗಿಕ ಶಸ್ತ್ರ ಚಿಕಿತ್ಸೆಗೆ ಅಂತಾ ರಾಷ್ಟ್ರೀಯ ಆರೋಗ್ಯ ಸಂಸ್ಥೆ ಅವರಿಗೆ ಹಣ ಕೊಡುತ್ತಿದ್ದರೂ ವೈರ್ ತನ್ನ ಕೆಲಸ ವನ್ನು ಬಿಡುವಂತಿರಲಿಲ್ಲ. ಕೊನೆಗೆ ಕೋರಿ ಯನ್ನು ನೋಡಿಕೊಳ್ಳುವುದಕ್ಕೆ ಅವನ ಚಿಕ್ಕಮ್ಮ ಒಪ್ಪಿಕೊಂಡಾಗ, ರೋಂಡಾಳ ತಾಯಿಯೇ ಅವಳ ಜತೆಯಲ್ಲಿ ಹೋಗು ವುದಕ್ಕೆ ಸಿದ್ಧಳಾದಳು.

ಅಂದು ಶುಕ್ರವಾರ ಮಾರ್ಚ್ ೪ ರಂದು ಯು.ಸಿ.ಎಸ್.ಎಫ್‌ನ ಕೇಂದ್ರ ಸ್ಥಳದಲ್ಲಿ ಸಭೆ ನಡೆದಿತ್ತು. ಡಾ|| ಹ್ಯಾರಿಸನ್ ಮತ್ತು ಅವನ ತಂಡ ರೋಂಡಾ ಹಾಗೂ ಅವಳ ತಾಯಿಯನ್ನು ನೋಡಿದರು. ಹ್ಯಾರಿಸನ್ ಯಾವುದೇ ಕೃತಕವಾದ ಮಾತನಾಡಲಿಲ್ಲ. ರೋಂಡಾಳಿಗೆ ಅದು ಸತ್ವ ಪರೀಕ್ಷೆಯ ಸಮಯವಾಗಿತ್ತು. ಅವಳಿಗೆ ಪ್ರತ್ಯೇಕ ವಾದ ಶಸ್ತ್ರಚಿಕಿತ್ಸೆಯಾಗಬೇಕಿತ್ತು. ಒಂದು ಅವಳ ಮಗುವಿನ ಐಬನ್ನು ಸರಿಪಡಿಸು ವುದು. ಇನ್ನೊಂದು ಕೆಲವು ವಾರಗಳನಂತರ ಶಸ್ತ್ರಚಿಕಿತ್ಸೆಯ ಮೂಲಕ–ಮಗುವನ್ನು ಹೊರತೆಗೆಯುವುದು. ಇವೆಲ್ಲವರ ಮಧ್ಯದಲ್ಲಿ ಅಕಾಲಿಕ ಹೆರಿಗೆಯನ್ನು ತಡೆಯುವುದ ರೊಂದಿಗೆ ಮಗು ಗುಣಹೊಂದಿ ಸಾಮಾನ್ಯ ಸ್ಥಿತಿಗೆ ಮರಳುವಷ್ಟರಲ್ಲಿ ರೋಂಡಾ ಅಷ್ಟೊಂದು ಸಹನೀಯವಲ್ಲದ ಔಷಧಿಯ ಅಡ್ಡ ಪರಿಣಾಮವನ್ನು ಸಹಿಸಬೇಕಿತ್ತು. ಉತ್ತಮವಾಪಟ್ಟದ ಶಸ್ತ್ರ ಚಿಕಿತ್ಸೆ ಪಡೆದರೂ ಮಗು ಸತ್ತರೆ ನಾವು ಜವಾಬ್ದಾರರಲ್ಲ ವೆಂದು ಹ್ಯಾರಿಸನ್ ಸ್ಪಷ್ಟಪಡಿಸಿದ.

ರೋಂಡಾ ಯೋಚಿಸಲು ಸಮಯ ತೆಗೆದುಕೊಂಡಳು. "ಬಹುಶಃ ತಾನಿದರಲ್ಲಿ ಗೆಲ್ಲಲು ಸಾಕಷ್ಟು ಶಕ್ತಿಶಾಲಿಯಾಗಿಲ್ಲ" ಎಂದು ಯೋಚಿಸಿದಳು, ತನಗೆ ಆಪ್ತಳೂ, ಸ್ನೇಹಿತಳೂ, ಪ್ರೇರಕಳೂ ಆದ ತಾಯಿ ಜೂಡಿರಾಬಿನ್‌ಸನ್‌ಳನ್ನು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಿದಳು. ದೇವರು ಈ ರೈಲಿನ ಚಾಲಕನಾಗಿದ್ದಾನೆ. ನಾವದರೊಳ ಗಿರುವವರೆಗೆ ಎಲ್ಲವೂ ಸರಿಯಾಗಿರುತ್ತವೆ" ಎಂದು ಜೂಡಿ ರೋಂಡಾಗೆ ಹೇಳಿದಳು. ಆ ಮಾತಿನಿಂದ ಧೈರ್ಯ ತಂದುಕೊಂಡ ರೋಂಡಾ ಡಾ|| ಹ್ಯಾರಿಸನ್ ಬಳಿ ಬಂದು "ನನ್ನ ಮಗಳಿಗೆ ಮ್ಯಾಗಿ" ಎಂದು ಹೆಸರಿಸಿ ದ್ದೇನೆ. ಇನ್ನು ಮುಂದೆ ಅವಳನ್ನು ಹಾಗೆ ಕರೆಯೋಣವೇ ?" ಎಂದು ಕೇಳಿದಳು. ಅದಕ್ಕೆ ಅವನು ತಲೆಯಲ್ಲಾಡಿಸಿದ. ಶಸ್ತ್ರ ಚಿಕಿತ್ಸೆಯ ಸಂದರ್ಭದಲ್ಲಿ ಮ್ಯಾಗಿ ಮೃತ ಳಾದರೆ ತಾನವಳಿಗೆ "ಗುಡ್ ಬೈ" ಹೇಳುವೆ ನೆಂದು ಡಾಕ್ಟರಿಗೆ ತಿಳಿಸಿದಳು. ಡಾಕ್ಟರ್ ಒಪ್ಪಿದ. "ಇವಳೆಂತಹ ತಾಯಿಯಿರಬೇಕು" ಎಂದೂ ಯೋಚಿಸಿದ. "ಒಂದು ಕೊನೆ ಪ್ರಶ್ನೆ" ಎಂದು ರೋಂಡಾ ಮಧ್ಯದಲ್ಲಿ ಸೇರಿಸಿದಳು. "ನೀವು ದೇವರನ್ನು ನಂಬುವಿರಾ ?" ಅದಕ್ಕೆ ಹ್ಯಾರಿಸನ್ ಮುಗುಳ್ನಗುತ್ತಾ ಹೌದು, ನಾನು ಖಂಡಿತ ನಂಬುತ್ತೇನೆ" ಎಂದ.

೧೯೮೮ಳ, ಮಾರ್ಚ್ ೮ ಮಂಗಳವಾರ ಬೆಳಗ್ಗೆ ಬೆಳಕು ಹರಿಯುವುದಕ್ಕೆ ಮೊದಲೇ ರೋಂಡಾ ಆಪರೇಷನ್ ಥಿಯೇಟರಿಗೆ ಒಯ್ಯಲ್ಪಟ್ಟಳು. ಜೂಡಿ ಅವಳ ಕೈಹಿಡಿದು ಕೊಂಡಿದ್ದಳು. "ನೆನಪಿಸಿಕೋ" ರೋಂಡಾ "ಟ್ರೈಸ್ ಇಳಿಯಬೇಡ" ಎಂದು ಆಕೆ

ಜ್ಞಾಪಿಸಿದಳು. ಆರು ಗಂಟೆಯಾಗಿ ಸ್ವಲ್ಪ ಸಮಯವಾದಾಗ ಡಾ|| ಹ್ಯಾರಿಸನ್ ಮತ್ತು ಆತನ ಪಕ್ಕದಲ್ಲಿದ್ದ ಆತನ ಸಹೋದ್ಯೋಗಿ ಡಾ|| ಸ್ಕಾಟ್ ಆ್ಯಡ್ಜಿಕ್ ರೋಂಡಾಳ ಹೊಟ್ಟೆಗೆ ಅಡ್ಡಲಾಗಿ ೧೫ ಸೆಂ. ಮೀ. ಉದ್ದ ಕೊರೆದರು. ಅವಳ ಗರ್ಭಾಶಯ ಸುತ್ತಲೂ ಬಲೆಯಂತೆ ನೇಯ್ದುಕೊಂಡು, ಕೆಂಪು ನೀಲಿ ಬಣ್ಣಕ್ಕೆ ತಿರುಗಿ ಊದಿಕೊಂಡಿರುವುದನ್ನು ಗಮನಿಸಿದರು. ಆಗ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಮಗುವಿನ ಲಯಬದ್ಧವಾದ ಹೃದಯ ಬಡಿತದ ಹೊರತು ಮತ್ತೇನೂ ಕೇಳಿಬರುತ್ತಿರಲಿಲ್ಲ.

ಆಮೇಲೆ ಹ್ಯಾರಿಸನ್ ೨.೫ ಸೆಂ. ಮೀ. ದಪ್ಪದ ಗರ್ಭಾಶಯದ ಗೋಡೆಯನ್ನು ಕತ್ತರಿಸಿದ. ಮ್ಯಾಗಿಯ ಹೃದಯ ಬಡಿತ ನಿಮಿಷಕ್ಕೆ ೧೪೦ ರಿಂದ ೧೬೦ರಷ್ಟು ಇದ್ದದನ್ನು ಗಮನಿಸಿದ. ಅದು ಸಹಜವಾಗಿದೆಯೆಂದು ನೆಮ್ಮದಿಗೊಂಡ. ಕ್ಲ್ಯಾಂಪ್ ಮತ್ತು ಹೊಲಿಗೆಯೊಂದಿಗೆ ಗರ್ಭಾಶಯವನ್ನು ಬಿಚ್ಚುತ್ತಾ ಹ್ಯಾರಿಸನ್ ಮತ್ತು ಆ್ಯಡ್ಜಿಕ್ ೨೬ ವಾರಗಳ ಮ್ಯಾಗಿಯ ಪಾರದರ್ಶಕವಂತಹ ತೆಳುವಾದ ತ್ವಚೆ ಮತ್ತು ಚಿಕ್ಕ ಭ್ರೂಣಕೋಶವನ್ನು ತೆಗೆದರು. ಆಮೇಲೆ ಹ್ಯಾರಿಸನ್ ಗರ್ಭಕೋಶದಲ್ಲಿ ಮಗುವಿನ ಸುತ್ತಾ ವಿಸ್ತರಿಸಿಕೊಂಡಿದ್ದ ಆ್ಯಮ್ನಿಆಟಿಕ್ ದ್ರವವನ್ನು ಬರಿದುಮಾಡಿ ಮಗುವನ್ನು ಸ್ವಚ್ಛಗೊಳಿಸಿದ. ಆಮೇಲೆ ವೈದ್ಯ ತಂಡ ಮ್ಯಾಗಿಗೆ ಅಲ್ಟ್ರಾ ಸೌಂಡನ್ನು ಉಪಯೋಗಿಸುತ್ತಾ, ಶಸ್ತ್ರಚಿಕಿತ್ಸೆಯಿಂದ ಅವಳಿಗೆ ಯಾವುದೇ ನೋವಾಗದಿರುವಂತೆ ಅತ್ಯಂತ ಸಣ್ಣ ಸೂಜಿಯಿಂದ ಮತ್ತು ಬರಿಸುವ ಚುಚ್ಚುಮದ್ದನ್ನು ನೀಡಿತ್ತು. ಹಸ್ತತ್ರಾಣದಿಂದ ಕೂಡಿದ್ದ ಕೈಯಿಂದ ಡಾ|| ಹ್ಯಾರಿಸನ್ ಮ್ಯಾಗಿಯ ಎಡಭುಜವನ್ನು ಮೆಲ್ಲಗೆ ಹೊರಗೆಳೆದ. ಇಡೀ ಶಿಶುವೇ ಅವನ ಕೈಯಿಗೆ ಬಂದಾಗ ಅದು ಒಂದು ಕಿಲೋಗ್ರಾಮ್ ತೂಕಕ್ಕಿಂತಲೂ ಕಡಿಮೆಯಿತ್ತು. ಹ್ಯಾರಿಸನ್‌ನ ಮುಷ್ಟಿಗಿಂತಲೂ ಚಿಕ್ಕದಾಗಿತ್ತು. ಈಗ ಹ್ಯಾರಿಸನ್ ಶಸ್ತ್ರಚಿಕಿತ್ಸೆಗೆ ಅತ್ಯಗತ್ಯವಾದ ಭಾಗವನ್ನು ನೋಡತೊಡಗಿದ. ಶಸ್ತ್ರಚಿಕಿತ್ಸೆಯ ಜಾಗವನ್ನು ನಾಲ್ಕರಷ್ಟು ದೊಡ್ಡದಾಗಿ ತೋರಿಸುವ ಲೆನ್ಸ್ ಮೂಲಕ ಮ್ಯಾಗಿಗೆ ಶಸ್ತ್ರಚಿಕಿತ್ಸೆ ಮಾಡುವ ಜಾಗವನ್ನು ನೋಡುತ್ತಾ, ಅವನು ಅವಳ ಪಕ್ಕೆಲುಬಿನ ಕೆಳಗೆ ಮತ್ತು ಅವಳ ಎದೆಯ ಕೆಳಗೆ ಸಣ್ಣದಾಗಿ ಕೊರೆದ. ಕೊನೆಗೆ ಮಗುವಿನ ವಪೆಯಲ್ಲಾದ ತೂತನ್ನು ನೋಡಿದ. ಡಾ|| ಹ್ಯಾರಿಸನ್ ಚಿಕ್ಕದಾದ ಹೃದಯ ಗಹ್ವರವನ್ನು ಒಂದೇ ಬೆರಳಿಂದ ಸ್ಪರ್ಶಿಸುತ್ತಾ ವಪೆಯ ರಂಧ್ರದ ಮೂಲಕ ಒಳಕ್ಕೆ ಸೇರಿಕೊಂಡಿದ್ದ. ಕರುಳು, ಗುಲ್ಮ, ಯಕೃತ್ತುಗಳನ್ನು ಹೊರತೆಗೆದ. ಈ ಕೆಲಸ ಮಾಡುತ್ತಿದ್ದಾಗ ಹಾರ್ಟ್ ಮಾನಿಟರ್ ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಿದ್ದುದು ಅವನಿಗೆ ನೆಮ್ಮದಿಯನ್ನು ನೀಡಿತು. ಹ್ಯಾರಿಸನ್ ಪರಿಶ್ರಮದಿಂದ ಮ್ಯಾಗಿಯ ವಪೆಯಲ್ಲಾಗಿದ್ದ ತೂತನ್ನು ಮುಚ್ಚಿ ಸಿಂಥೆಟಿಕ್ ದಾರದಿಂದ ಹೊಲಿಗೆ ಹಾಕಿದ.

ಮ್ಯಾಗಿಯ ಅವಯವಗಳು ಇನ್ನು ಬೆಳೆದಿರಲಿಲ್ಲ. ಅವುಗಳನ್ನು ಹಿಡಿದುಕೊಳ್ಳುವುದಕ್ಕೆ ಹೊಟ್ಟೆಯೂ ಚಿಕ್ಕದಾಗಿತ್ತು. ಅದಕ್ಕಾಗಿ ಹ್ಯಾರಿಸನ್ ಹೊಟ್ಟೆಗೆ ಸಂಬಂಧಿಸಿದ ಜಾಗ ದೊಡ್ಡ

ಾಗುವುದಕ್ಕೆ ಅವಳ ಹೊಟ್ಟೆಯ ಹೊರಕ್ಕೆ ಪ್ಲಾಸ್ಟಿಕ್ ಚೀಲ ಒಂದನ್ನು ಅಂಟಿಸಿದ. ಮಗು ಜನಿಸುವಾಗ ಅವಳ ಹೊಟ್ಟೆ ದೊಡ್ಡ ದಾಗಿ ಬೆಳೆದಿರುತ್ತಿದ್ದು ಆ ಪ್ಲಾಸ್ಟಿಕ್ ಚೀಲ ಹೊರತಳ್ಳಲ್ಪಡಬಹುದಿತ್ತು. ಆ ವೇಳೆ ಡಾ॥ ಹ್ಯಾರಿಸನ್ ಗರ್ಭಕೋಶದ ಸುತ್ತ ಆವರಿಸಿದ್ದ ದ್ರಾವಕ ಪದಾರ್ಥವನ್ನು ಇದ್ದ ಜಾಗದಲ್ಲೇ ಇಟ್ಟನು. ಅನಂತರ ಗರ್ಭಾ ಶಯದ ಚಿಕ್ಕ ಚೀಲ ಮುಚ್ಚಿ ಹೊಲಿಯ ಲಾಯಿತು. ಅನಂತರ ಅಲ್ಟ್ರಾಸೌಂಡ್ ಪರೀಕ್ಷೆ ನಡೆಸಿದ. ಮ್ಯಾಗಿಯ ಚಲನೆ ಸರಿಯಾಗಿ ದ್ದುದು ಅವನಿಗೆ ಸಂತೋಷವನ್ನು ನೀಡಿತು.

ನಾಲ್ಕೂವರೆ ತಾಸಿನ ಶಸ್ತ್ರಚಿಕಿತ್ಸೆಯ ನಂತರ ರೋಂದಾ ಇಂಟೆನ್ಸಿವ್ ಕೇರಿಗೆ ಒಯ್ಯಲ್ಪಟ್ಟಳು. ರೋಂದಾ ಸಂಭ್ರಮದಿಂದ ನರ್ಸ್ ಕಡೆಗೆ ಬಾಗಿ ಮ್ಯಾಗಿ ಹೇಗಿದೆ ಯೆಂದು ಪಿಸುಗುಟ್ಟಿದಳು. ಮಗು ಚೆನ್ನಾಗಿದೆಯೆಂದು ನರ್ಸ್ ಉತ್ತರಿಸಿದಳು. ರೋಂದಾ ನಗುತ್ತಾ ಸಂತೋಷ ವ್ಯಕ್ತಪಡಿಸಿ ದಳು. ಮ್ಯಾಗಿಯ ಅವಯವಗಳು ಸಾಕಷ್ಟು ಬೆಳೆಯಲು ಅವಳು ಸಾಧ್ಯವಾದಷ್ಟು ಹೆಚ್ಚು ದಿನ ತಾಯಿಯ ಗರ್ಭಕೋಶದಲ್ಲಿ ಇರ ಬೇಕಿತ್ತು. ಅಕಾಲಿಕ ಹೆರಿಗೆಯಾಗುವುದು ವೈದ್ಯರಿಗೆ ಇಷ್ಟವಲ್ಲದ ಸಂಗತಿಯಾಗಿತ್ತು. ರೋಂದಾ ಆಸ್ಪತ್ರೆ ಕೊಠಡಿಯಿಂದ ಹತ್ತಿರ ದಲ್ಲಿರುವ ಅಪಾರ್ಟ್‌ಮೆಂಟಿಗೆ ಬಂದಾಗ ಅವಳಿಗೆ ಧೈರ್ಯಬಂದಿತ್ತು. ಆದರೆ ಆ ಧೈರ್ಯ ಬಹಳ ಸಮಯ ಉಳಿಯ ಲಾಯಿತು ಹೊಟ್ಟೆಯಿಂದ ನೋವು ಕಾಣಿಸಿಕೊಂಡಿತು. ಅಕಾಲಿಕ ಹೆರಿಗೆಯನ್ನು ತಡೆಯುವುದಕ್ಕಾಗಿ ನೀಡಿದ ಔಷಧದಿಂದ ಅವಳು ದುರ್ಬಲಳಾಗಿದ್ದಳು.

ರೋಂದಾ ಆಸ್ಪತ್ರೆಯ ಗೆಳತಿ ಚ್ಯಾಮಿ ಕರುಣೆಯು ಎಲ್ಲರೀತಿಯಲ್ಲಿ ರೋಂದಾಗೆ ಸಾಂತ್ವನದ ಮಾತುಗಳನ್ನಾಡುತ್ತಾ, ಈ ನೋವು ಕಡಿಮೆಯಾಗಿ ದಿನದಿಂದ ದಿನಕ್ಕೆ ಸುಧಾರಿಸುವುದಾಗಿಯೂ, ತನ್ನ ಗೆಳತಿಗೂ ಇಂಥಾದ್ದೇ ಆಪರೇಷನ್ ಆಗಿತ್ತೆಂದೂ ತಿಳಿಸಿದಳು.

ಆದರೆ ಚ್ಯಾಮಿಯೇ ತೀವ್ರತರವಾದ ನೋವನ್ನನುಭವಿಸತೊಡಗಿದ್ದಳು. ವೈದ್ಯರು ಪರೀಕ್ಷಿಸಿದಾಗ ಗರ್ಭಾಶಯದ ಸಣ್ಣ ಕೋಶದಿಂದ ಪಾರದರ್ಶಕದಂತಹ ಸೂಕ್ಷ್ಮ ಚರ್ಮ ಸುತ್ತಿಕೊಂಡಿದ್ದು ಕಂಡು ಬಂತು, ಶಸ್ತ್ರಚಿಕಿತ್ಸೆ ಮಾಡುವಾಗ ಅದರ ಹೊಲಿಗೆ ಸಡಿಲಗೊಂಡಿದ್ದರಿಂದ ಅದು ಮಗುವಿನ ಹೊಕ್ಕಳಬಳ್ಳಿ ಸಂಬಂಧವನ್ನು ತಪ್ಪಿಸಿ ಆಮ್ಲಜನಕವನ್ನು ಒದಗಿಸುತ್ತಿರ ಲಿಲ್ಲ. ಅದೇ ಕ್ಷಣದಲ್ಲಿ ಮಗು ಸತ್ತು ಹೋಯಿತು. "ನನ್ನ ಮಗುವಿಗೆ ಹೀಗಾಯಿ ತೆಂದು ನಿನ್ನ ಮಗುವಿಗೂ ಹೀಗಾಗಬಹು ದೆಂದು ತಿಳಿಯದಿರು. ನೀನು ಭರವಸೆ ಹೊಂದಿರು" ಎಂದು ಚ್ಯಾಮಿ ರೋಂದಾಗೆ ಧೈರ್ಯ ತುಂಬಿದಳು. ಇದಾದ ಮರುಕ್ಷಣ ದಲ್ಲೇ ಅಲ್ಟ್ರಾಸೌಂಡ್ ಪರೀಕ್ಷೆ, ರೋಂದಾಳ ಮೆಂಬ್ರೇನ್ ಕೂಡಾ ಬೇರ್ಪಟ್ಟದ್ದನ್ನು ತಿಳಿಸಿತು. ಹ್ಯಾರಿಸನ್ ಕೂಡಲೆ ತನ್ನ ಆಪರೇಷನ್ ಥಿಯೇಟರ್ನಿಂದ ಅವಳ ರೂಮಿಗೆ ನುಗ್ಗಿ. ಪೂರ್ಣ ಬೆಡ್ ರೆಸ್ಟ್ ತೆಗೆದುಕೊಳ್ಳು ವಂತೆ ಆಜ್ಞಾಪಿಸಿದ. ರೋಂದಾಳ ತಾಯಿ ಅವಳಿಗೆ ತುಂಬಾ ಆಪ್ತಳಾಗಿದ್ದರೂ ತಾನು ಒಂಟಿಯೆಂಬ ಭಾವನೆ ಅವಳನ್ನು ಕಾಡಿತು. ಒಂದುವಾರ ಕಳೆಯುತ್ತಿದ್ದಂತೆ ತನ್ನ ಗಂಡ ನೈಕ್ ಹಾಗೂ ಮಗಳೋರೆ ಏನು ಮಾಡು

ತ್ತಿರಬಹುದೆಂದು ಯೋಚಿಸುತ್ತಾ ಸಂಕಟ ಪಟ್ಟುಕೊಂಡಳು. ಹೀಗೆ ಯೋಚಿಸುತ್ತಿರುವಾಗಲೇ ಮ್ಯಾಗಿಯ ಹೃದಯಬಡಿತ ಅವಳನ್ನು ಎಚ್ಚರಿಸಿತು. ಏಪ್ರಿಲ್ ೨೨ ಬೆಳಗ್ಗೆ ೯-೩೦ಕ್ಕೆ ಮ್ಯಾಗಿಯ ಹೃದಯ ಬಡಿತ ನಿಂತುಹೋಯಿತು. ಅವಳ ಹೃದಯ ಬಡಿತ ನಿಲ್ಲುತ್ತಿದ್ದಂತೆ ಆಕೆ ಮರಗಟ್ಟು ಹೋದಳು. ಕೆಲವೇ ಸೆಕೆಂಡುಗಳಲ್ಲಿ ವೈದ್ಯರು ಮತ್ತು ದಾದಿಯರು ಜಾಗರೂಕರಾಗಿ ರೂಮಿಗೆ ನುಗ್ಗಿದರು. ಅವಳನ್ನು ಕೂಡಲೇ ಓ.ಆರ್.ಗೆ ಒಯ್ಯಿರಿ ಎಂದು ಒಬ್ಬ ಡಾಕ್ಟರ್ ಚೀರಿದ. ಗಡಿಬಿಡಿಯಲ್ಲಿ ಅವರು ಮೇಜು ಮತ್ತು ಕುರ್ಚಿಗಳನ್ನು ಸರಿಸುತ್ತಾ, ರೋಂಡಾಳ ಹಾಸಿಗೆಯ ದಾರಿಯನ್ನು ಸುಗಮಗೊಳಿಸುತ್ತಾ ಮುನ್ನುಗ್ಗುವಾಗ ಹೂಕುಂಡ ಮುಗ್ಗರಿಸಿ ಅದರಲ್ಲಿದ್ದ ನೀರು ಕೊಠಡಿಯಲ್ಲೆಲ್ಲಾ ಚೆಲ್ಲಿತು. "ಓ ದೇವರೇ" ಎಂದು ಜೂಡಿ ದೇವರನ್ನು ನೆನೆದಳು. ನಮ್ಮಿಂದ ನೀನು ಮಾಡಿಸುತ್ತಿದ್ದ ಈ ಅದ್ಭುತ ಕೆಲಸ ಬಯಲಿಗೆ ಬರುವ ಸಂದರ್ಭ ಬಂದಿದೆ. ಕಾಪಾಡು ದೇವರೇ ಎಂದು ಬೇಡಿಕೊಂಡಳು.

ಆಪರೇಷನ್ ರೂಮಿನಲ್ಲಿ ಮ್ಯಾಗಿಯ ಹೃದಯ ಬಡಿತ ನಿಮಿಷಕ್ಕೆ ೬೦ರಷ್ಟು ಆಗತೊಡಗಿತು. ಸಹಜ ಸ್ಥಿತಿಗಿಂತ ತುಂಬಾ ಕಡಿಮೆಯಿತ್ತು. ಜ್ಯಾಮಿ ಕಟಕುವಿಗಾದ ಮಗುವಿನ ಹೃದಯ ಬಡಿತ ನಿಲ್ಲದಿರಲೆಂದು ಮೌನವಾಗಿ ದೇವರಲ್ಲಿ ಪ್ರಾರ್ಥಿಸಿಕೊಂಡ.

ರೋಂಡಾಳ ಶಸ್ತ್ರಚಿಕಿತ್ಸೆಯಾಗಿ ಸುಮಾರು ಏಳುವಾರ ಕಳೆದಿತ್ತು. ಹೊಟ್ಟೆಯೊಳಗಿನ ಮಗು ಬೆಳೆಯಲು ಸಾಕಷ್ಟು ಸಮಯ ಸಿಕ್ಕಿತ್ತು. ಮ್ಯಾಗಿ ಜೀವಂತವಾಗಿ ಹೊರ ಬಂದರೆ ಅವಳು ಜೀವನದಲ್ಲಿ ಎಲ್ಲವನ್ನು ಮಾಡಬಹುದಿತ್ತು. ಪ್ರಸೂತಿ ತಜ್ಞ ಜೆ. ಟಿ. ಪೇರರ್ ರೋಂಡಾಳ ಹೊಟ್ಟೆಯನ್ನು ಓಪನ್ ಮಾಡಿ ಭ್ರೂಣದ ಚೀಲ ಮತ್ತು ಗರ್ಭಕೋಶವನ್ನು ಕೊರೆದ. ಪೇರರ್ ಮಗುವನ್ನು ಕೈಗೆತ್ತಿಕೊಂಡ. ರೋಂಡಾಳ ೩೩ ವಾರಗಳ ಜೀವನದಲ್ಲಿ ಅವಳ ಮಗು ಎರಡನೆಯ ಬಾರಿಗೆ ಅವಳ ಗರ್ಭಕೋಶದಿಂದ ತೆಗೆಯಲ್ಪಟ್ಟಿತು. ಮತ್ತು ಹೊರ ಬಂದು ಹದಿಮೂರು ನಿಮಿಷ ಆಗುವುದರೊಳಗೆ ಅದರ ಹೃದಯ ಬಡಿತ ನಿಂತು ಹೋಯಿತು. ಕೂಡಲೆ ಪೇರರ್ ಮಗುವನ್ನು ಶಿಶುತಜ್ಞನಿಗೆ ಹಸ್ತಾಂತರಿಸಿ ಅವಳನ್ನು ಮೆಲ್ಲಗೆ ತಟ್ಟಿದ. ಮ್ಯಾಗಿ, ಬಾ ಉಸಿರಾಡು" ಎಂದು ಹ್ಯಾರಿಸನ್ ಕೂಗಿದ. ೧.೩ ಕಿಲೋಗ್ರಾಮ್ ತೂಕವುಳ್ಳ ಶಿಶು ಶ್ವಾಸನಿಯನ್ನೆಳೆದುಕೊಂಡು ಅಳಲಾರಂಭಿಸಿತು. ಶಸ್ತ್ರವೈದ್ಯರೆಲ್ಲಾ ಸಂತೋಷವನ್ನು ಹಂಚಿಕೊಳ್ಳುತ್ತಿರುವಾಗ ಡಾ|| ಹ್ಯಾರಿಸನ್‌ನ ಕಣ್ಣು ಆನಂದಾಶ್ರುಗಳಿಂದ ಒದ್ದೆಯಾಗಿತ್ತು.

ಮ್ಯಾಗಿಯ ಜನನವಾಗಿ ಒಂದು ತಿಂಗಳ ನಂತರ ರೋಂಡ ಮಗುವಿನೊಡನೆ ತನ್ನ ಊರಿಗೆ ಹಿಂದಿರುಗಿದಳು. ಮನೆ ಸೇರಿ ಈಗ ಎರಡು ವರ್ಷಗಳಾಗಿವೆ. ಮ್ಯಾಗಿ ಆರೋಗ್ಯಪೂರ್ಣಳಾಗಿ ಸಂತೋಷದಿಂದ ಇದ್ದಾಳೆ. ತನ್ನ ಸಹೋದರ ಕೋರೆಯನ್ನು ಪ್ರೀತಿಸುತ್ತಾಳೆ. ಕಥೆ ಪುಸ್ತಕಗಳ ಸುಂದರ ಚಿತ್ರಗಳನ್ನು ನೋಡಿ ಆನಂದಿಸುತ್ತಾಳೆ.

ತನ್ನೋರ್ವನ ಅಪೂರ್ವ ತ್ಯಾಗದಿಂದಲೇ ಡಾ|| ಮೈಕೆಲ್ ಹ್ಯಾರಿಸನ್ ವೈದ್ಯಕೀಯ

ವಿಜ್ಞಾನದಲ್ಲಿ ಹೊಸ ದಾರಿಯನ್ನೇ ತೆರೆದಿದ್ದಾನೆ. ಆತ ಕಂಡು ಹಿಡಿದ ಭ್ರೂಣ ಶಸ್ತ್ರಚಿಕಿತ್ಸಾ ತಂತ್ರ ವಿದ್ಯೆ ಕೇವಲ ಡೈಫ್ರಾಗ್ಮ್ಯಾಟಿಕ್ ಹರ್ನಿಯಾಕ್ಕಷ್ಟೇ ಸೀಮಿತವಾಗಿರದೇ ಮೂತ್ರವಿಸರ್ಜನೆ ತಡೆ, ಕಿಡ್ನಿ, ಗರ್ಭಕೋಶದಂತಹ ಸೂಕ್ಷ್ಮ ಅವಯವಗಳಲ್ಲಿ ಉಂಟಾಗಬಹುದಾದ ಸಮಸ್ಯೆಗಳಿಗೂ ಪರಿಹಾರೋಪಾಯವಾಗಿದೆ. ಕೆಲವು ತಿಂಗಳ ನಂತರ ರೋಂಡಾ ಡೆನಿಸ್, ಮೈಕೆಲ್ ಹ್ಯಾರಿಸನ್ ಮತ್ತು ಆಡ್‌ಸಿಕ್‌ರಿಗೆ ಆತ್ಮೀಯ ಕಾಗದ ಒಂದನ್ನು ಬರೆದಳು "ದೇವರ ಪ್ರೀತಿ ಹಾಗೂ ದಯೆಯಿಂದ ಮ್ಯಾಗಿ ಇಂದು ನಮ್ಮೊಡನಿದ್ದಾಳೆ. ಇಂತಹ ರೋಗಗ್ರಸ್ತ ಜೀವಿಗಳನ್ನುಳಿಸಲು ನೀವಿಂತಹ ತಿಳಿವಳಿಕೆ, ಪರಿಣತಿ, ಕೌಶಲ, ಸಂಕಲ್ಪ ಶಕ್ತಿಯನ್ನು ಪಡೆದಿರದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ನಿಮ್ಮಿಬ್ಬರಿಗೂ ದೇವರು ಒಳಿತನ್ನು ಮಾಡಲಿ."

"ಏಕತೆ ಎಂಬುದು ಬಾಹ್ಯ ಸಂಗತಿಯಲ್ಲ. ಅದು ಪ್ರಧಾನವಾಗಿ ಅಂತರಂಗಕ್ಕೆ ಸಂಬಂಧಿಸಿದ್ದು. ಆದ್ದರಿಂದ ನಾವು ಒಂದೇ ಅಖಂಡ ರಾಷ್ಟ್ರಕ್ಕೆ ಸೇರಿದವರು ಎಂಬ ಭಾವನೆ ಜನರಲ್ಲಿ ದೃಢಗೊಳ್ಳುವಂತೆ ಮಾಡಲು ಸತತ ಶಿಕ್ಷಣವೂ ಸಂಘಟನೆಯೂ ಅಗತ್ಯ, ಭಾಷೆ, ದಿರಸು, ಆಹಾರ ಶೈಲಿ ಮೊದಲಾದವು ಐಕ್ಯ ಭಾವನೆಗೆ ಪೋಷಕವಾದವೇ ಹೊರತು ಆ ಭಾವನೆಯನ್ನು ಸೃಷ್ಟಿಸಲಾರವು."

"ಜೀವನವನ್ನು ಪಡೆಯಲು ಜೀವನವನ್ನು ಕೊಡಬೇಕು. ಎಷ್ಟೇ ಕ್ಲೇಶಕರವಾದರೂ ಅನ್ಯಾಯದ ವಿರುದ್ಧ ಸೆಣಸುವುದಕ್ಕಿಂತ ಹೆಚ್ಚು ಉದಾತ್ತವಾದ ಗುಣ ಇನ್ನೊಂದಿಲ್ಲ."

"ನನ್ನ ಪ್ರವಾಸದ ಬಗ್ಗೆ ಇತರರಿಗೆ ಇನ್ನು ಎಂಬತ್ತೊಂಬತ್ತು ದಿನ ತಿಳಿಯದಿದ್ದರೆ ಸಾಕು. ಆ ವೇಳೆಗೆ ನಾನು ಇಲ್ಲಿಯ ಸರ್ಕಾರದ ದೃಷ್ಟಿ ಪರಿಧಿಯಿಂದ ಆಚೆ ಹೋಗಿರುತ್ತೇನೆ.

—ನೇತಾಜಿ

ಪುಸ್ತಕ ಪರಿಚಯ

ಹೊಸಹೆಜ್ಜೆ—ಬರೆದವರು: ಗಂಗಾಪಾದೇಕಲ್; ಪ್ರಕಾಶಕರು: ಕನ್ನಡ ಸಂಘ; ವಿವೇಕಾನಂದ ಕಾಲೇಜು, ಪುತ್ತೂರು; ಪ್ರಥಮ ಮುದ್ರಣ ೧೯೯೬; ಪುಟಗಳು: ೧೨೮, ಬೆಲೆ: ೪೦ ರೂ.

ವಾಸ್ತವ—ಬರೆದವರು: ಗಂಗಾಪಾದೇಕಲ್; ಪ್ರಕಾಶಕರು: ಮಹಿಳಾ ಸಾಹಿತ್ಯಿಕಾ, ನವನಗರ, ಹುಬ್ಬಳ್ಳಿ; ಪ್ರಥಮ ಮುದ್ರಣ ೧೯೯೬; ಪುಟಗಳು: ೧೫೮, ಬೆಲೆ: ೩೫ ರೂ.

'ಹೊಸ ಹೆಜ್ಜೆ', 'ವಾಸ್ತವ', ಇವೆರಡೂ ಕಥಾ ಸಂಕಲನಗಳು. ಇಂದು ನಮ್ಮ ಕಣ್ಮುಂದೆಯೇ ನಡೆದಾಡುವ, ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ತೊಳಲಾಡುವ ಶ್ರೀಸಾಮಾನ್ಯರ ಜೀವನ, ವಸ್ತುಸ್ಥಿತಿಗಳ ಆಳ ಅಧ್ಯಯನದಿಂದ, ಸ್ವತಂತ್ರವಾದ ಚಿಂತನೆಗಳಿಂದ, ಹುಟ್ಟಿಬಂದ ಫಲಿತಾಂಶಗಳೇ ಈ ಕಥೆಗಳು. ಹಳ್ಳಿ ಪಟ್ಟಣಗಳಲ್ಲಿ ಎಲ್ಲೇ ಇರಲಿ, ಅನ್ಯಾಯ, ಸ್ವಾರ್ಥಚಿಂತನೆ, ಸ್ವಲಾಭದೃಷ್ಟಿ, ಜಿಪುಣತನಗಳ ನಡುವೆ ಶೋಷಣೆಗೀಡಾಗಿ ಬಾಳುತ್ತಿರುವ, ಸ್ವಾಭಿಮಾನದಿಂದ ಬದುಕಲು ಹೆಣಗಾಡುತ್ತಿರುವ, ಅಸಹಾಯಕರು–ಹೋರಾಡಿ ಗೆಲ್ಲುವ ಹೊಸ ಹೆಜ್ಜೆಗಳನ್ನು ಈ ಕಥೆಗಳಲ್ಲಿ ಗುರುತಿಸಲಾಗಿದೆ. ಇವುಗಳಲ್ಲಿ ಸ್ತ್ರೀಯರ ಪುರುಷರ, ಹೆಚ್ಚೇಕೆ ಚಂದ್ರಿಯಂಥ ಪುಟ್ಟ ಹುಡುಗರ ದಿಟ್ಟಹೆಜ್ಜೆಗಳನ್ನೂ ಕಾಣಬಹುದು. ಇಲ್ಲಿನ ಕಥೆಗಳಲ್ಲಿ ಹೆಣ್ಣಿನ ಶೋಷಣೆ ಮಾತ್ರ ಚಿತ್ರಿತವಾಗಿಲ್ಲ. ಪುರುಷರೂ ಸ್ತ್ರೀಯರೂ, ಮಕ್ಕಳೂ, ಕೆಲಸದಾಳುಗಳೂ, ಕೊನೆಗೆ ತೋಟದ ಮಾಲೀಕನು ಕೂಡ ಶೋಷಣೆಗೊಳಗಾಗುವ ಚಿತ್ರಗಳಿವೆ. ಇಲ್ಲಿನ ಪಾತ್ರಗಳೆಲ್ಲ ಸಮಾಜದ ಪ್ರತಿನಿಧಿಗಳು. 'ಸಂಧಿಕಾಲ'ದ ಶ್ರೀ, 'ವಾಸ್ತವ' ಕಥೆಯ ಶ್ರೀಧರ, 'ಪರೀಕ್ಷೆ' ಕಥೆಯ ರಾಜಾರಾಯರು–ವಿಧವೆಯನ್ನು ತನ್ನ ಸೊಸೆಯಾಗಿ ಮನೆತುಂಬಿಸಿಕೊಳ್ಳಬಲ್ಲಂಥ ಹಿರಿಯ ತಲೆಮಾರಿನ ರಾಜಾರಾಯರು ಇವರೆಲ್ಲ ಜಾಗೃತಗೊಳ್ಳುತ್ತಿರುವ ಸಾಮಾಜಿಕ ಪ್ರಜ್ಞೆಯ ಸಂಕೇತಗಳಾಗಿ ರೂಪುಗೊಂಡಿದ್ದಾರೆ. ಅಂತೆಯೇ 'ಅರಿವು' ಕಥೆಯ ಶ್ರೀಧರ ಒಬ್ಬ ಆದರ್ಶ ಪತ್ನಿಯನ್ನು ಡಾಕ್ಟರಳನ್ನಾಗಿಸುವ ಉದಾರತೆಯನ್ನು ಮೆರೆದು ಕೊನೆಗೆ ವಿದ್ಯಾವತಿಯೆನಿಸಿದ ಪತ್ನಿಯ ಬದಲಾದ ಮನೋಗತಿಯಿಂದ ತನ್ನ ಮುದ್ದಿನ ಮಡದಿಯನ್ನೇ ಕಳೆದುಕೊಳ್ಳುವ ಪ್ರಸಂಗವೇರ್ಪಡುವುದು. ಇಲ್ಲಿ ದಾಂಪತ್ಯದ ಸೂಕ್ಷ್ಮತರವಾದ

ಸಂಬಂಧಗಳು ಪ್ರಗತಿಯ ಹೆಜ್ಜೆಯನ್ನಿಡುವಾಗ ನುಚ್ಚುನೂರಾಗಿಬಿಡುವ ಸಾಧ್ಯತೆಗಳ ಬಗ್ಗೆಯೂ ಲೇಖಕಿ ಕಣ್ಣು ತೆರೆಯಿಸುತ್ತಾರೆ. ಸ್ತ್ರೀಪುರುಷರಾದಿಯಾಗಿ ನಾವೆಲ್ಲ ಅಸಹಾಯರಿಗೆ ತೋರುವ ಕರುಣೆ, ನೀಡುವ ಸಹಾಯಗಳ ಅಂತರ್ಯದಲ್ಲಿ ಅಡಗಿರುವ, ತಿಳಿದೋ ತಿಳಿಯದೆಯೋ ನಮ್ಮ ವ್ಯವಹಾರಗಳಲ್ಲಿ ಬೆಸೆದುಹೋಗಿರುವ ಸ್ವಾರ್ಥಚಿಂತನೆ, ಲಾಭ 'ಹೊಡೆ'ಯುವ ಕೀಳು ಬುದ್ಧಿಗಳ ಅನಾವರಣ ಮಾಡುತ್ತ ನಮ್ಮನ್ನು ನಾವು ಸತ್ಯದ ಒರೆಗಲ್ಲಲ್ಲಿ ಪರೀಕ್ಷಿಸುವಂತೆ ಮಾಡುವ ಗಂಗಾರವರ ಕಥನ ತಂತ್ರ ಅಚ್ಚರಿಹುಟ್ಟಿಸುತ್ತವೆ.

ಇಂದು ನಾವು ಉಳಿಸಿಕೊಳ್ಳಬೇಕಾದ ಪರಂಪರೆಯಾವುದು? ತ್ಯಜಿಸಿ ಅಳಿಸಿ ಹಾಕಬೇಕಾಗಿರುವ ಆಚರಣೆಗಳು ಯಾವುವು? ಅನಿವಾರ್ಯವೆನಿಸುವ, ಹೊಂದಾಣಿಕೆಗಳು ಎಲ್ಲೆಲ್ಲಿ ಅವಶ್ಯವಾಗಿವೆ? ಇವೆಲ್ಲ ಪ್ರಶ್ನೆಗಳ ಚರ್ಚೆಯನ್ನು ಮಾನವೀಯತೆಯ ಆಧಾರದಲ್ಲಿ ಮಂಡಿಸುವ, ಪಾತ್ರ ವರ್ಗಗಳ ಮೂಲಕ ಕಾರ್ಯಗತಗೊಳಿಸುವ, ಸಮಾಜ ಶಿಕ್ಷಣದ ಒಂದು ವಿನೂತನ ಮಾರ್ಗವನ್ನು ಗಂಗಾಪಾಡೇಕಲ್‌ರವರು ತೆರೆದಿದ್ದಾರೆ. ಅವರ ಅಂತಃಕರಣದಿಂದ ಮೂಡಿ ಬರುವ ಪ್ರಾಮಾಣಿಕ ಕಳಕಳಿ, ಅನ್ಯಾಯದ ವಿರುದ್ಧ ಸಿಡಿದೇಳುವ ತೀವ್ರ ಉದ್ವೇಗಗಳು, ಸಂತ್ರಸ್ತರಿಗೆ ನೀಡಬಹುದಾದ ನ್ಯಾಯಪೂರ್ಣ ಪರಿಹಾರಗಳು, ಸಂದಿಗ್ಧ ಪರಿಸ್ಥಿತಿಯಲ್ಲಿ ತೀರ್ಮಾನಗಳ ಶೋಧನೆ, ಇವೆಲ್ಲ ಅವರಲ್ಲಿರುವ ಸಾಮಾಜಿಕ ಪ್ರಜ್ಞೆ ಮತ್ತು ಕೌಟುಂಬಿಕ ಸಂಬಂಧಗಳ ಬಹುಮುಖತೆಯನ್ನರಿವ ತೀಕ್ಷ್ಣ ಗ್ರಹಣಶಕ್ತಿಯ ಪರಿಚಯವನ್ನು ಮಾಡಿಕೊಡುತ್ತವೆ. ಸರ್ವಸಾಮಾನ್ಯ ಜನರಲ್ಲೂ ಅಡಗಿರುವ ಅಸಾಮಾನ್ಯ ವ್ಯಕ್ತಿತ್ವಗಳನ್ನು ಹೊರಗೆಳೆಯುವ, ಅತಿ ಸಾಮಾನ್ಯ ಘಟನೆಗಳಲ್ಲೂ, ರಸವಂತಿಕೆಯನ್ನು ತುಂಬುವ, ವಿಸ್ಮಯಕರ ಸಂಭವಗಳನ್ನು ನೇಯುವ, ಕೌಶಲ್ಯ, ಪ್ರತಿಭೆಗಳು ಗಂಗಾರವರಲ್ಲಿರಕ್ತಗತವಾಗಿರುವುದು ಅವರ ಈ ಕಥಾಗುಚ್ಛಗಳಿಂದ ವ್ಯಕ್ತವಾಗುತ್ತವೆ.

ಇನ್ನು ಭಾಷಾ ದೃಷ್ಟಿಯಿಂದ-ಇವು ಪ್ರಾದೇಶಿಕ ಛಾಯೆಯನ್ನು ಹೊಂದಿದ್ದರೂ ಕಥಾ ನಿರೂಪಣೆಯಲ್ಲಿ ಆಕರ್ಷಣೆ ಇದೆ ಸೊಬಗಿದೆ. ವಿಷಯ ಪ್ರತಿಪಾದನೆಯಲ್ಲಿ ರೋಚಕತೆ ಇದೆ. ವ್ಯಕ್ತಿಗಳ ಸಹಜ ಸ್ವಭಾವದಲ್ಲಿರುವ ದೋಷಮೂಲವನ್ನು ಕೆದಕಿ ತೆಗೆದ ಜಾಣ್ಮೆ ಇದೆ. ಹಾಸ್ಯಲೇಪಿತ ನುಡಿಗಟ್ಟುಗಳೂ ಸಮಯೋಚಿತವಾಗಿ ಮೂಡಿ ಬಂದಿವೆ. ವ್ಯಂಗ್ಯದ ಚಾವಟಿಯೂ ಇದೆ. ಒಟ್ಟಿನಲ್ಲಿ ಸ್ವಾಭಾವಿಕತೆಯ ಚೌಕಟ್ಟಿಗೆ ಧಕ್ಕೆಯಾಗದಂತೆ ನಿರೀಕ್ಷೆಗೂ ಮೀರಿದ ತಿರುವುಗಳಿಂದ, ಕೌತುಕ ಪೂರ್ಣ ಮುಕ್ತಾಯಗಳಿಂದ-ಕಥನ ಕಲೆಯಲ್ಲಿ ಇರಲೇಬೇಕಾದ ವೈಶಿಷ್ಟ್ಯಗಳಿಂದೊಡಗೂಡಿ ಉತ್ತಮ ಕಥಾಸಾಹಿತ್ಯದ ಸಾಲಿಗೆ ಸೇರಲು ಯೋಗ್ಯವೆನಿಸಿದೆ. ಇಲ್ಲಿ ಒಂದು ವಿಚಾರವನ್ನು ತಿಳಿಸುವುದು ಅಗತ್ಯವೆಂದು ತೋರುತ್ತದೆ. ಈ ಪುಸ್ತಕಗಳ ಮುನ್ನುಡಿಕಾರರು, ಪ್ರಕಾಶಕರು ಕೂಡ ಗಂಗಾರವರ ಕಥೆಗಳನ್ನು ಮೆಚ್ಚಿ ಬರೆದಿದ್ದಾರೆ. ಆದರೆ 'ಹೊಸ ಹೆಜ್ಜೆ'ಯ ಬೆನ್ನುಡಿಯಲ್ಲಿ ಡಾ॥ ಶ್ರೀಧರ ಎಚ್. ಜಿಯವರು "'ಸ್ತ್ರೀಪರ ಸಿಲುವಿನ' ಉತ್ತಮ ಕಥೆಗಳು" ಎಂದು


ಅಭಿಪ್ರಾಯ ವ್ಯಕ್ತಪಡಿಸಿರುವುದು ನಿಜಕ್ಕೂ ಸೋಜಿಗವೆನಿಸುತ್ತದೆ. ಸ್ತ್ರೀಯರ ಸುತ್ತು ಹೆಣೆದ ಕಥೆಗಳೆಂಬುವದರಿಂದಲೋ ಇಂಥ ತೀರ್ಮಾನ? ಅಥವಾ ಸ್ತ್ರೀ ಪರವಾಗಿಯೇ ನ್ಯಾಯ ನೀಡುವ ಕಥೆಗಳಿವೆಯೆಂದೋ? ಶ್ರೀಯುತರು ಇಂಥ ವಿಚಾರಗಳಿಗಾಗಿ ಈ ಸ್ತ್ರೀಪರಚಿಂತನೆ ಎಂಬ ಆರೋಪವನ್ನು ಮಾಡುತ್ತಿರುವರೆಂದಿದ್ದಲ್ಲಿ ಅದು ಅವರು ಕಥೆಗಳನ್ನು ಸರಿಯಾಗಿ ಓದಿ ನೋಡಿಲ್ಲವೆಂಬ ಸಂಶಯಕ್ಕೆ ಎಡೆಮಾಡಿ ಕೊಡುತ್ತದೆ. ಏಕೆಂದರೆ ಗಂಗಾರವರು ಸಮಾಜದಲ್ಲಿ ನಡೆವ ಶೋಷಣೆ ಅನ್ಯಾಯಗಳಿಗೆ ಸ್ತ್ರೀ ಪುರುಷರಿಬ್ಬರೂ ಕಾರಣರು ಎಂಬ ನಿಲುವುಳ್ಳವರೆಂಬುದು ಸ್ಪಷ್ಟವಾಗಿ ಅವರ ಕಥೆಗಳಲ್ಲಿ ಕಂಡು ಬರುತ್ತದೆ. ಗಂಗಾಪಾದೇಕಲ್‌ರವರು 'ಶೋಷಿತರ ಪರ'ವೆಂದು, ಪ್ರಜ್ಞಾವಂತ ಲೇಖಕಿಯೆಂದು ನಿಷ್ಪಕ್ಷಪಾತ ನಿಲುವಿನ ಜನಪರ ಲೇಖಕಿಯೆಂದು, ಹಲವರು ಅಭಿಪ್ರಾಯ ವ್ಯಕ್ತಪಡಿಸಿರುವುದು ನಿಜ. ಅವರಲ್ಲಿ ಹೊಸ ಹೆಜ್ಜೆಯ ಮುನ್ನುಡಿಕಾರ್ತಿ, ಶ್ರೀಮತಿ ಡಾ|| ವಿಜಯಾದಬ್ಬೆಯವರು ಒಬ್ಬರು. ಗಂಗಾರವರನ್ನು 'ಪ್ರಗತಿಪರ ಲೇಖಕಿ' ಎಂದವರು 'ವಾಸ್ತವ' ಕಥಾ ಸಂಕಲನದ ಪ್ರಕಾಶಕಿ, ಹುಬ್ಬಳ್ಳಿಯ ಸು. ಶ್ರೀ. ಹನುಮಾಕ್ಷಿ ಗೋಗಿಯವರು.

ಇಂಥ ಕಥಾಗುಚ್ಛಗಳನ್ನು ಕನ್ನಡಿಗರ ಕೈಗಿತ್ತ ಪ್ರಕಾಶಕರಿಗೂ ಶ್ರೀಮತಿ ಗಂಗಾರವರಿಗೂ ಹಾರ್ದಿಕ ಅಭಿನಂದನೆಗಳು.

ಸರಸ್ವತಿ ಬಡೆಕ್ಕಿಲ
C/o ಬಿ. ಸುರೇಶಭಟ್
ಎಂ. ೪೭, ೩ನೇ ಹಂತ, ಜೆ.ಟಿ.ಕೆ. ಬಡಾವಣೆ,
ಕುವೆಂಪು ನಗರ, ಮೈಸೂರು-೫೭೦ ೦೨೩

"ಸ್ವಾತಂತ್ರ್ಯವೆಂಬುದು ಯಾರೂ ಕೊಡುವಂಥ ಸರಕಲ್ಲ! ಅದು ನಾವು ಪಡೆದು ಕೊಳ್ಳಬೇಕಾದುದ್ದು."

"ನೀವು ನಿಮ್ಮ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ತಂದುಕೊಡುತ್ತೇನೆ"



(ಸುಭಾಷ್‌ಚಂದ್ರ ಬೋಸ್ ಅವರ ಸಹಿ)

ಓದುಗರ ಅನಿಸಿಕೆಗಳು

ಮಾನ್ಯರೆ,

ನೂರು ತುಂಬಿದ ನಾ. ಕಸ್ತೂರಿಯವರನ್ನು ಕೇಂದ್ರ ಬಿಂದುವಾಗಿ ಮಾಡಿ ತಂದಿರುವ ಈ ತಿಂಗಳ (ಫೆಬ್ರುವರಿ ೯೭) ಪುಸ್ತಕ ಪ್ರಪಂಚ ಸ್ತುತ್ಯಾರ್ಹ. ಡಾ|| ದೇಜಗೌ ಹಾಗೂ ಶ್ರೀ ಚಂದ್ರಶೇಖರಾರಾಧ್ಯ ಅವರ ಲೇಖನಗಳು ಕಸ್ತೂರಿ ಅವರ ವಿದ್ವತ್ತು, ನಡತೆ, ತಿಳಿಹಾಸ್ಯ, ನಾನಾ ಭಾಷೆಗಳ ಮೇಲೆ ಅವರಿಗಿದ್ದ ಪ್ರಭುತ್ವ, ಸತ್ಯಸಾಯಿಬಾಬಾರಲ್ಲಿ ಅವರಿಗಿದ್ದ ಅಚಲಭಕ್ತಿ ಎಲ್ಲವೂ ಪ್ರತಿಬಿಂಬಿಸುತ್ತವೆ. ವಯಸ್ಕರ ಶಿಕ್ಷಣದಲ್ಲಿ ಅವರಿಗಿದ್ದ ಕಾಳಜಿ ಅನುಕರಣೀಯ. ಕೇರಳದಿಂದ ಕನ್ನಡನಾಡಿಗೆ ಬಂದು ನಾಡುನುಡಿಗೆ ಸೇವೆಸಲ್ಲಿಸಿದ ಅವರು ಪ್ರಾತಃ ಸ್ಮರಣೀಯರು. ಅವರ 'ಅನರ್ಥಕೋಶ' ಕನ್ನಡದಲ್ಲಿ ಒಂದು ಅಸದೃಶ ಕೃತಿ.

ಎಚ್. ಆರ್. ಚಂದ್ರವದನರಾವ್
ಮೈಸೂರು–೫೭೦ ೦೦೪

* * * * *

ಮಾನ್ಯರೆ,

ನಾ. ಕಸ್ತೂರಿ ಅವರು ಮೂರ್ನಾಲ್ಕು ಭಾಷೆಗಳನ್ನು ಬಲ್ಲ ಪಂಡಿತರು. ಅನರ್ಥಕೋಶದಂತಹ ಕನ್ನಡದ ಸೃಷ್ಟಿಕರ್ತರು. ಆಕಾಶವಾಣಿ ಪದದ ಜನಕರು. ಸಮಾಜ ಕಾರ್ಯಕರ್ತರು. ಪ್ರಸಿದ್ಧ ವಿಡಂಬನಕಾರರು, ನಾಟಕ ಕರ್ತೃ, ಆದರ್ಶ ಅಧ್ಯಾಪಕರು. ಇದೆಲ್ಲವೂ ಆಗಿದ್ದುದು ನನ್ನ ಅರಿವಿಗೆ ಬಂದಷ್ಟು ತಿಳಿದುಕೊಂಡಿದ್ದೆ. ಆದರೆ ಅವರೊಬ್ಬ ಈ ಪ್ರಮಾಣದ ವಯಸ್ಕರ ಶಿಕ್ಷಣ ಕಾರ್ಯಕರ್ತ ಎಂಬುದು ತಿಳಿದಿರಲಿಲ್ಲ. ಶ್ರೀ ಚಂದ್ರಶೇಖರಾರಾಧ್ಯ ಅವರು ಈ ನನ್ನ ಕೊರತೆಯನ್ನು ತುಂಬಿಕೊಟ್ಟಿದ್ದಾರೆ. ತಮ್ಮ ಲೇಖನದಲ್ಲಿ ಹೇಳಿರುವಂತೆ 'ನಿಜವಾದ ವಯಸ್ಕರ ಶಿಕ್ಷಣ ಕಾರ್ಯಕರ್ತನಾಗಿ ಜನರ ಹತ್ತಿರ ಹೋಗಿ, ಅವರನ್ನು ಪ್ರೀತಿಸಿ, ಅವರಲ್ಲಿ ಕಲೆತು, ಬೆರೆತು ಅವರಿಂದ ಕಲಿತು ಅನಂತರ ಅವರಿಗೆ ಕಲಿಸುವ ಕಾಯಕದಲ್ಲಿ ತೃಪ್ತಿ ಕಂಡವರು ಕಸ್ತೂರಿ.' ನವರಾತ್ರಿ ಕೆಂಪ ಮೈಸೂರಿಗೆ ಹೋದದ್ದು ಎಂಬ ಪುಟ್ಟ ಕೃತಿಯಲ್ಲಿ ವಯಸ್ಕರ ಶಿಕ್ಷಣದ ಆಧ್ಯತೆಯನ್ನು ಗುರಿತಿಸಿದ್ದು. ಇದರ ವಿಶ್ಲೇಷಣೆಯು ಲೇಖನದಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿದೆ.

ಡಾ|| ನಾರಾಯಣರೆಡ್ಡಿ
ಬಳ್ಳಾರಿ

Statement of ownership and other particulars about the monthly periodical **"PUSTAKA PRAPANCHA"** as required to be published under rule 8 of the Registration of Newspapers (Central) Rules 1956.

FORM IV

Place of Publication	— Karnataka State Adult Education Council. 5/1 Vinoba Road, Manasagangothri, Mysore-6
Periodicity	— Monthly
Printer's Name	— Sri M. Krishnappa
Nationality & Address	— Indian Karnataka State Adult Education Council Printing Press 5/1 Vinoba Road, Manasagangothri, Mysore-6
Publisher's Name & Address	— Dr. H. M. Nagaraju General Secretary Karnataka State Adult Education Council 5/1 Vinoba Road, Manasagangothri, Mysore-6
Nationality	— Indian
Editor's Name	— Sri Chandrashekhararadhya
Nationality	— Indian
Address	— Karnataka State Adult Education Council 5/1 Vinoba Road, Manasagangothri, Mysore-6

I, the General Secretary hereby declare that the particulars given above are true to the best of my knowledge and belief.

H. M. Nagaraju
General Secretary
KARNATAKA STATE ADULT EDUCATION COUNCIL
MYSORE

1 March 1997

Reg. No. KRNN.29 / WPP 6

LICENCE No. 21
LICENCED TO POST WITH PAYMENT



Edited by Chandrashekhararadhya, Printed by M. Krishnappa
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone: 512485